# ಬೃಂದಾವನ ವಾಣಿ

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ    ಸಂಚಿಕೆ ೩೪, ಜೂನ್ ೨೦೨೧**



KARNATAKA CULTURAL ORGANIZATION BRINDAVANA (KCOB) NJ, USA

ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

ಪ್ರಿಯ ಓದುಗರಿಗೆ,

**ಬೃಂದಾವನ ವಾಣಿಯ ಸ್ವಾಗತ!**

ಅಬ್ಬಾ...ಹಿಮ ಕರಗಿ, ಮಳೆಬಿದ್ದು, ಗಿಡಮರಗಳು ಚಿಗುರಿ, ಬಹುನಿರೀಕ್ಷಿತ ಬೇಸಿಗೆ ಕಡೆಗೂ ಬಂದೇ ಬಂತು. ಎತ್ತ ನೋಡಿದರೂ ಕಣ್ಮನ ತಣಿಸುವಷ್ಟು ಹಚ್ಚ ಹಸಿರು. ಈತನ್ಮಧ್ಯೆ ಆಲಿಕಲ್ಲಿನ ಮಳೆ ಬೇರೆ ಬಂದು ತನ್ನ ಅಸ್ತಿತ್ವವನ್ನು ಪ್ರದರ್ಶಿಸಿ ಹೋಯಿತು.

ಬೇಸಿಗೆ ಕಾಲಿಡುತ್ತಿದ್ದಂತೆ, ಕೋವಿಡ್ ನಮ್ಮನ್ನು ಬಿಟ್ಟು ಆಮೆಯ ಗತಿಯಲ್ಲಿ ದೂರ ಸಾಗುತ್ತಿರುವುದನ್ನು ನೋಡಿದರೆ ನಾಳೆಗಳು ಆಶಾದಾಯಕವಾಗಿ ಕಾಣುತ್ತಿವೆ. ಹದಿನೆಂಟು ತಿಂಗಳ ಸತತ ಹೋರಾಟದ ಫಲ ನಮಗೀಗ ದೊರಕಿದೆ. ಇನ್ನೂ ನಾವು ಕರೋನಾ ಮುಕ್ತರಾಗದಿದ್ದರೂ, ವಿಜ್ಞಾನಿಗಳ ಪರಿಶ್ರಮ, ಜನರ ಸಹಕಾರ, ತಕ್ಕ ಮಟ್ಟಿಗೆ ನಡೆದ ಕೇಂದ್ರ ಮತ್ತು ರಾಜ್ಯಗಳ ಆಡಳಿತ ವ್ಯವಸ್ಥೆಯಿಂದ ಶೇಕಡ ೬೦ರಷ್ಟು ಜನರಿಗೆ ಲಸಿಕೆ ಒದಗಿಸಿ, ಮೇ ತಿಂಗಳ 28ನೇ ತಾರೀಖು ನ್ಯೂ ಜೆರ್ಸಿ ಸರಕಾರವು ಕೋವಿಡ್ ನಿರ್ಬಂಧಗಳನ್ನು ತೆಗೆದುಹಾಕಿರುವುದನ್ನು ಅಧಿಕೃತವಾಗಿ ಘೋಷಿಸಿದಾಗ ಎಲ್ಲರೂ ನೆಮ್ಮದಿಯ ಉಸಿರು ಬಿಡುವಂತಾಯಿತು. ಆದರೆ ಕೋವಿಡ್‌ಗೆ ಪೂರ್ಣವಿರಾಮ ಹಾಕಲು ಇನ್ನೂ ಸ್ವಲ್ಪ ದಿನಗಳು ಕಾಯಲೇಬೇಕಾಗಿರುವ ಅನಿವಾರ್ಯತೆಯಲ್ಲಿ ನಾವಿದ್ದೇವೆ. ಅಧಿಕೃತ ನಿರ್ಬಂಧಗಳು ಅದೇನೇ ಇರಲಿ, ನಮ್ಮ ಸಾಮಾಜಿಕ ಜವಾಬ್ದಾರಿಯನ್ನು ನಾವೆಲ್ಲರೂ ನಿಭಾಯಿಸಬೇಕಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಇನ್ನು ನಮ್ಮ ಮಾತೃಭೂಮಿ ಭಾರತ ಕೋವಿಡ್ ಎರಡನೆಯ ಅಲೆಯ ಹೊಡೆತಕ್ಕೆ ಸಿಕ್ಕಿರುವು ನಿಜಕ್ಕೂ ಶೋಚನೀಯ. ಭಾರತ ಈಗ ಎದುರಿಸುತ್ತಿರುವ ಸವಾಲುಗಳಿಂದ ಆದಷ್ಟೂ ಬೇಗ ಮುಕ್ತವಾಗಿ ನಮ್ಮ ಬಂಧು ಬಾಂಧವರು, ಸ್ನೇಹಿತರು ಆದಷ್ಟು ಬೇಗ ನೆಮ್ಮದಿಯ ಉಸಿರು ಬಿಡುವಂತಾಗಲಿ, ನಾವು ನಮ್ಮ ಕುಟುಂಬಗಳನ್ನು ನೋಡಲು, ಭಾರತಕ್ಕೆ ಭೇಟಿ ನೀಡಲು ಉದ್ವೇಗವಿಲ್ಲದ ದಿನಗಳು ಆದಷ್ಟು ಬೇಗ ಬರಲಿ ಎಂದು ಹಾರೈಸೋಣ. ಅಲ್ಲಿಯವರೆಗೆ ನಮ್ಮ ನಮ್ಮ ನಾಗರೀಕ ಪ್ರಜ್ಞೆಯಲ್ಲಿ ಜಾಗೃತರಾಗಿದ್ದು, ಆರೋಗ್ಯಕರ ಸಮಾಜ ಮತ್ತು ಸಮುದಾಯದ ಬಗ್ಗೆ ಎಚ್ಚರಿಕೆ ವಹಿಸೋಣ. ನಮ್ಮನ್ನು ನಾವು ಕಾಪಾಡಿಕೊಂಡು, ಸಮಾಜವನ್ನೂ ಆರೋಗ್ಯವಾಗಿಡುವ ಕಡೆ ಗಮನ ಹರಿಸೋಣ.


ಬೃಂದಾವನ ವಾಣಿ ನಿಮಗಾಗಿ ಅನೇಕ ಆಸಕ್ತಿದಾಯಕ ಲೇಖನಗಳನ್ನು ಹೊತ್ತು ತರುತ್ತಿದೆ. ನೀವೆಲ್ಲರೂ ಓದಿ ನಿಮ್ಮ ಅನಿಸಿಕೆಗಳನ್ನು ತಿಳಿಸುವಿರೆಂದು ಆಶಿಸುವ,

***ನಿಮ್ಮ,***
***ಬೃಂದಾವನ ವಾಣಿ ಸಂಪಾದಕ ತಂಡ***

ಲೇಖಕರ ಗಮನಕ್ಕೆ...
ಪ್ರತಿ ಸಂಚಿಕೆಗೂ ತಪ್ಪದೇ ಬರಹಗಳನ್ನು ಕಳುಹಿಸುವ
ಲೇಖಕರನ್ನು ಗುರುತಿಸಲಾಗುವುದು!

**ಸಂಪಾದಕ ಮಂಡಳಿ:**

**ಶ್ರೀವಿದ್ಯಾ ಪ್ರಶಾಂತ್, ಲಕ್ಷ್ಮಿ ಕೊಲಾಲ್, ಜ್ಯೋತಿ ಚಂದ್ರ, ಸತ್ಯ, ನರಸಿಂಹ ಮೂರ್ತಿ, ವಿದ್ಯಾ ಮೂರ್ತಿ, ಶೈಲಾ ಪಾಟಂಕರ್**



**ಪ್ರಕಾಶಕರು:**

ಬೃಂದಾವನ ಕನ್ನಡ ಸಂಘ

501(3)(c) ಪಡೆದ ಚಾರಿಟಿ ಸಂಸ್ಥೆ

Karnataka Cultural Organization (KCO) Brindavana
New Jersy, USA

www.Brindavana.org

© 2021 All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು

ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಗೆ ಭೇಟಿ ಕೊಟ್ಟು, ನಿಮ್ಮ ವಿವರಗಳನ್ನು ನೀಡಿ, ಸದಸ್ಯತ್ವ ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org



ಬೃಂದಾವನ ವನವಿಹಾರ
ಆಟ, ಊಟ ಮತ್ತು ಗೆಳೆಯರೊಡನೆ ಒಡನಾಟ
ದಿನವಿಡೀ ಆಟ, ಕ್ರಿಕೆಟ್ ಮನೋರಂಜನೆ, ಸ್ವಾದಿಷ್ಟ ಭೋಜನ...ಇತ್ಯಾದಿ
Saturday, July 10, 2021, 11:00 am onwards
Mercer West Picnic Area lot 2, Paxson Ave,
West Windsor Township, NJ 08550
Please RSVP before June 25, 2021
@ www.brindavana.org

# ಈ ಸಂಚಿಕೆಯಲ್ಲಿ


ಸಂಪಾದಕೀಯ...೨

ವನವಿಹಾರ...೪

ಅಧ್ಯಕ್ಷರ ನುಡಿ...೬

ದಾರಿ ದೀಪ ...೭

ಅಳಿಲು ಸೇವೆ...೮

ಜ್ಞಾನ ಜ್ಯೋತಿ...೯

ಬೃಂದಾವನದಲಿ ...೧೦

ಭಾವ ಭಾಷ್ಪಾಂಜಲಿ...೧೩

ನುಡಿ ನಮನ ...೧೫

ಈ ಹೊತ್ತಿನ ತತ್ವ ...೧೭

ಇದುವೇ ಜೀವನ...೧೯

ನಮ್ಮ ನಾಟಕ...೨೧

ಕಥಾ ಚಿಂತನ ಮಾಲಿಕೆ - ೩...೨೪

ಪ್ರವಾಸ ಕಥನ... ೨೫

ಅರಿವಿನ ಸೊಗಡು..... ೨೮

ತಿನಿಸು..ಒಗಟು... ೩೧

ಕವಿ ಕಾವ್ಯ ವಿಚಾರ - ೧ ...೩೨

ವೈರಾಣು...೩೪

ನಮ್ಮೂರು ಬೆಂಗ್ಳೂರು...೩೫

ದಾಸನ ಮಾಡಿಕೊ ಎನ್ನ...೩೭

ಬನ್ನಿ ಸಾಧನಕೇರಿಗೆ...೩೯

ಹಸಿರೇ ಉಸಿರು...೪೧

ಕವಿ ಕಗ್ಗ ವಿಚಾರ - ೧...೪೨

ಷೋಡಶೋಪಚಾರ ವಿಚಾರ...೪೪

ಭಾವ ಲಹರಿ...೪೬

ಅಪ್ಪ ಐ ಲವ್ ಯೂ...೪೮

ರುಚಿ..ಅಭಿರುಚಿ...೫೩

ಚಿಣ್ಣರ ಕನ್ನಡ...೫೭

ಕುಂಚದಿಂದ...೫೯

ಕ್ಯಾಮರಾ ಕಣ್ಣು...೬೪


ಮೇಲಿನ ಪುಟಗಳಿಗೆ ನೇರವಾಗಿ ಹೋಗಲು, ಆಯಾ ಶೀರ್ಷಿಕೆಗಳನ್ನು ಕ್ಲಿಕ್ ಮಾಡಿ!

ಮುಖಪುಟದ ಚಿತ್ರ ಕೃಪೆ: ಶ್ರೀಮತಿ ಶ್ರೀವಿದ್ಯಾ ಪ್ರಶಾಂತ್



**ಆತ್ಮೀಯ ಸ್ನೇಹಿತರೇ,**

ನಮಸ್ಕಾರ, ಬೇಸಿಗೆಯ ಬೆಚ್ಚನೆಯ ಹವಾಮಾನವನ್ನು ಉತ್ಸಾಹದಿಂದ ಸ್ವಾಗತಿಸುತ್ತಿದ್ದಂತೆ ನಮ್ಮ ಸುತ್ತಲೂ ಸಕಾರಾತ್ಮಕತೆಯನ್ನು ಕಾಣುತ್ತಿದ್ದೇವೆ. ಮತ್ತೆ ನಮ್ಮ ಸ್ಥಳೀಯ ಕಡಲತೀರಗಳಿಗೆ ಭೇಟಿ, ಹೈಕಿಂಗ್, ರನ್ನಿಂಗ್ ಮತ್ತು ಇತರ ಹೊರಾಂಗಣ ಚಟುವಟಿಕೆಗಳನ್ನು ಮಾಡಬಹುದಾಗಿರುವುದು ಬಹಳ ಆಶಾದಾಯಕವಾಗಿದೆ. ಇನ್ನೂ ಕರೋನಾ ವೈರಸ್ ವಿರುದ್ಧ ವಿಜಯವನ್ನು ಘೋಷಿಸಲಾಗದಿದ್ದರೂ, ಎಲ್ಲರೂ ಲಸಿಕೆಯನ್ನು ತೆಗೆದುಕೊಳ್ಳುವಂತೆ ಉತ್ತೇಜಿಸಿ, 60% ಕ್ಕೂ ಹೆಚ್ಚು ಜನರು ಲಸಿಕೆ ತೆಗೆದುಕೊಳ್ಳುವ ಅವಕಾಶ ಒದಗಿಸಿದ ನ್ಯೂ ಜೆರ್ಸಿಯ ಆಡಳಿತದ ದಕ್ಷತೆಯನ್ನು ನಾವೆಲ್ಲರೂ ಪ್ರಶಂಸಿಸಲೇಬೇಕು.

ಏಪ್ರಿಲ್ ತಿಂಗಳಲ್ಲಿ ನಡೆದ ಮೂರು ದಿನಗಳ ಬೃಂದಾವನ ವಸಂತೋತ್ಸವ ಭಾರಿ ಯಶಸ್ಸನ್ನು ಕಂಡಿತು. ಮೊದಲನೆಯ ದಿನ ಸುಮಧುರವಾದ ಸಂಗೀತ ಸಂಜೆಯ ರಸದೌತಣ ಎಲ್ಲರ ಮೆಚ್ಚುಗೆ ಪಡೆಯಿತು. ಎರಡನೆಯ ದಿನದ ಅಡ್ಯಾರ್ ಆನಂದ ಭವನದ ಹಬ್ಬದೌತಣವನ್ನು ಎಲ್ಲರೂ ಸಂತೋಷದಿಂದ ಸವಿದೆವು. ಅಡ್ಯಾರ್ ಆನಂದ ಭವನದ, ಹಬ್ಬದೂಟದ ವಿತರಣೆಯ ನೆಪದಲ್ಲಿ ನನಗೆ ಮತ್ತು ನಮ್ಮ ನಿರ್ದೇಶಕರಿಗೆ ನಮ್ಮ ಬೃಂದಾವನದ ಹಲವಾರು ಸದಸ್ಯರನ್ನು ಭೇಟಿ ಮಾಡುವ ಒಂದು ಸಣ್ಣ ಅವಕಾಶವನ್ನು ದೊರಕಿತು. ಮೂರನೆಯ ದಿನ, ಶ್ರೀ ಯೋಗೀಂದ್ರ ಭಟ್ ಉಳಿ ಅವರ ಆಶೀರ್ವಚನ ಮತ್ತು ಸಾಂಪ್ರದಾಯಿಕ ಪಂಚಾಂಗ ಶ್ರವಣದಿಂದ ಆರಂಭವಾಯಿತು. ಶ್ರೀಮತಿ. ತೇಜಸ್ವಿನಿಯವರ ಹೊಸ ವರ್ಷದ ಸಂದೇಶ ಎಲ್ಲರ ಮೆಚ್ಚುಗೆ ಪಡೆಯಿತು. ಪ್ರತಿ ಕಾರ್ಯಕ್ರಮದಲ್ಲಿ ಬೃಂದಾವನವು ಸಹಾಯದ ಅಗತ್ಯವಿರುವ ಒಂದು ಸಂಸ್ಥೆಯನ್ನು ಗುರುತಿಸಿ, ಅದಕ್ಕೆ ಕೈಲಾದ ಸಹಾಯ ಮಾಡುವ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದಿರುವುದು ಎಲ್ಲರಿಗೂ ತಿಳಿದ ವಿಷಯ. ಈ ಸಾಲಿನಲ್ಲಿ ಬೃಂದಾವನ ಆಯ್ಕೆಮಾಡಿದ್ದು, ಭೌತಿಕ ಮತ್ತು ಮಾನಸಿಕವಾಗಿ ಅಶಕ್ತರಿಗಾಗಿ ದುಡಿಯುತ್ತಿರುವ ಚಿರಂತನ ಎಂಬ ಸಂಸ್ಥೆಯನ್ನು.

ನಂತರ ಮೂಡಿಬಂದ ಬೃಂದಾವನದ ಸದಸ್ಯರು ಮತ್ತು ಬೃಂದಾವನದ ಪುಟಾಣಿಗಳ ಮನರಂಜನಾ ಕಾರ್ಯಕ್ರಮಗಳು ನಿಜವಾಗಿಯೂ ಬಹಳ ಭವ್ಯವಾಗಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿಯೊಬ್ಬರಿಗೂ ನನ್ನ ಹೃತ್ಪೂರ್ವಕ ಧನ್ಯವಾದಗಳು. ಹೀಗೆಯೇ ಮುಂದಿನ ಎಲ್ಲ ಕಾರ್ಯಕ್ರಮಗಳಲ್ಲಿ ಇನ್ನೂ ಹೆಚ್ಚು ಹೆಚ್ಚು ಸದಸ್ಯರು ಪಾಲ್ಗೊಂಡು ಎಲ್ಲ ಕಾರ್ಯಕ್ರಮಗಳನ್ನೂ ಯಶಸ್ವಿಗೊಳಿಸಲಿ ಎಂದು ಆಶಿಸುತ್ತೇನೆ. ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನಡೆಸಲು ಮುಂದೆ ಬಂದ ಎಲ್ಲ ಪ್ರಾಯೋಜಕರಿಗೂ ನನ್ನ ಮನದಾಳದ ಧನ್ಯವಾದಗಳು.

ಉತ್ತರ ಅಮೆರಿಕಾದಲ್ಲಿ ಜನ ಜೀವನ ಮತ್ತೆ ಮೊದಲಿನಂತಾಗುತ್ತಿದ್ದಂತೆ, ನಮ್ಮ ಮಾತೃಭೂಮಿ ಭಾರತವು ಎರಡನೇ ಅಲೆಯ ಕೋವಿಡ್‌ನಿಂದ ಸಂಕಟದಲ್ಲಿದೆ. ಜೀವಹಾನಿ, ಧನಹಾನಿ ನಮ್ಮ ಕಲ್ಪನೆಗೂ ಮೀರಿ ಆಗಿರುವುದನ್ನು ನಾವೆಲ್ಲರೂ ದೂರದರ್ಶನದಲ್ಲಿ ನೋಡಿದ್ದೇವೆ. ಇಂತಹ ಸಂಕಟದ ಸಮಯದಲ್ಲಿ ಭಾರತದಲ್ಲಿನ ನಮ್ಮ ಬಂಧು-ಬಾಂಧವರಿಗೆ ಸಹಾಯ ಹಸ್ತ ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಇದನ್ನು ಗಮನದಲ್ಲಿಟ್ಟುಕೊಂಡ ನಮ್ಮ ಪ್ರಗತಿ ತಂಡವು ಸಮಯವನ್ನು ಸ್ವಲ್ಪವೂ ವ್ಯರ್ಥ ಮಾಡದೆ, ಅತಿ ಕಡಿಮೆ ಸಮಯದಲ್ಲಿ ಗುರಿಯಿಟ್ಟುಕೊಂಡ ಹಣವನ್ನು ಸಂಗ್ರಹಿಸಿ, ವಾಸವೀ ಟ್ರಸ್ಟ್ ಮತ್ತು ರಾಷ್ಟ್ರೋತ್ಥಾನ ಪರಿಷತ್ ಮೂಲಕ ಆಮ್ಲಜನಕ ಸಾಂದ್ರಕಗಳು ಮತ್ತು ಇತರ ವೈದ್ಯಕೀಯ ಸಾಮಗ್ರಿಗಳಿಗಾಗಿ ದಾನ ಮಾಡಿ ತನ್ನ ಮಾನವೀಯತೆಯನ್ನು ಮೆರೆಯಿತು ಎಂದು ತಿಳಿಸಲು ಸಂತಸವಾಗುತ್ತದೆ. ಧನ ಸಹಾಯವನ್ನು ಮಾಡಿದ ಎಲ್ಲ ಸಹೃದಯರಿಗೂ ನನ್ನ ಧನ್ಯವಾದಗಳು. ನಮ್ಮ ಭಾರತ ದೇಶವು ಇಂತಹ ಪರಿಸ್ಥಿತಿಯಿಂದ ಶೀಘ್ರವಾಗಿ ಚೇತರಿಸಿಕೊಂಡು, ಜನಜೀವನ ಸಹಜ ಸ್ಥಿತಿಗೆ ಮರಳಿಬರಲಿ ಎಂದು ದೇವರಲ್ಲಿ ನಾವೆಲ್ಲರೂ ಪ್ರಾರ್ಥಿಸೋಣ.

ಬೇಸಿಗೆಯ ದಿನಗಳಲ್ಲಿ ಹೊರಾಂಗಣ ಚಟುವಟಿಕೆಗಳು ಯಾರಿಗೆ ತಾನೇ ಬೇಡ? ಸುಂದರವಾದ ಮರ್ಸರ್ ಕೌಂಟಿ ಪಾರ್ಕ್ ನಲ್ಲಿ ಜುಲೈ 10 ರಂದು ನಮ್ಮ ಮೊದಲ ಹೊರಾಂಗಣ ಕಾರ್ಯಕ್ರಮವಾದ ಉದ್ಯಾನ ವಿಹಾರಕ್ಕೆ(Picnic) ನಿಮ್ಮೆಲ್ಲರನ್ನೂ ಸ್ವಾಗತಿಸಲು ಪ್ರಗತಿ ತಂಡ ಕಾತರದಿಂದ ಕಾಯುತ್ತಿದೆ. ಅಲ್ಲಿಯವರೆಗೆ, ಎಲ್ಲರೂ ಸುರಕ್ಷಿತವಾಗಿದ್ದು, ಬೆಚ್ಚನೆಯ ಹವಾಮಾನವನ್ನು ಆನಂದಿಸಿ ಮತ್ತು ನಮ್ಮ ಮಾತೃಭೂಮಿಗಾಗಿ ಪ್ರಾರ್ಥಿಸುವುದನ್ನು ಮುಂದುವರೆಸಿ.

**ನಿಮ್ಮ,**
**ಪದ್ಮಿನಿ ಹೇಮಂತ್**



# ದಧೀಚಿ ಮತ್ತು ಕರೋನ ಕಥೆಗಳು



**ನರಸಿಂಹ ಮೂರ್ತಿ** ನ್ಯೂ ಜರ್ಸಿ

ವೃತಾಸುರ ದೇವತೆಗಳನ್ನು ದ್ವೇಷಿಸುತ್ತಲೇ ಬೆಳೆದವನು. ತನ್ನ ಅಣ್ಣನಾದ ವಿಶ್ವರೂಪನನ್ನು ಸಂಹರಿಸಿದ ದೇವೇಂದ್ರನ ಮೇಲೆ ಈ ದ್ವೇಷ ಇನ್ನೂ ಸ್ವಲ್ಪ ಹೆಚ್ಚು. ಅಸುರರ ಸೈನ್ಯದೊಂದಿಗೆ ವೃತಾಸುರ ದೇವಲೋಕದ ಮೇಲೆ ಧಾಳಿ ಮಾಡಿದ. ಇವರ ಧಾಳಿಯನ್ನು ಸಮರ್ಥವಾಗಿ ಎದುರಿಸಲಾಗದೆ ಇಂದ್ರ ಮತ್ತು ಇತರ ದೇವತೆಗಳು ದಿಕ್ಕಾಪಾಲಾಗಿ ಓಡಿದರು. ದೇವಲೋಕ ವೃತಾಸುರನ ಪಾಲಾಯಿತು. ದೇವತೆಗಳು ಚಿಂತಿತರಾಗಿ ಬ್ರಹ್ಮನ ಮೊರೆ ಹೋದರು. ತನ್ನ ಬಳಿ ಈ ಸಮಸ್ಯೆಗೆ ಪರಿಹಾರವಿಲ್ಲವೆಂದ ಬ್ರಹ್ಮ, ದೇವತೆಗಳನ್ನು ವಿಷ್ಣುವಿನ ಬಳಿ ಕಳುಹಿಸಿದ. ಸಮಸ್ಯೆ ಆಲಿಸಿದ ವಿಷ್ಣು ಹೇಳಿದ, "ಮಹರ್ಷಿ ದಧೀಚಿ ಬಳಿ ಹೋಗಿ. ಅವರ ಬೆನ್ನು ಮೂಳೆ ಪಡೆದುಕೊಳ್ಳಿ. ಬೆನ್ನು ಮೂಳೆಯನ್ನು ವಿಶ್ವಕರ್ಮನಿಗೆ ಕೊಟ್ಟು, ಅದರಿಂದ ಆಯುಧಗಳನ್ನು ಮಾಡಿಸಿಕೊಳ್ಳಿ. ಈ ಆಯುಧಗಳಿಂದ ನೀವು ಅಸುರ ಸೈನ್ಯವನ್ನು ಮಣಿಸಬಹುದು".

ದೇವ ಗಣದೊಂದಿಗೆ ಇಂದ್ರ, ಸರಸ್ವತಿ ನದಿ ತೀರದಲ್ಲಿದ್ದ ಮಹರ್ಷಿ ದಧೀಚಿಯ ಆಶ್ರಮಕ್ಕೆ ಬಂದ. ಆಶ್ರಮಕ್ಕೆ ಆಗಮಿಸಿದ ದೇವತಾ ಸಮೂಹವನ್ನು ಮಹರ್ಷಿ ದಧೀಚಿ ವಿನೀತ ಭಾವದಿಂದ ಸ್ವಾಗತಿಸಿ, ಉಪಚರಿಸಿದರು. ದೇವತೆಗಳು ತಮಗೆ ವೃತಾಸುರ ಮತ್ತು ಅವನ ಸಂಗಡಿಗರಿಂದ ಎದುರಾಗಿರುವ ವಿಪತ್ತನ್ನು ವಿವರಿಸಿದರು. ಜೊತೆಗೆ, ವಿಷ್ಣು ಸೂಚಿಸಿದ ಪರಿಹಾರವನ್ನೂ ದಧೀಚಿಗೆ ತಿಳಿಸಿದರು. ವಿನಮ್ರರಾಗಿ ಮಹರ್ಷಿ ದಧೀಚಿಯ ಬೆನ್ನೆಲುಬು ಬೇಕೆಂದು ಬೇಡಿಕೆ ಇಟ್ಟರು. ಬೇಡಿಕೆ ಕೇಳಿದ ದಧೀಚಿ, ಸ್ವಲ್ಪವೂ ವಿಚಲಿತರಾಗದೆ ನುಡಿದರು, "ಆಯಿತು. ಈ ದೇಹ ಎಂದಾದರೂ ಮಣ್ಣು ಸೇರಲೇಬೇಕು. ಇದರ ಒಂದು ಭಾಗದಿಂದ ಲೋಕ ಕಲ್ಯಾಣವಾಗುವುದಾದರೆ ಅದಕ್ಕಿಂತ ಪುಣ್ಯ ಕಾರ್ಯ ಇನ್ನೊಂದು ಇರಲಾರದು. ಬೆನ್ನೆಲುಬು ತೆಗೆದುಕೊಳ್ಳಿ". ಮಹರ್ಷಿ ದಧೀಚಿ ತಮ್ಮ ಯೋಗ ಶಕ್ತಿಯ ಮೂಲಕ ಸಮಾಧಿ ಸ್ಥಿತಿ ತಲುಪಿದರು. ಸ್ವಲ್ಪ ಸಮಯದ ನಂತರ ದೇಹದಲ್ಲಿ ಉಸಿರು ನಿಂತಿತು. ದಧೀಚಿಯ ಭೌತಿಕ ದೇಹದ ಬೆನ್ನೆಲುಬು ಪಡೆದ ಇಂದ್ರ, ಅದನ್ನು ವಿಶ್ವಕರ್ಮನಿಗೆ ತಲುಪಿಸಿದ. ಬೆನ್ನೆಲುಬಿನಿಂದ ಹಲವು ಆಯುಧಗಳನ್ನು ತಯಾರಿಸಿದ ವಿಶ್ವಕರ್ಮ, ಅದರಿಂದ ಒಂದು ವಿಶೇಷವಾದ "ವಜ್ರಾಯುಧ" ತಯಾರಿಸಿದ. ಇಂದ್ರನಿಗೆ ಅದೇ ಆಯುಧವಾಯಿತು. ಹೊಸ ಶಕ್ತಿಯೊಂದಿಗೆ ದೇವತೆಗಳು ಅಸುರ ಸೈನ್ಯವನ್ನು ಎದುರಿಸಿ ಅವರನ್ನು ಸದೆ ಬಡಿದರು. ವಜ್ರಾಯುಧದಿಂದ ವೃತಾಸುರನ ಸಂಹಾರವಾಯಿತು.

ಏಪ್ರಿಲ್ 25, 2021. ಸಂಜೆ 5 ರ ಸಮಯ. ಭಾರತದ ಮಹಾರಾಷ್ಟ್ರ ರಾಜ್ಯದ ನಾಗಪುರ ನಗರದ ಇಂದಿರಾ ಗಾಂಧಿ ಮುನಿಸಿಪಲ್ ಆಸ್ಪತ್ರೆ. ಹತ್ತು ಹಲವು ಅಡೆ ತಡೆಗಳನ್ನು ಎದುರಿಸಿ, ಕರೋನ ಪೀಡಿತರಾಗಿರುವ ತನ್ನ ತಂದೆಗಾಗಿ ಆಕ್ಸಿಜನ್ ವ್ಯವಸ್ಥೆಯನ್ನು ಹೊಂದಿರುವ ಹಾಸಿಗೆ ಪಡೆದು, ತಂದೆಯನ್ನು ಸೇರಿಸಲು ಅವರೊಡನೆ ಬಂದಿದ್ದಾರೆ ಐಶ್ವರ್ಯ ದಾಭಾಡ್ಕರ್. ತಂದೆ ಆಕ್ಸಿಜನ್ ವ್ಯವಸ್ಥೆ ಇರುವ ಹಾಸಿಗೆ ಸೇರಿದರು. ಕಷ್ಟಪಟ್ಟು ಹಾಸಿಗೆ ವ್ಯವಸ್ಥೆ ಮಾಡಿದ್ದ ಮಗಳು ಐಶ್ವರ್ಯ ಅವರಿಗೆ ಸ್ವಲ್ಪ ಸಮಾಧಾನ. ಅಷ್ಟರಲ್ಲಿ, ರೂಮಿನ ಹೊರಗೆ ಏನೋ ಆಕ್ರಂದನ. ತನ್ನ ಇಬ್ಬರು ಪುಟ್ಟ ಮಕ್ಕಳೊಡನೆ, 40 ವರ್ಷದ ಕರೋನ ಪೀಡಿತ ಪತಿಗಾಗಿ ಆಕ್ಸಿಜನ್ ಇರುವ ಹಾಸಿಗೆಗಾಗಿ ಮಹಿಳೆಯೊಬ್ಬಳು ಗೋಳಿಡುತ್ತಿದ್ದಾಳೆ. ಆಸ್ಪತ್ರೆಯಲ್ಲಿ ಈಗ ಯಾವುದೇ ಆಕ್ಸಿಜನ್ ವ್ಯವಸ್ಥೆ ಇರುವ ಹಾಸಿಗೆ ಖಾಲಿ ಇಲ್ಲ. ಆಕ್ರಂದನ ಕೇಳಿ, ಇದೀಗ ತಾನೇ ಹಾಸಿಗೆ ಪಡೆದಿದ್ದ ತಂದೆ ಮಗಳೊಂದಿಗೆ ಹೊರಗೆ ಬಂದರು. ಅಂಗಲಾಚುತ್ತಿದ್ದ ಮಹಿಳೆ, ಎರಡು ಪುಟ್ಟ ಮಕ್ಕಳು ಮತ್ತು ಕರೋನ ಪೀಡಿತನಾದ ಆ ಮಕ್ಕಳ ತಂದೆಯನ್ನು ನೋಡಿದರು. ಅಲ್ಲಿಯೇ ಇದ್ದ ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಗೆ ಹೇಳಿದರು. "ನನಗೆ ಈ ಹಾಸಿಗೆ ಬೇಡ. ಇದನ್ನು ಇವಳ ಪತಿಗೆ ಕೊಡಿ. ನನ್ನನ್ನು ಮನೆಗೆ ಕಳುಹಿಸಿ. 85 ವರ್ಷ ಬದುಕನ್ನು ಅನುಭವಿಸಿದ್ದೇನೆ, ನಾನು ಮೃತನಾದರೆ ಯಾರಿಗೆ ಏನೂ ತೊಂದರೆಯಾಗದು. ಆದರೆ ಇವನಿಗೆ ಏನಾದರೂ ಆದರೆ, ಈ ಮಕ್ಕಳ ಭವಿಷ್ಯ ದುಸ್ತರವವಾಗುತ್ತದೆ". ಆಸ್ಪತ್ರೆಯ ವೈದ್ಯರ ಎಚ್ಚರಿಕೆಯ ನಡುವೆಯೂ, "ಸ್ವ ಇಚ್ಛೆಯಿಂದ ಮನೆಗೆ ಹೋಗುತ್ತಿದ್ದೇನೆ" ಎಂದು ಲಿಖಿತ ರೂಪದಲ್ಲಿ ತಿಳಿಸಿ, ಮಗಳೊಂದಿಗೆ ಆಸ್ಪತ್ರೆಯಿಂದ ನಿರ್ಗಮಿಸಿದರು. ಇನ್ನೊಂದು ಜೀವಕ್ಕಾಗಿ ತನಗೆ ದೊರೆತ ಆಸ್ಪತ್ರೆಯ ವ್ಯವಸ್ಥೆಯನ್ನು ತ್ಯಜಿಸಿ ಮನೆಗೆ ಬಂದು, ಮೂರು ದಿನಗಳ ನಂತರ ಆ ವ್ಯಕ್ತಿ ಇಹಲೋಕ ತ್ಯಜಿಸಿದರು. ಇವರ ಹೆಸರು **ನಾರಯಣ ಭಾವೂರಾವ್ ದಾಭಾಡ್ಕರ್**.

ಮೇ 25, 2021 (ಸುಮಾರು ಇಪ್ಪತ್ತು ದಿನಗಳ ಹಿಂದೆ). ಭಾರತದ ಇನ್ನೊಂದು ರಾಜ್ಯ ಉತ್ತರ ಪ್ರದೇಶದ ಮಥುರಾ ನಗರ. ಕರೋನ ಮಹಾ ಮಾರಿಯಿಂದ ತತ್ತರಿಸಿರುವ ರೋಗಿಗಳನ್ನು ಆಸ್ಪತ್ರೆಗಳಿಗೆ ಕೊಂಡೊಯ್ಯುವಲ್ಲಿ ಹಲವಾರು ಅಂಬ್ಯುಲೆನ್ಸ್ ವಾಹನಗಳು ನಿರತವಾಗಿವೆ. ಇಂತಹ ಒಂದು ಅಂಬ್ಯುಲೆನ್ಸ್ ವಾಹನ ಚಲಾಯಿಸುತ್ತಿದ್ದ ಚಾಲಕನಿಗೆ ಕರೆಯೊಂದು ಬಂತು. ಕರೆ ಬಂದಿದ್ದು ಸುಮಾರು 200 ಕಿಲೋಮೀಟರ್ ದೂರದ ಅವನ ಮಣಿಪುರ ಗ್ರಾಮದ ವ್ಯಕ್ತಿಯೊಬ್ಬರಿಂದ. ಕರೆ ಮಾಡಿದ ವ್ಯಕ್ತಿ ಹೇಳಿದ, "ನಿನ್ನ ತಾಯಿ ತೀರಿಕೊಂಡರು. ಕೂಡಲೇ ಹೊರಟು ಬಾ". ಸುದ್ದಿ ತಿಳಿದ ಚಾಲಕ ದುಃಖದಿಂದಲೇ ಅಂಬ್ಯುಲೆನ್ಸ್ ನಲ್ಲಿದ್ದ ರೋಗಿಯನ್ನು ತಲುಪಬೇಕಿದ್ದ ಆಸ್ಪತ್ರೆಗೆ ಸೇರಿಸಿದ. ಆದರೆ ಕೂಡಲೇ ಅವನು ತನ್ನ ಗ್ರಾಮದತ್ತ ಹೊರಡಲಿಲ್ಲ. ಇನ್ನೂ ಹಲವಾರು ಪೀಡಿತರು ಆಸ್ಪತ್ರೆ ಸೇರಲು ಅಂಬ್ಯುಲೆನ್ಸ್ ಸೇವೆಗಾಗಿ ಕಾಯುತ್ತಿದ್ದರು. ಚಾಲಕ ಮತ್ತೆ 15 ರೋಗಿಗಳನ್ನು ಅವರು ಸೇರಬೇಕಿದ್ದ ಆಸ್ಪತ್ರೆಗಳಿಗೆ ತಲುಪಿಸಿದ.

ನಂತರ 200 ಕಿಲೋ ಮೀಟರ್ ಪಯಣಿಸಿ ತನ್ನ ಗ್ರಾಮ ತಲುಪಿದ. ಮೃತ ತಾಯಿಯ ಅಂತ್ಯ ಸಂಸ್ಕಾರ ಮುಗಿಸಿ, ಮಧ್ಯ ರಾತ್ರಿ 1:30 ರ ಹಾಗೆ ಮಥುರಾ ನಗರಕ್ಕೆ ಹಿಂದಿರುಗಿದ. ಮರುದಿನ ಬೆಳಿಗ್ಗೆ ಎಂದಿನಂತೆ ತನ್ನ ಕರ್ತ್ಯವ್ಯಕ್ಕೆ ಹಾಜರಾಗಿ, ರೋಗಿಗಳನ್ನು ಆಸ್ಪತ್ರೆ ತಲುಪಿಸುವ ಕಾರ್ಯದಲ್ಲಿ ನಿರತನಾದ. ತಾಯಿಯನ್ನು ಕಳೆದುಕೊಂಡ ಸಮಯದಲ್ಲಿಯೂ. ಹಲವರ ಜೀವ ಉಳಿಸುವ ಕಾರ್ಯ ಮುಂದುವರೆಸಿದ ಈ ಅಂಬ್ಯುಲೆನ್ಸ್ ಚಾಲಕನ ವಯಸ್ಸು ಕೇವಲ 33. ಹೆಸರು **ಪ್ರಭಾತ್ ಯಾದವ್.**

2020 ರ ಮಾರ್ಚ್ ತಿಂಗಳು (ಕಳೆದ ವರ್ಷ). ಕರೋನ ಹೆಮ್ಮಾರಿ ಅಮೆರಿಕಾದ ಮೇಲೆ ತನ್ನ ಕರಿ ನೆರಳನ್ನು ಚಾಚಿದ್ದ ಪ್ರಾರಂಭದ ಸಮಯ. ಮಾಸ್ಕ್, ಸ್ಯಾನಿಟೈಜರ್ ಗಳಿಗೆ ನಾವೆಲ್ಲರೂ ಎಡತಾಗುತ್ತಿದ್ದೆವು. ಆಸ್ಪತ್ರೆಗಳಲ್ಲಿ ಕೆಲಸ ಮಾಡುವ ವೈದ್ಯಕೀಯ ಸಿಬ್ಬಂದಿಗಳೂ ಇದಕ್ಕೆ ಹೊರತಾಗಿರಲಿಲ್ಲ. ವೈದ್ಯರು, ದಾದಿಯರಿಗೆ ಪರೀಕ್ಷಾ ಕಾಲ. ಅವರೆಲ್ಲರೂ ಹಗಲು-ರಾತ್ರಿಯೆನ್ನದೇ ತಮ್ಮ ಕೆಲಸದಲ್ಲಿ ನಿರತರಾಗಿದ್ದರು. ದೇಶದೆಲ್ಲೆಡೆಗಳ ಆಸ್ಪತ್ರೆಗಳಂತೆ, ನಮ್ಮ ನ್ಯೂ ಜೆರ್ಸಿ ರಾಜ್ಯದ ಬೆಲ್ವಿಲ್ ಪಟ್ಟಣದ ಕ್ಲಾರಾ ಮೌಂಟ್ ಮೆಡಿಕಲ್ ಸೆಂಟರ್ ಆಸ್ಪತ್ರೆಯಲ್ಲಿ ದಾದಿಯೊಬ್ಬರು ಪೀಡಿತ ರೋಗಿಗಳ ಸೇವೆ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಮಾಸ್ಕ್ ಗಳ ಅಭಾವದಿಂದಾಗಿ, ಪ್ಲಾಸ್ಟಿಕ್ ಕಸದ ಚೀಲವೊಂದನ್ನು(garbage bag) ಕತ್ತರಿಸಿ, ಅದನ್ನೇ ಮಾಸ್ಕ್ ಆಗಿ ಧರಿಸಿದ್ದಾರೆ. ಹಲವು ದಿನಗಳಿಂದ ರೋಗಿಗಳ ಸೇವೆಯಲ್ಲಿ ಮುಳುಗಿರುವ ಈ ದಾದಿ, ಇನ್ನು ಕೇವಲ 6 ಪಾಳಿಗಳ ಕೆಲಸದ ನಂತರ ಮನೆಗೆ ಹೋಗಲು ತಯಾರಾಗಿದ್ದಾರೆ. ಈ 6 ಪಾಳಿಗಳು ಮುಗಿಯುವುದರೊಳಗಾಗಿ ಕರೋನದ ನೆರಳು ಇವರ ಮೇಲೆ ಬಿತ್ತು. ದಾದಿಯಾಗಿ ಸುದೀರ್ಘ 46 ವರ್ಷಗಳ ಸೇವೆ ಸಲ್ಲಿಸಿ, ಇನ್ನು ಕೆಲವೇ ದಿನಗಳಲ್ಲಿ ನಿವೃತ್ತಿಯ ಜೀವನ ಬಯಸಿದ್ದ **ಬಾರ್ಬರಾ ಬರ್ಚನಾಫ್**, ಈ ಪ್ರಪಂಚದಿಂದಲೇ ನಿವೃತ್ತರಾದರು.

**ಹೆಚ್ಚಿನವರ ಬದುಕು ಸಾವಿನೊಂದಿಗೆ ಮುಗಿಯುತ್ತದೆ. ಕೆಲವರು ಮಾತ್ರ ಸಾವಿನೊಂದಿಗೆ ಬದುಕು ಪ್ರಾರಂಭಿಸಿ ದಧೀಚಿಗಳಾಗುತ್ತಾರೆ.**



# ಅಳಿಲು ಸೇವೆ

*ಸಂಧ್ಯಾ ಮಲ್ಲಿಕ್, ನ್ಯೂ ಜೆರ್ಸಿ*

ಬೃಂದಾವನ ಪ್ರಗತಿ ತಂಡ ಕೋವಿಡ್ ಸಾಂಕ್ರಾಮಿಕ ರೋಗದ ಪರಿಸ್ಥಿತಿಯಲ್ಲಿ ಸದಸ್ಯರಿಗೆ ನೆರವಾಗುವಂತೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. ಜನರ ಮಾನಸಿಕ ಮತ್ತು ದೈಹಿಕ ಆರೋಗ್ಯವು ಈ ಸಮಯದಲ್ಲಿ ಬಹಳ ಮುಖ್ಯ ಎಂದು ಅರಿತು, ಇದರ ಬಗ್ಗೆ ಸಂಪೂರ್ಣ ಮಾಹಿತಿ ನೀಡಲು ಡಾ.ಕೃಷ್ಣಮೂರ್ತಿ ಅವರೊಂದಿಗೆ ಇಂಟೆಗ್ರೇಟೆಡ್ ಅರೋಗ್ಯ ಮತ್ತು ಜೀವನ ಶೈಲಿಯ ಕುರಿತು ವೆಬಿನಾರ್ ಆಯೋಜಿಸಿದ್ದರು. ನಾರ್ತ್ ಕ್ಯಾರೊಲಿನಾ ಕನ್ನಡ ಕೂಟ ಮತ್ತು ಹಲವು ಕನ್ನಡ ಕೂಟಗಳು ಇದರಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಪ್ರೋತ್ಸಾಹಿಸಿದರು.

ಡಾ.ಕೃಷ್ಣಮೂರ್ತಿ ಅವರು ವೃತಿಯಲ್ಲಿ ವೈದ್ಯರು, ಸಂಶೋಧಕರಾಗಿ ಮತ್ತು ಪ್ರಾಧ್ಯಾಪಕರಾಗಿ ಅಲೈಡ್ ಹೆಲ್ತ್ ಅಂಡ್ ಸೈನ್ಸ್, ರಾಮಯ್ಯ ಯೂನಿವರ್ಸಿಟಿ ಆಫ್ ಅಪ್ಲೈಡ್ ಸೈನ್ಸ್ ಸಂಸ್ಥೆಗಳಲ್ಲಿ ತಮ್ಮ ಸೇವೆ ಸಲ್ಲಿಸುತ್ತಿದ್ದಾರೆ. ಇದಲ್ಲದೆ ಹಾರ್ಟ್ ಫುಲ್ನೆಸ್ಸ್ ಇನ್ಸ್ಟಿಟ್ಯೂಟ್ ಸ್ಥಾಪಕರಾಗಿ ಮತ್ತು ಸ್ವಯಂಸೇವಕರಾಗಿ ಧ್ಯಾನ ಮತ್ತು ಯೋಗವನ್ನು ಜೀವನದಲ್ಲಿ ಅಳವಡಿಸಿ ಕೊಳ್ಳಲು ಜನರಿಗೆ ತರಬೇತಿ ನೀಡುತ್ತ ಬಂದಿದ್ದಾರೆ.

ಭೌತಿಕ, ಮಾನಸಿಕ, ಆಧ್ಯಾತ್ಮಿಕ, ಸಾಮಾಜಿಕ ಆರೋಗ್ಯವನ್ನು ಆಹಾರ, ವ್ಯಾಯಾಮ, ಆಯುರ್ವೇದ, ಯೋಗ ಮತ್ತು ಧ್ಯಾನದಿಂದ ಹೇಗೆ ಕಾಪಾಡಿಕೊಳ್ಳಬೇಕೆಂದು ಮಾಹಿತಿ ನೀಡಿದರು. ಯೋಗವು ದೇಹ, ಮನಸ್ಸು ಮತ್ತು ಹೃದಯದ ಆರೋಗ್ಯ ಕಾಪಾಡಿಕೊಳ್ಳಲು ಮಹತ್ತರವಾದ ಪಾತ್ರವನ್ನು ವಹಿಸಿದೆ. ಇದರ ಉಪಯೋಗವನ್ನು ಜನರಿಗೆ ನೀಡಬೇಕೆಂಬ ಉತ್ತಮವಾದ ಯೋಜನೆಯನ್ನು ಹೊಂದಿರುವ ಹಾರ್ಟ್ಫುಲ್ನೆಸ್ಸ್ ಸ್ವಯಂ ಸೇವಕರು ಉಚಿತವಾಗಿ ಯೋಗ ತರಬೇತಿಗಳನ್ನು ಪ್ರಪಂಚಾದ್ಯಂತ ನೀಡುತ್ತಾ ಬರುತ್ತಿದ್ದಾರೆ. ಇದರ ಬಗ್ಗೆ ಮಾಹಿತಿ ಬೇಕಿದ್ದಲ್ಲಿ ಪ್ರಗತಿ ತಂಡದ ನಿರ್ದೇಶಕರನ್ನು ಸಂಪರ್ಕಿಸಿ.

ಕೋವಿಡ್ ಮಹಾಮಾರಿಯ ಆರ್ಭಟದಿಂದ ನಮ್ಮ ತಾಯ್ನಾಡು ತತ್ತರಿಸುತ್ತಿರುವ ಸಮಯದಲ್ಲಿ ಬೃಂದಾವನ ಪ್ರಗತಿ ತಂಡ ಹಲವು ಚಾರಿಟಬಲ್ ಟ್ರಸ್ಟಗಳಿಗೆ ದೇಣಿಗೆಯನ್ನು ಸಂಗ್ರಹಿಸಿದರು. ಬೃಂದಾವನ ಸದಸ್ಯರ ಬೆಂಬಲದಿಂದ ಹನ್ನೊಂದು ಸಾವಿರ ಡಾಲರ್ ನಗದನ್ನು ವಾಸವಿ ಸೇವಾ ಫೌಂಡೇಶನ್ ಮತ್ತು ಕರ್ನಾಟಕ ರಾಷ್ಟ್ರೋತ್ಥಾನ ಪರಿಷತ್ತಿಗೆ ದೇಣಿಗೆಯಾಗಿ ನೀಡಲಾಗಿದೆ.

ವಾಸವಿ ಸೇವಾ ಫೌಂಡೇಶನ್ ಆಕ್ಸಿಜನ್ ಕಾನ್ಸನ್ಟ್ರೇಟರ್ ಗಳನ್ನು ಮತ್ತು ರಾಷ್ಟ್ರೋತ್ಥಾನ ಪರಿಷತ್ ಕೋವಿಡ್ ನಿಂದ ತೊಂದರೆಗೊಂಡ ಕುಟುಂಬಗಳಿಗೆ ಸಹಾಯ ಹಸ್ತವನ್ನು ನೀಡಿ ದೇಣಿಗೆಯ ಸದುಪಯೋಗ ಮಾಡಿಕೊಂಡಿದ್ದಾರೆ. ಇದಲ್ಲದೆ ಚಿರಂತನ ಚಾರಿಟಬಲ್ ಟ್ರಸ್ಟ್ ವಿಶಿಷ್ಟ ಅಗತ್ಯಗಳಿರುವ ಜನರಿಗೆ ಮತ್ತು ಅವರ ಕುಟುಂಬ ವರ್ಗದವರಿಗೆ ವ್ಯಾಕ್ಸಿನ್ ನೀಡುವುದಕ್ಕಾಗಿ ದೇಣಿಗೆ ಸಂಗ್ರಿಹುಸುತ್ತಿದ್ದಾರೆ. ಬೃಂದಾವನ ಸದಸ್ಯರು ಪ್ರಗತಿ ತಂಡದ ಪ್ರತಿಯೊಂದು ಕಾರ್ಯದಲ್ಲೂ ತಮ್ಮ ಸಹಾಯ ಹಸ್ತವನ್ನು ನೀಡಿ ಸಹಕರಿಸಿದ್ದಾರೆ. ಇವರೆಲ್ಲರಿಗೂ ಬೃಂದಾವನ ಪ್ರಗತಿ ತಂಡದ ವತಿಯಿಂದ ಹೃತ್ಪೂರ್ವಕ ಧನ್ಯವಾದಗಳು.



# ವರ್ತನೆ

*ಶ್ರೀ ಯೋಗೀಂದ್ರ ಭಟ್ ಉಳಿ. ಶ್ರೀ ಕೃಷ್ಣವೃಂದಾವನ, ನ್ಯೂಜೆರ್ಸಿ.*

ಅದೆಷ್ಟೋ ಮಂದಿಗೆ ಪರರ ಸದ್ಗುಣಗಳನ್ನು, ಸಾಧನೆಗಳನ್ನು ಗುರುತಿಸಿ ಗೌರವಿಸುವ ಕಲೆಯೇ ಗೊತ್ತಿಲ್ಲ. ಸದಾ ತಮ್ಮದು ಮಾತ್ರ ಶ್ರೇಷ್ಠ ಉಳಿದವರದ್ದೇನಿದ್ದರೂ ನಗಣ್ಯವೆನ್ನುವ ಭ್ರಮೆಗೆ ಭದ್ರವಾಗಿ ಅಂಟಿಕೊಂಡಿರುತ್ತಾರೆ. ಮತ್ತೆ ಕೆಲವರಿಗೆ ತಮ್ಮ ಮತ್ತು ತಮ್ಮವರ ಸಿರಿವಂತಿಕೆಯನ್ನು, ಪರಾಕ್ರಮಗಳನ್ನು ವರ್ಣಿಸಿದಷ್ಟೂ ಸಾಲದು. ಮಾತನಾಡಲು ಅವಕಾಶ ಸಿಕ್ಕಿದರೆ ಸಾಕು, ಸಮಯ ಸಂದರ್ಭ ಏನೆಂಬುದನ್ನೂ ಯೋಚಿಸದೆ ನಿಸ್ಸಂಕೋಚವಾಗಿ ಕೇವಲ ಸ್ವಪ್ರಶಂಸೆಗೋಸ್ಕರ ಬಳಸಿಕೊಳ್ಳುತ್ತಾರೆ. ಉಳಿದವರ ಮಾತುಗಳನ್ನು ಕೇಳಿಸಿಕೊಳ್ಳುವ ವ್ಯವಧಾನವೂ ಅವರಿಗಿರುವುದಿಲ್ಲ. ಇಂಥವರಿಂದ ಅದೆಷ್ಟೋ ಅಮಾಯಕರು ಅನಗತ್ಯವಾಗಿ ನೋವು ಅನುಭವಿಸುತ್ತಾರೆ. ಸಮಾಧಾನದ, ಸಾಂತ್ವನದ ಅಥವಾ ಉತ್ತೇಜನದ ನಿರೀಕ್ಷೆಯಲ್ಲಿರುವ ಮುಗ್ಧ ಮನಸ್ಸುಗಳಿಗೆ ಅನಿರೀಕ್ಷಿತ ಅಘಾತವಾಗುತ್ತದೆ.

ಬೆಳಗ್ಗಿನಿಂದ ಸಂಜೆತನಕ ಶಾಲೆಯಲ್ಲಿನ ಆಟ-ಪಾಠಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಬಳಲಿದ್ದರೂ, ಪ್ರೀತಿಯ ಅಪ್ಪುಗೆಯನ್ನು ಬಯಸಿ ಓಡೋಡಿ ಬರುವ ಪುಟ್ಟಮಗುವನ್ನು ಅಪ್ಪ-ಅಮ್ಮನೇ ಕಟು ಮಾತಿನಿಂದ ಗದರಿಸಿದರೆ ಆ ಮುದ್ದು ಮನಸ್ಸಿಗೆ ಅದೆಂತಹ ಅಘಾತವಾಗಬಹುದು? ದಿನವಿಡೀ ದುಡಿದು ದಣಿದು ಬಂದ ಗಂಡನನ್ನು ಹೆಂಡತಿ ಅಥವಾ ಮುಂಜಾನೆಯಿಂದ ಸಂಜೆಯ ತನಕ ಎಡೆಬಿಡದೆ ಮನೆಗೆಲಸಗಳಲ್ಲಿ ತನ್ನನ್ನು ತೊಡಗಿಸಿಕೊಂಡು ಸುಸ್ತಾದ ಹೆಂಡತಿಯನ್ನು ಗಂಡ ನೀನೇನೂ ಮಾಡಿಲ್ಲವೆಂಬಂತೆ ನಿರ್ಲಕ್ಷಿಸಿದರೆ ಅದೆಷ್ಟು ನಿರಾಸೆಯಾಗಬಹುದು? ತಮ್ಮಂತೆಯೇ ಇತರರ ಪರಿಶ್ರಮವನ್ನೂ ಗುರುತಿಸಬೇಕು, ಗೌರವಿಸಬೇಕು ಎಂಬುದನ್ನು ಕಲಿಯುವುದೇ ಜೀವನದ ಬಹು ದೊಡ್ಡ ಪಾಠ.

ಜೀವನದಲ್ಲಿ ಒಂದು ಬಾರಿ ಸಂಭವಿಸುವ ಮದುವೆ, ಮನೆ ಒಕ್ಕಲು ಇತ್ಯಾದಿ ಶುಭ ಸಮಾರಂಭಗಳಿಗೆ ಅಹ್ವಾನಿಸುವವರು ಅತಿಥಿಗಳ ಆಗಮನವನ್ನಷ್ಟೇ ಅಲ್ಲ, ಅವರಿಂದ ಶುಭ ನುಡಿಗಳನ್ನೂ ಬಹಳವಾಗಿ ನಿರೀಕ್ಷಿಸುತ್ತಾರೆ. ಜೀವಮಾನದ ಕನಸನ್ನು ಸಾಕಾರಗೊಳಿಸಿಕೊಂಡ ಅವರ ಸಂಭ್ರಮದ ಕ್ಷಣಗಳಲ್ಲಿ ನಮ್ಮ ಒಂದೆರಡು ಒಳ್ಳೆಯ ಮಾತುಗಳು, ಮೆಚ್ಚುಗೆಯ ಶುಭ ನುಡಿಗಳು ಅವರನ್ನು ಆ ಕ್ಷಣಕ್ಕೆ ಸಂತೋಷಗೊಳಿಸುವುದು ಮಾತ್ರವಲ್ಲ, ಅವರಿಗೆ ನಮ್ಮ ಮೇಲಿರುವ ಗೌರವ, ಪ್ರೀತಿಯನ್ನು ನೂರ್ಮಡಿಗೊಳಿಸಿ ಬಿಡುತ್ತವೆ! ಇಂಥಹ ಸೂಕ್ಷ್ಮ ಸಂದರ್ಭಗಳಲ್ಲಿ ಸಂಭವಿಸುವ ಅಸಂಬದ್ಧ ವರ್ತನೆಗಳು, ಕೊಂಕು ನುಡಿಗಳು ಅವರ ಮನಸ್ಸಿನಲ್ಲಿ ಶಾಶ್ವತವಾಗಿ ಇವರು ಕೆಟ್ಟವರು ಎಂಬ ಪಟ್ಟವನ್ನು ಕಟ್ಟಿ ಬಿಡುತ್ತವೆ!

ಗುಣಗ್ರಾಹಿ ಮನಸ್ಸು ಪೂರ್ವಾಗ್ರಹ ರಹಿತವಾಗಿರುತ್ತದೆ. ದೋಷಗಳನ್ನೇ ಹುಡುಕುವವರಿಗೆ ಎಲ್ಲ ಮೊಸರಲ್ಲೂ ಕಲ್ಲು ಕಾಣಿಸುತ್ತದೆ. ಅದರಲ್ಲೂ ಇವರು ತಮ್ಮವರು, ಅವರು ಇತರರು ಎಂಬ ಪೂರ್ವ ಸಿದ್ಧ ಭೇದ ಬುದ್ಧಿಯಿಂದ ಕಲುಷಿತವಾದ ಮನಸುಗಳಲ್ಲಿ ಇದರ ಪ್ರಭಾವ ಇನ್ನಷ್ಟು ವಿಕಾರವಾಗಿರುತ್ತದೆ. ತಮಗೆ ಆತ್ಮೀಯರೆನಿಸಿದವರು ಅದೇನು ಮಾಡಿದರೂ ಸರಿ. ಚಿಕ್ಕ ಪುಟ್ಟ ಕೆಲಸವಾದರೂ ದೊಡ್ಡ ಸಾಧನೆ ಎಂದು ಬಿಂಬಿಸುವ ಕೆಲವರಿಗೆ, ಇತರರದ್ದು ಅದೆಷ್ಟು ದೊಡ್ಡ ಸಾಧನೆಯಾದರೂ ಕಣ್ಣಿಗೆ ಕಾಣಿಸುವುದೇ ಇಲ್ಲ. ತಮ್ಮ ಕಡೆಯವರ ಸಣ್ಣ ಸಮಸ್ಯೆಯನ್ನೂ ಅತಿದೊಡ್ಡ ದುರಂತವೆಂಬಂತೆ ವರ್ಣಿಸುತ್ತಾ, ಇತರರದ್ದು ನಿಜವಾಗಿಯೂ ದೊಡ್ಡ ಸಮಸ್ಯೆಯಾಗಿದ್ದರೂ ಅದೊಂದು ಸಂಗತಿಯೇ ಅಲ್ಲವೆಂಬಂತೆ ವರ್ತಿಸುತ್ತಾರೆ. ತಮ್ಮವರದ್ದು ಅದೆಷ್ಟು ದೊಡ್ಡ ಅಪರಾಧವಾಗಿದ್ದರೂ ಮುಚ್ಚಿಡಲು ಅಥವಾ ಸಮರ್ಥಿಸಲು ಶತಾಯ ಗತಾಯ ಯತ್ನಿಸುತ್ತಾರೆ. ಇತರರ ಸಣ್ಣ ಪುಟ್ಟ ದೋಷಗಳನ್ನು ಪರ್ವತದಂತೆ ಎತ್ತಿ ತೋರಿಸುತ್ತಾ ಆಕಾಶವೇ ಕಳಚಿ ಭೂಮಿಗೆ ಬಿತ್ತೆಂಬಂತೆ ಬೊಬ್ಬಿರಿಯುತ್ತಾರೆ, ಗದ್ದಲವೆಬ್ಬಿಸುತ್ತಾರೆ! ಇಂತಹ ಅನ್ಯಾಯದ ವರ್ತನೆಗಳನ್ನು ಉಪೇಕ್ಷಿಸುವುದೇ ಉತ್ತಮ. ಪೂರ್ವಾಗ್ರಹ ಪೀಡಿತ ಮನಸ್ಸುಗಳನ್ನು ಬದಲಾಯಿಸುವ ಪ್ರಯತ್ನವೂ ನಿಷ್ಪ್ರಯೋಜಕ.

ಸಾತ್ವಿಕರಾದ ಸಾಧಕರು ಮಾಡುವ ಪ್ರಯತ್ನವೂ ಪ್ರಾಮಾಣಿಕವಾಗಿರುತ್ತದೆ. ತಮ್ಮ ಮನಸ್ಸಿಗೆ ಒಪ್ಪುವಂತೆ, ಇತರರಿಗೆ ನೋವಾಗದಂತೆ ಎಲ್ಲವನ್ನೂ ಸಾಧಿಸಿಕೊಂಡು ಮುನ್ನಡೆಯುತ್ತಾರೆ. ಅನಗತ್ಯವಾಗಿ ಕಿರುಕುಳ ಕೊಡುವ ದುರುಳರ ಜೊತೆಗೆ ಜಗಳಕ್ಕೆ ನಿಂತು ಸಮಯ ವ್ಯರ್ಥಮಾಡುವುದಿಲ್ಲ. ಸಾಧ್ಯವಾದಷ್ಟು ಸಹನೆಯಿಂದ ಸಾಧನೆಯ ದಾರಿಯಲ್ಲಿ ಜಾಗ್ರತೆಯಿಂದ ಮುಂದುವರಿಯುತ್ತಾರೆ. ಗುರಿಮುಟ್ಟುವ ತನಕ ವಿರಮಿಸುವುದಿಲ್ಲ. ಸೋಮಾರಿಗಳಿಗೆ ಸಾಧನೆಯಿಂದ ತಪ್ಪಿಸಿಕೊಳ್ಳಲು ಸಾವಿರ ನೆಪಗಳು ಸಿಗುತ್ತವೆ. ಪರಿಶ್ರಮವೇ ಪರಮ ಮಂತ್ರವಾಗಿರುವ ಸಾಧಕನಿಗೆ ಗುರಿ ತಲುಪಲು ಸಾಧಿಸಬೇಕೆನ್ನುವ ಛಲವೊಂದೇ ಸಾಕಾಗುತ್ತದೆ.

ಸುಮ್ಮನೆ ಕಾಲೆಳೆಯುವವರ ವರ್ತನೆಗೆ, ಟೀಕೆಗೆ ಉತ್ತರ ಕೊಡದಿರುವುದೂ ಒಂದು ಜಾಣ್ಮೆ. ಉತ್ತರಿಸುತ್ತಾ ಕುಳಿತರೆ ಅದು ಸಮಯ ವ್ಯರ್ಥ. ನಿಂದಕರಿಗೆ ಅದೊಂದೇ ಕೆಲಸ. ನರಿಯು ಊಳಿಡುತ್ತದೆಂದು ಆನೆ ತನ್ನ ಗುರಿಯ ಕಡೆ ಸಾಗುವುದನ್ನು ನಿಲ್ಲಿಸುವುದಿಲ್ಲ. ತನ್ನ ದಾರಿಯನ್ನು ತಾನೇ ನಿರ್ಮಿಸಿಕೊಂಡು ಮುಂದುವರಿಯುತ್ತದೆ. ಸಂಕಲ್ಪ ಶುದ್ಧವಾಗಿದ್ದರೆ ಯಾರ ಟೀಕೆ, ತಾತ್ಸಾರಗಳೂ ಸಾಧಕನನ್ನು ಬಾಧಿಸುವುದಿಲ್ಲ. ಕಚ್ಚಲು ಬಂದ ಹಾವೂ ಹಗ್ಗವಾಗಿ ಬಳಕೆಗೆ ಬರುತ್ತದೆ. ಅದಕ್ಕೇ ಇರಬೇಕು ಕಾರ್ಯಸಿದ್ಧಿಯನ್ನು ಕರುಣಿಸುವ ಗಣಪನೂ ವಿಷದ ಹಾವನ್ನೇ ಹೊಟ್ಟೆಗೆ ಕಟ್ಟಲು ಹಗ್ಗವಾಗಿ ಬಳಸಿಕೊಂಡದ್ದು! ಲಕ್ಷ್ಯವನ್ನಷ್ಟೇ ಗಮನದಲ್ಲಿಟ್ಟುಕೊಂಡವನಿಗೆ ಅನಗತ್ಯ ಬೈಗುಳಗಳೂ ಉತ್ತೇಜನವೆಂಬಂತೆ ಸ್ವೀಕೃತವಾಗುತ್ತವೆ. ತನ್ನೆಡೆಗೆ ಎಸೆದ ಕಲ್ಲುಗಳನ್ನೂ ಸಾಧನೆಗೆ ಮೆಟ್ಟಿಲಾಗಿ ಬಳಸಿಕೊಳ್ಳುವವನೇ ನಿಜವಾದ ಬುದ್ಧಿವಂತ.



# ಚಿಗುರು ಚೈತ್ರ ಸಂಭ್ರಮ

**ಅನಿಲ್ ಭಾರದ್ವಾಜ್,** ನ್ಯೂ ಜೆರ್ಸಿ

**ಬೃಂ**ದಾವನ ಕನ್ನಡ ಸಂಘ ತನ್ನ 2021ರ ವಸಂತೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿತು. ಇದೊಂದು ರೀತಿ ನಮ್ಮೆಲ್ಲರ ಆನ್ಲೈನ್ ಜೀವನದ ವಾರ್ಷಿಕೋತ್ಸವದ ಆಚರಣೆ ಎಂದು ಹೇಳಿದರೂ ತಪ್ಪಾಗಲಾರದು. ಹೊರಗೆ ಘಂಟೆ ಹೂವುಗಳು, ಚೆರಿ ಹೂವುಗಳು ಇತ್ಯಾದಿ ಬಿರಿದು ಹೊಸ ವಸಂತವನ್ನು ಸ್ವಾಗತಿಸಿದರೆ, ಲಸಿಕೆಗಳನ್ನು ಹಾಕಿಸಿಕೊಂಡ ನಾವುಗಳು ಮುಂಬರುವ ಆಶಾದಾಯಕ ದಿನಗಳನ್ನು ಎದುರು ನೋಡುತ್ತಾ ವ್ಯಾಕ್ಸೀನ್ ವಸಂತವನ್ನು ಉತ್ತೇಜಿತರಾಗಿ ಬರಮಾಡಿಕೊಂಡೆವು. ನವ ಚೈತ್ರದಲ್ಲಿ ಚಿಲಿಪಿಲಿಗುಟ್ಟುವ ಹಕ್ಕಿಗಳೊಡನೆ ನಮ್ಮ ಆಶಾ ಹಕ್ಕಿಯು ಮುಗಿಲೆತ್ತರಕ್ಕೆ ಹಾರಿತು.

ಪ್ರಗತಿ ತಂಡ ನಡೆಸಿಕೊಟ್ಟ 2021ರ ವಸಂತೋತ್ಸವ ಅದೇ ಹುಮ್ಮಸ್ಸಿನಲ್ಲಿ ಮೂರುದಿನಗಳ ಆಚರಣೆಯನ್ನು ನ್ಯೂ ಜೆರ್ಸಿ ಕನ್ನಡಿಗರಿಗೆ ಕೊಟ್ಟಿತು. ಮೊದಲನೇ ದಿನದ ಕಾರ್ಯಕ್ರಮವಾಗಿ, ಕರ್ನಾಟಕದ ಹಿರಿಯ ಕಲಾವಿದ, ರಿದಂ ಗಿಟಾರ್ ವಾದಕರಾದ ಸುದರ್ಶನ್ ಬಂಟಪಲ್ಲಿ ಅವರ ನೇತೃತ್ವದಲ್ಲಿ, ಸ್ಥಳೀಯ ಕಲಾವಿದರು ಸೇರಿ ವಾದ್ಯಗೋಷ್ಠಿ ಏರ್ಪಾಡು ಮಾಡಿದ್ದರು. ಜನಪ್ರಿಯ ಚಲನಚಿತ್ರ ಹಾಗೂ ಭಾವಗೀತೆಗಳನ್ನು ಹಾಡಿ, ನುಡಿಸಿ, ಶ್ರಾವಕರ ಮನಸ್ಸನ್ನು ಸಂತೋಷಪಡಿಸಿದರು.

ಎರಡನೇ ದಿನ ಬೃಂದಾವನದ ಒಂದು ಅಪೂರ್ವ ಕಾರ್ಯಕ್ರಮ! ವಿಶೇಷ ಭೋಜನವಿಲ್ಲದಿದ್ದರೆ ಹಬ್ಬದಲ್ಲಿ ಸ್ವಲ್ಪ ಲೋಪವಾದಂತೆಯೇ ಅಲ್ಲವೇ? ಎಲ್ಲಾ ವರ್ಷ, ಹಾಜರಿದ್ದ ತನ್ನ ಸದಸ್ಯರಿಗೆ ಹಬ್ಬದೂಟದ ಸವಿಯನ್ನು ಉಣಬಡಿಸುವ ಬೃಂದಾವನ ತಂಡಕ್ಕೆ, ಕೋವಿಡ್ ತೀವ್ರ ಪರಿಸ್ಥಿತಿಯೂ ಆ ರೂಢಿಯನ್ನು ಮುರಿಯಲು ಬಿಡಲಿಲ್ಲ. ಒಟ್ಟಿಗೆ ನೂರಾರು ಜನರು ಕುಳಿತು, ಸ್ನೇಹಿತರೊಂದಿಗೆ ಹರಟೆ ಹೊಡೆಯುತ್ತಾ, ರಸದೌತಣ ಮಾಡಲು ಆಗದಿದ್ದರೂ, ಹಬ್ಬದೂಟ ಮನೆ ಬಾಗಿಲಿಗೇ ಬರುವಂತೆ ಮಾಡಿದರು. ಅಡ್ಯಾರ್ ಆನಂದ ಭವನ (A2B) ಹೋಟಲಿನವರ ಸಹಯೋಗದೊಂದಿಗೆ ಸಂದರ್ಭಕ್ಕೆ ಉಚಿತವಾದ ಭೋಜನವನ್ನು ಏರ್ಪಡಿಸಿದ್ದರು. ಬಿಸಿಬೇಳೆ ಬಾತ್, ಆಂಬೊಡೆ, ಮೈಸೂರ್ ಪಾಕ್ ಇತ್ಯಾದಿ ಕರ್ನಾಟಕದ ಹಬ್ಬದ ಸಾಂಪ್ರದಾಯಿಕ ತಿನಿಸುಗಳನ್ನು, ಅವರ ಮೂರು ಶಾಖೆಗಳಿಂದ ಟು-ಗೋ ಶೈಲಿಯಲ್ಲಿ ಬೃಂದಾವನ ಸದಸ್ಯರುಗಳು ಪಡೆದುಕೊಳ್ಳುವಂತೆ ಆಯೋಜಿಸಲಾಗಿತ್ತು. ಎಂದಿನಂತೆಯೇ ಬೃಂದಾವನದ ಸ್ವಯಂಸೇವಕರು, ಈ ಹೊಸ ವ್ಯವಸ್ಥೆಯನ್ನು ಸಲೀಸಾಗಿ ನಡೆಸಿಕೊಟ್ಟು, ಎಲ್ಲರಿಗೂ ಒಳ್ಳೆಯ ಅನುಭವ ನೀಡಿದರು. ರುಚಿಯಾದ ಭೋಜನವನ್ನು ಬೃಂದಾವನ ಸದಸ್ಯರು ತಮ್ಮ ಕುಟುಂಬದವರೊಂದಿಗೆ ಆಸ್ವಾದಿಸಿ ಹೊಸ ವರುಷವನ್ನು ವಿಭಿನ್ನವಾಗಿ ಬರಮಾಡಿಕೊಂಡರು.



ಕೊನೆಯ ದಿನದ ಆಚರಣೆಯಲ್ಲಿನ ಲೈನ್-ಅಪ್ ಬಹಳ ಜಬರ್ದಸ್ತಾಗಿತ್ತು. ಭಾನುವಾರ ಬೆಳಗ್ಗೆ ಹತ್ತು ಗಂಟೆಗೆ ಸರಿಯಾಗಿ ಶುರುವಾದ ಆನ್ಲೈನ್ ಕಾರ್ಯಕ್ರಮ, ಯುಟ್ಯೂಬ್ ಹಾಗೂ ಫೇಸ್ ಬುಕ್ ಮಾಧ್ಯಮಗಳಲ್ಲಿ ನೇರ ಪ್ರಸಾರವಾಯಿತು. ಈ ಸಂದರ್ಭದಲ್ಲಿ ಪ್ರತೀ ಆನ್ಲೈನ್ ಕಾರ್ಯಕ್ರಮಗಳನ್ನು ಅಡಚಣೆಗಳಿಲ್ಲದೆ ಸರಾಗವಾಗಿ ನಡೆಸಿಕೊಡುತ್ತಿರುವ ಬೃಂದಾವನ ತಾಂತ್ರಿಕ ವರ್ಗದವರನ್ನು ಸ್ಮರಿಸಿಕೊಳ್ಳಬೇಕು. ಬೃಂದಾವನದ ಸಂಪ್ರದಾಯದ ಪ್ರಕಾರ ನಾಡಗೀತೆ ಹಾಗೂ ಅಮೆರಿಕ ಮತ್ತು ಭಾರತ ದೇಶಗಳ ರಾಷ್ಟ್ರಗೀತೆಗಳಿಂದ ಕಾರ್ಯಕ್ರಮ ಶುರುವಾಯಿತು. ಸತೀಶ್ ಹೊಸನಗರ ಅವರು ಬಹಳ ಅಚ್ಚುಕಟ್ಟಾಗಿ ಕಾರ್ಯಕ್ರಮವನ್ನು ನಿರೂಪಿಸಿ ಕೊಟ್ಟರು.

ನಮ್ಮ ನ್ಯೂ ಜೆರ್ಸಿ ಕೃಷ್ಣ ವೃಂದಾವನದ ಪ್ರಧಾನ ಅರ್ಚಕರಾದ ಶ್ರೀ ಯೋಗಿಂದ್ರ ಭಟ್ಟರು ಪಂಚಾಂಗ ಶ್ರವಣದ ಮೂಲಕ ಗ್ರಹಗತಿಗಳನ್ನು ವಿವರಿಸಿದರು. ಭಾರತದಲ್ಲಿ ಕೋವಿಡ್ ಎರಡನೆಯ ಅಲೆಯ ಉಪಟಳ ಹೆಚ್ಚಾಗಿರುವ ಈ ಗಂಭೀರ ಸಂದರ್ಭದಲ್ಲಿ, ನಮ್ಮ ಇಷ್ಟಾಪ್ತರು ಸುಖ-ಶಾಂತಿಯನ್ನು ಪಡೆಯಲಿ ಎಂದು ಆ ಕೃಷ್ಣ ಪರಮಾತ್ಮನ ಮೊರೆ ಹೋಗಬೇಕು ಎಂದು ಹೇಳಿದರು.

‘ಸಕಲ ಗ್ರಹಬಲ ನೀನೇ ಸರಸಿಜಾಕ್ಷ’ ಎಂಬ ದಾಸವಾಣಿಯಂತೆ ಪಂಚಾಂಗ ಏನೇ ಹೇಳಿದರೂ, ಅದನ್ನೆಲ್ಲಾ ಆ ಪರಮಾತ್ಮನ ದಯದಿಂದ ನಿವಾರಿಸಿಕೊಳ್ಳಬಹುದು ಎಂಬ ಹಿತ ನುಡಿದರು.

ನಂತರ, ದಿನದ ಮುಖ್ಯ ಅತಿಥಿಗಳಾಗಿದ್ದ ಡಾ॥ ತೇಜಸ್ವಿನಿ ಅನಂತ್ ಕುಮಾರ್ ಅವರು ಹೇಗೆ ಭೂತಾಯಿ ನಮ್ಮ ದೇವರಂತೆ, ಅದನ್ನು ಉಳಿಸಿ, ಬೆಳೆಸುವುದು ನಮ್ಮೆಲ್ಲರ ಆದ್ಯ ಕರ್ತವ್ಯ ಎಂದು ಮನವರಿಕೆ ಮಾಡಿಕೊಟ್ಟರು. ಅವರ ಮುಂದಾಳುತನದಲ್ಲಿ ನಡೆಸುತ್ತಿರುವ ಸ್ವಯಂಸೇವಕರ ಸಂಸ್ಥೆ ‘ಅದಮ್ಯ ಚೇತನ’ ಈ ನಿಟ್ಟಿನಲ್ಲಿ ಕಾರ್ಯಗತ ಮಾಡಿರುವ ಹಲವಾರು ಯೋಜನೆಗಳನ್ನು ಸಂಕ್ಷಿಪ್ತವಾಗಿ ತಿಳಿಸಿಕೊಟ್ಟರು.  ಪೌಷ್ಟಿಕ ಆಹಾರವನ್ನು ಕೊರತೆ ಇರುವರಿಗೆ ಸರಬರಾಜು ಮಾಡುವುದು, ನಿಸರ್ಗಕ್ಕೆ ಪೂರಕವಾದ ಯೋಜನೆಗಳಲ್ಲಿ ಜನರಿಗೆ ತರಬೇತಿ ನೀಡುವುದು ಮುಂತಾದವುಗಳ ಬಗ್ಗೆ ಹೇಳಿದರು.  ಅವರ ಈ ನಿಸ್ವಾರ್ಥ ಸೇವಾ ಮನೋಭಾವ ಎಲ್ಲರಲ್ಲಿ ಈ ರೀತಿಯ ಕೆಲಸಗಳನ್ನು ಮಾಡಲು ಸ್ಫೂರ್ತಿ ನೀಡಿತು.





ಬೃಂದಾವನ ಕನ್ನಡ ಶಾಲೆಯ ಮಕ್ಕಳ ಸೊಗಸಾದ ಕಾರ್ಯಕ್ರಮಗಳು ಮುಂದಿನ ಕಂತಿನಲ್ಲಿ ಆರಂಭಗೊಂಡಿತು.  ಎಡಿಸನ್ ಶಾಲೆಯ ಮಕ್ಕಳು ಯುಗಾದಿ ಹಬ್ಬದ ವಿಶೇಷಗಳನ್ನು ಗೀತಾ-ನರ್ತನದಿಂದ ಪ್ರದರ್ಶಿಸಿದರೆ, ಹಿಲ್ಸ್ ಬೊರೊ ಶಾಲೆಯ ಮಕ್ಕಳು ದೇವರ ನಾಮ ಮತ್ತು ನಳಪಾಕಗಳಿಂದ ನಮಗೆ ಹಬ್ಬವನ್ನು ಪರಿಚಯಿಸಿದರು. ಜೀವನದಲ್ಲಿ ಪರೋಪಕಾರವೇ ಸರ್ವಶ್ರೇಷ್ಠವೆಂಬ ಸಂದೇಶವನ್ನು ಸೌತ್ ಬ್ರನ್ಸ್ವಿಕ್ ಶಾಲೆಯ ಮಕ್ಕಳು, **ವಿನಮ್ರ ಹಣತೆ** ಎಂಬ ಕಾರ್ಯಕ್ರಮದೊಂದಿಗೆ ಸುಂದರವಾಗಿ ಚಿತ್ರಿಸಿದರು. ಈಸ್ಟ್ ವಿಂಡ್ಸರ್ ಶಾಲೆಯ ಮಕ್ಕಳು ಶ್ರೀನಿವಾಸ ಉಡುಪರ **‘ಕುಂಭಕರ್ಣನ ನಿದ್ದೆ’** ನಾಟಕವನ್ನು ತಿಳಿಹಾಸ್ಯದೊಂದಿಗೆ ಉತ್ಕೃಷ್ಟವಾಗಿ ಅಭಿನಯಿಸಿದರು.  ಅವರ ಪ್ರಸ್ತುತಿಯಲ್ಲಿ ತಾಂತ್ರಿಕ ವರ್ಗದ ನೈಪುಣ್ಯ ಹಾಗೂ ಶ್ರಮ ಎದ್ದು ತೋರುತ್ತಿತ್ತು. ಮಾರ್ಲ್ ಬೊರೊ ಕನ್ನಡ ಶಾಲೆಯ ಮಕ್ಕಳು ಟಿ.ಪಿ ಕೈಲಾಸಂ ಅವರ ವಿಭಿನ್ನ ಶೈಲಿಯನ್ನು ಆಧರಿಸಿದ ಹಾಡುಗಳ ಮೂಲಕ ಮಕ್ಕಳು ಹೇಗೆ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳೆರಡನ್ನೂ ಸಮಂಜಸವಾಗಿ ತಮ್ಮ ಜೀವನದಲ್ಲಿ ರೂಢಿಸಿಕೊಳ್ಳಬಹುದು ಎಂಬುದನ್ನು ಕೋಳಿಕೆರಂಗ ಮತ್ತು ಬೋರೇಗೌಡನ ಉದಾಹರಣೆಗಳೊಂದಿಗೆ ಹೇಳಿ ಎಲ್ಲರನ್ನು ನಗಿಸಿದರು.








ಭೋ ಶಂಭೋ ಶಿವ ಶಂಭೋ' ಹಾಡಿಗೆ ಯುವ ಬೃಂದಾವನ ತಂಡ ಮಿಂಚು ಸೋಕಿಸುವಂಥ ನರ್ತನ ಮಾಡಿದರೆ, 'ಎಲ್ಲೆಲ್ಲೂ ಹಬ್ಬ ಹಬ್ಬ, ಬಂತು ಯುಗಾದಿ ಹಬ್ಬ' ಎಂದು ಬೃಂದಾವನದ ವಯಸ್ಕರ ತಂಡ ಸ್ಫೂರ್ತಿ ಲಿಸಿದರು. ಕೋವಿಡ್ ಲಾಕ್ ಡೌನ್ ನಮ್ಮ ದಾಂಪತ್ಯ ಜೀವನಗಳ ಮೇಲೆ ಬೀರಿರುವ ಪ್ರಭಾವವನ್ನು ನಗುವಳಿಯ ಮೂಲಕ ತಿಳಿಸಿದ 'ಒಂದು ಲಾಕ್ ಡೌನ್‌ನ ಕಥೆ' ಅಣಕನಾಟಕ, ಕನ್ನಡ ಚಲನಚಿತ್ರಗಳ ಕೆಲವು ಹೆಸರಾಂತ ಹಾಸ್ಯ ಸನ್ನಿವೇಶ, ಸಂಭಾಷಣೆಗಳನ್ನು ಪೋಣಿಸಿ ವೀಕ್ಷಕರನ್ನು ನಕ್ಕು ನಲಿಸಿತು. ಹಬ್ಬಗಳಲ್ಲಿ ವನಿತೆಯರು ಉಟ್ಟ ಬಣ್ಣ ಬಣ್ಣದ ಸೀರೆಗಳು, ಅಲಂಕಾರಗಳು ಇವುಗಳನ್ನು ನಿದರ್ಶಿಸುವ 'ಬಣ್ಣ ನನ್ನ ಒಲವಿನ ಬಣ್ಣ' ಹಾಡಿಗೆ ಬೃಂದಾವನದ ಬೆಡಗಿಯರು ಕ್ಯಾಟ್ ವಾಕ್ ಮಾಡಿ ಕಾರ್ಯಕ್ರಮದ ರಂಗೇರಿಸಿದರು.

'ಹೊಸ ವರುಷಕೆ ಹೊಸ ಹರುಷವ ಹೊಸತು ಹೊಸತು ತರುತಿದೆ' ಎಂಬ ಕವಿನುಡಿಯಂತೆ ಬೃಂದಾವನದ ಈ ವರುಷದ ವಸಂತೋತ್ಸವ ಕಾರ್ಯಕ್ರಮ ಸದ್ಯದ 'ಬೇವಿನ ಕಹಿ ಬಾಳಿನಲಿ, ಹೂವಿನ ನಸುಗಂಪು ಸೂಸಿ, ಜೀವಕಳೆಯ' ತಂದಿತು ಎಂದರೆ ಅತಿಶಯಿಸಿದಂತಾಗದು.

ಪೊರೆಯೋ ಇಳೆ,
ಸುರಿಯೋ ಮಳೆ,
ಹರಿಯೋ ಹೊಳೆ,
ಬೆಳೆಯೋ ಬೆಳೆ,
ಬೆಳಗೋ ಸೂರ್ಯ,
ಬೀಸೋ ಗಾಳಿ,
ದಹಿಸೋ ಬೆಂಕಿ
ಇವೆಲ್ಲಕೆ, ಮತ್ತೆಲ್ಲಕೆ
ಮೆತ್ತಿಲ್ಲದ ಮತ್ತಿಲ್ಲದ
ಮೈಲಿಗೆ....!!!
ಹೇಳು ಮೆಲ್ಲಗೆ
ಮನದ ಮಲ್ಲಿಗೆ
ಬೇರೆಲ್ಲಿದೆ ಮೈಲಿಗೆ...!!!



ಶ್ರೀಕಾಂತ ಪತ್ರೆಮರ



ಚಿತ್ರ: ನರಸಿಂಹ ಮೂರ್ತಿ



# ಪ್ರೊಫೆಸರ್ ಜಿ.ವಿ. ಒಂದು ನೆನಪು

*ಡಾ. ಎಲ್. ಉಮಾದೇವಿ* , ಬೆಂಗಳೂರು

**ಪ್ರೊ**ಫೆಸರ್ ಜಿ. ವೆಂಕಟಸುಬ್ಬಯ್ಯ (ಜಿ.ವಿ) ಯವರು ಕನ್ನಡ ನಾಡು ಕಂಡ ಕೇವಲ ದೊಡ್ಡ ವ್ಯಕ್ತಿ ಅಲ್ಲ ಅವರೇ ಒಂದು ವಿಶ್ವವಿದ್ಯಾಲಯ ಎಂದರೆ ತಪ್ಪಾಗಲಾರದು. ಅವರ ಹೆಸರನ್ನು ಕೇಳದವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಹಳ ವಿರಳ. ಅವರ ಒಲವು ಮೊದಲಿನಿಂದಲೂ ಪದ, ಶಬ್ದ ಅವುಗಳ ಮೂಲ, ವ್ಯಾಪ್ತಿ, ಅರ್ಥಗಳ ಕಡೆಗೆ ಇದ್ದಷ್ಟು, ಆ ಪದಗಳನ್ನು ಆಲಂಕಾರಿಕವಾಗಿ ಕಾವ್ಯದಲ್ಲಿ ಬಳಸಿ ಹೊಸ ಕಾವ್ಯ



ಸೃಷ್ಟಿಯಲ್ಲಿ ಇರಲಿಲ್ಲ. ಅವರು ಅನೇಕ ನಿಘಂಟುಗಳು, ಪದಕೋಶ, ನಿಘಂಟು ಪರಿವಾರ, ಇಗೋ ಕನ್ನಡ, ಕನ್ನಡ - ಕನ್ನಡ - ಇಂಗ್ಲೀಷ್ ಡಿಕ್ಷನರಿಗಳ ಸೃಷ್ಟಿಕರ್ತರಾಗಿದ್ದರು. ಹಾಗೆಂದಮಾತ್ರಕ್ಕೆ ಕಾವ್ಯ ರಚನೆ ಮಾಡಿಲ್ಲವೆಂದಲ್ಲ. ಲಿಂಡನ್ ಜಾನ್ಸನ್ ಕಥೆ, ಚಿಣ್ಣರ ಚಿತ್ರ ರಾಮಾಯಣ, ಕಬೀರ್, ರಾಮಾಯಣದ ಅಂತರಂಗ, ಬಾಳಿಗೊಂದು ಬೆಳಕು, ರಾಮಾಯಣ ನಾಟಕಗಳಲ್ಲಿ ಪಾತ್ರವೈವಿಧ್ಯ ಹೀಗೆ ಹತ್ತು ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಅವರು ಮಲೆಯಾಳಂ ಹಾಗೂ ತೆಲುಗು ಭಾಷೆಯ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕನ್ನಡ ಎನ್ಸೈಕ್ಲೋಪೀಡಿಯದ ರಚನಾ ಕಾರ್ಯದಲ್ಲೂ ತೊಡಗಿಕೊಂಡಿದ್ದರು.

ಅವರು ಕನ್ನಡ - ಕನ್ನಡ ನಿಘಂಟಿನ ಮುಖ್ಯ ಸಂಪಾದಕರಾಗಿದ್ದರು. ಅದು ಕನ್ನಡದ ಬಹಳ ದೊಡ್ಡ ಆಸ್ತಿಯೇ ನಿಜ. ಒಟ್ಟು ಎಂಟು ಸಂಪುಟಗಳನ್ನು ಒಳಗೊಂಡಿರುವ ಈ ಕೃತಿ ನಿಜವಾಗಿಯೂ ಒಂದು ಅದ್ಭುತ ಸೃಷ್ಟಿ ಎನ್ನಬಹುದು. ಈ ಸಂಪುಟಗಳು ಬೇರೆ ಬೇರೆಯಾಗಿ ಬಿಡುಗಡೆಯಾಗುತ್ತಿತ್ತು. ನಾನು ಮೂರು ಸಂಪುಟಗಳು ಬಿಡುಗಡೆಯಾದ ನಂತರ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಅವುಗಳನ್ನು ತೆಗೆದುಕೊಂಡೆ. ನಂತರ ಪ್ರತಿಯೊಂದು ಸಂಪುಟವನ್ನೂ ಅದರ ಬಿಡುಗಡೆಯ ಸಮಯ ಕಾದು ತೆಗೆದುಕೊಳ್ಳುತ್ತಾ ಹೋದೆ. ಎಂಟೂ ಸಂಪುಟಗಳು ಬಂದಾಗ ಅವು ನನ್ನ ಬಳಿ ಇದೆ ಎಂಬ ಹೆಮ್ಮೆ ನನಗೆ. ನನ್ನ ಮೊಮ್ಮಗ 2010 ರಲ್ಲಿ ಹುಟ್ಟಿದಾಗ, ನಮ್ಮ ಮಾವನವರು ಆ ಎಂಟೂ ಸಂಪುಟಗಳನ್ನು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಕೊಂಡು ತರುವಂತೆ ಹೇಳಿದರು. ನಾನು ನನ್ನ ಬಳಿ ಇದೆ ಎಂದೆ. ಅವರು "ನಿನಗಲ್ಲ, ನನ್ನ ಮರಿಮಗನಿಗೆ ಅದನ್ನು ನಾನು ಉಡುಗೊರೆಯಾಗಿ ಕೊಡಬೇಕು. ಅವನೂ ಅದನ್ನು ಓದಿ, ಅರ್ಥೈಸಿಕೊಂಡು, ಅವರಂತೆ ಉನ್ನತವಾದ ವ್ಯಕ್ತಿತ್ವವನ್ನು ಪಡೆಯುವಂತಾಗಬೇಕು" ಎಂದರು. ನನಗೆ ಬಿಡುವಾಗದ ಕಾರಣ ಕೆಲದಿನಗಳು ಹೋಗಿ ತರಲು ಸಾಧ್ಯವಾಗಲಿಲ್ಲ. ಅವರು "ನಿನಗೆ ಆಗುವುದಿಲ್ಲ ಎಂದರೆ ಹೇಳು, ನಾನೇ ಹೋಗಿ ತರುತ್ತೇನೆ" ಎಂದರು. ಆಗ ಅವರಿಗೆ 93 ರ ಸನಿಹದ ವಯಸ್ಸು. ಆರೋಗ್ಯವೂ ಕೈಕೊಡುತ್ತಿತ್ತು. ಆದರೂ ಆ ಉತ್ಸಾಹ ಮೆಚ್ಚುವಂತಿತ್ತು. ನಾನು "ಇಲ್ಲ, ಇವತ್ತೇ ತರುತ್ತೇನೆ" ಎಂದು ಮರುದಿನವೇ ಕಾಲೇಜಿನಿಂದ ಬರುವಾಗ ಪರಿಷತ್ತಿಗೆ ಹೋಗಿ ತೆಗೆದುಕೊಂಡು ಬಂದೆ. ಅವರಿಗೆ ಅದನ್ನು ಎತ್ತಲು ಆಗದಷ್ಟು ಭಾರ ಇದ್ದರೂ, ಮಗುವಿನ ಸಮೀಪ ಅದನ್ನು ಹಿಡಿದು, "ನೋಡು ಮಗು, ಇದು ಬಹಳ ಮುಖ್ಯವಾದ

ವಸ್ತು. ಜೋಪಾನವಾಗಿ ಕಾಪಾಡಿಕೋ. ನೀನು ದೊಡ್ಡವನಾದ ಮೇಲೆ ಈ ಸಂಪುಟಗಳ ಸಹಾಯದಿಂದ ದೊಡ್ಡ ಗ್ರಂಥಗಳನ್ನು ಅಭ್ಯಾಸ ಮಾಡಬೇಕು, ಮತ್ತೆ ಅವರಂತೆ ಉನ್ನತ ವ್ಯಕ್ತಿತ್ವ ನಿನ್ನದಾಗಿಸಿಕೊಳ್ಳಬೇಕು" ಎಂದರು. ನಾಲ್ಕು ತಿಂಗಳ ಮಗುವಿಗೆ ಏನು ಅರ್ಥವಾಗಲು ಸಾಧ್ಯ! ಆದರೆ ಆ ಮಾತುಗಳಿಂದ ಅವರೂ, ನಾವುಗಳೂ ಭಾವುಕರಾಗಿದ್ದಂತೂ ನಿಜ. ನಂತರ ಹದಿನೈದು ದಿನಗಳಲ್ಲಿ ಅವರು ನಮ್ಮನ್ನು ಅಗಲಿದರು.

ಜಿ.ವಿ.ಯವರನ್ನು ನಾನು ಅನೇಕ ಬಾರಿ ನಮ್ಮ ಸಂಬಂಧಿಕರ ಮನೆಯ ಸಮಾರಂಭಗಳಲ್ಲಿ ನೋಡಿದ್ದೆ. ಆದರೆ ದೂರದಿಂದಲೇ ನಮಸ್ಕರಿಸಿದ್ದೆ. ಅದೇಕೋ ಅಷ್ಟು ದೊಡ್ಡ ವ್ಯಕ್ತಿಯೊಡನೆ ಹೇಗೆ, ಏನು ಮಾತನಾಡುವುದು ಎಂಬ ಸಂಕೋಚ.

2016 ರಲ್ಲಿ ನಾನು ಡಾ. ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗಕ್ಕೆ ಸರಳವಾದ ಭಾಷೆಯಲ್ಲಿ ಕನ್ನಡದಲ್ಲಿ ಅರ್ಥ ಬರೆಯುವ ಪ್ರಯತ್ನ ಮಾಡಿದೆ. ಅದರೊಂದಿಗೆ ಆಂಗ್ಲ ಭಾಷೆಗೂ ಅನುವಾದ ಮಾಡಿದೆ. ಬಹಳಷ್ಟು ಪುಸ್ತಕಗಳು ಇದ್ದರೂ, ನನಗೆ ಪ್ರತಿಬಾರಿ ಓದಿದಾಗಲೂ ಹೊಸ ಅರ್ಥವೇ ಹೊಳೆಯುವಂತೆ ಅನಿಸುತ್ತಿದ್ದ ಕೃತಿಯನ್ನು ಅನುವಾದಿಸುವ ತುಡಿತ ಉಂಟಾಗಿ ಅನುವಾದಿಸಿ, ಅದನ್ನು ಅಮೇಝಾನ್ - ಕಿಂಡಲ್ ನಲ್ಲಿ ಪ್ರಕಟಿಸಿದೆ. ಅದನ್ನು ಓದಿ ನಮ್ಮ ಆತ್ಮೀಯರು, ಅದನ್ನು ಜಿ.ವಿ.ಯವರಿಗೆ ತೋರಿಸು ಎಂದರು, ತಾವೇ ಕರೆದುಕೊಂಡು ಹೋಗಿ ಪರಿಚಯ ಮಾಡಿಕೊಟ್ಟರು. ನಾನು ಬಹಳ ಅಳುಕಿನಿಂದಲೇ ತೋರಿಸಿದೆ. ಎರಡೂ ಭಾಷೆಯ ಅನುವಾದಗಳನ್ನು ಓದಿ, "ತುಂಬಾ ಚೆನ್ನಾಗಿ ಬಂದಿದೆ. ಯಾಕೆ ಪ್ರಕಟಿಸಿಲ್ಲ? ಪುಸ್ತಕ ರೂಪದಲ್ಲಿ ತರಬೇಕು" ಎಂದು ಹೇಳಿ ಅವರ ಮಗನಿಗೆ ಪ್ರಕಾಶಕರ ಹತ್ತಿರ ಮಾತನಾಡುವಂತೆ ಹೇಳಿದರು ಕೂಡ. ಆದರೆ ದುರಾದೃಷ್ಟವಶಾತ್ ಆ ಪ್ರಕಾಶಕರು ಕೆಲ ದಿನಗಳಲ್ಲೇ ವಿಧಿವಶರಾದರು.

ಅವರನ್ನು ಕಾಣಲು ಹೋದಾಗ ಅವರ ಆತ್ಮೀಯತೆ, ಅಂತಹ ದೊಡ್ಡ ವ್ಯಕ್ತಿ ನನ್ನ ಕೆಲಸವನ್ನು ನೋಡಿ ಮೆಚ್ಚುಗೆ ಸೂಚಿಸಿದ್ದು, ಸುಮಾರು ಒಂದು ಗಂಟೆಯ ಕಾಲ ಆತ್ಮೀಯವಾಗಿ ಮಾತನಾಡಿದ್ದು, ಹಣ್ಣು, ಕಾಫಿಗಳ ಆತಿಥ್ಯ ಮಾಡಿಸಿ , ಹೊರಟಾಗ, "ಏನೂ ತಿಳಿದುಕೊಳ್ಳಬೇಡಿ, ಗೇಟಿನವರೆಗೆ ಬಂದು ಕಳಿಸಿಕೊಡಲು ನನಗೆ ಸಾಧ್ಯವಾಗುತ್ತಿಲ್ಲ. ಈಚೆಗೆ ಈ ಕೈಗೋಲು ಬೇರೆ ಬಂದಿದೆ." ಎಂದರು. ಅದನ್ನು ಕೇಳಿದಾಗ ಅವರ ಸರಳತೆಗೆ ಏನು ಹೇಳಬೇಕೋ ಗೊತ್ತಾಗದೆ ಒಂದು ಕ್ಷಣ ನಿಂತು ಆಮೇಲೆ "ದಯವಿಟ್ಟು ಆ ತೊಂದರೆ ತೆಗೆದುಕೊಳ್ಳಬೇಡಿ, ನಾವು ಹೋಗಿಬರುತ್ತೇವೆ." ಎಂದು ಅವರಿಗೆ ನಮಸ್ಕರಿಸಿ ಹೊರಟೆ.

ಮತ್ತೆ ಹೋಗಿ ಅವರನ್ನು ಕಾಣಬೇಕೆಂದು ಅಂದುಕೊಂಡಿದ್ದು ಎಷ್ಟು ಬಾರಿಯೋ! ಅದೇಕೋ ಆಗಲೇ ಇಲ್ಲ. ಊರಿನ ತುಂಬಾ ಕೋವಿಡ್ ಇದ್ದುದರಿಂದ ಮನೆಗಷ್ಟೇ ಸೀಮಿತವಾಗಿ ಬದುಕುತ್ತಿರುವುದರಿಂದ ಕೊನೆಯಲ್ಲೂ ಕಾಣಲು ಹೋಗಲಾಗಲಿಲ್ಲ. ಆ ಬೇಸರ, ನೋವು ಈಗಲೂ ಕಾಡುತ್ತದೆ. ಆದರೆ ಅಂತಹ ಶ್ರೇಷ್ಠ ವ್ಯಕ್ತಿಯನ್ನು ಕಂಡಿದ್ದೆ, ಅವರೊಡನೆ ಕುಳಿತು ಮಾತನಾಡಿದ್ದೆ ಎಂಬ ತೃಪ್ತಿ ಇದೆ.



## ನಾನೇಕೆ ಹೀಗಾದೆ

ನಾನ್ಯಾರೆಂದು ಹುಡುಕಿಕೊಟ್ಟವನ ವರಿಸಲಾಗದೆ,
ಮಾಲೆ ಹಾಕಿ ಕೊಂಡೊಯ್ದು ಮಾಲಿಕನ ಬಿಡಲಾರದೆ,
ಸರಿ ತಪ್ಪುಗಳ ಮನೋಕದನದಲ್ಲಿ ಬಡವಾದ ಕೂಸು ನಾನು..

ವಿದೇಶದ ಐಷಾರಾಮಿ ಬದುಕಿನ ಅಲೆ,
ಮನಗೆದ್ದ ಮಲೆನಾಡಿನ ಮಳೆ,
ಎರಡನ್ನೂ ಬಿಟ್ಟು, ಮರಳುಗಾಡಿನಲ್ಲಿಯೂ
ಮಳೆಯಾಗಬಹುದೆಂದು ಕನಸು ಕಾಣುತ್ತಿರುವ ಮರುಳೆ ನಾನು!

ದೀಪ ಹಚ್ಚಬೇಕಾದ ಮುತ್ತೈದೆ, ಮತ್ತದೇ ಹಳೇ ನೆನಪುಗಳು
ಮನದಲ್ಲಿರುವಾಗ, ಮನೆ ಬೆಳಕಾದೀತು ಹೇಗೆ?
ಮನ ಮುದವಾದೀತು ಹೇಗೆ?
ಮುದ್ದಾದ ಮಗುವೊಂದು ಮಡಿಲು ತುಂಬೀತು ಹೇಗೆ?

ಆಗುತ್ತಿತ್ತೇನೋ ಅಲ್ಲೊಮ್ಮೆ ಇಲ್ಲೊಮ್ಮೆ ತುಂತುರು ಮಳೆ,
ಈ ಬಿಸಿಲ ಭೂತಕ್ಕೆ ಭಯಗೊಂಡು ಬಿರುಗಾಳಿಯೊಡನೆ ಬೀಗುತ್ತ
ಹೋಯಿತಲ್ಲ!
ಮನದರಸಿಯೇ ಮನದ ಮಾತುಗಳ ಆಲಿಸದಿದ್ದಾಗ, ಮಾಲೀಕ
ಮುಖ ತಿರುಗಿಸಿ ಹೋಗಿಯೇ ಬಿಟ್ಟನಲ್ಲ!!

ಮರಳುಗಾಡಿನಲ್ಲಿನ ಓಯಾಸ್ಸಿಸ್ಸಿನ ಹುಡುಕಾಟದಲ್ಲಿ
ವಯಸ್ಸಾದದ್ದಂತೂ ತಿಳಿಯಲೇಯಿಲ್ಲ...
ಬೇಕು ಬೇಡಗಳ ಹೊಯ್ದಾಟದಲ್ಲಿ ಹಗಲಿರುಳುಗಳು
ಉರುಳಿಹೋದವಲ್ಲ!
ಇದ್ದದ್ದನ್ನು ಬಿಟ್ಟು, ಸಿಗಲಾರದ್ದನ್ನು ಅರಸಿ,
ಬಾಳ ಕುಸುಮ ಬಾಡಲಾರಂಭಿಸಿದಾಗ ಆ ಬೊಜ್ಜು ಬಾಯಿಯಿಂದ
ಬಂದ ಬೆಂದ ಸಾಲುಗಳೇ.......

ನಾನೇಕೆ ಹೀಗಾದೆ ???
ಬಂಗಾರದಂತ ಬಾಳ ಬರಿದಾಗಿಸಿಕೊಂಡು ಬಡವಿಯಾದೆ..
ಬಂಗಾರದಂತ ಬಾಳ ಬರಿದಾಗಿಸಿಕೊಂಡು ಬಡವಿಯಾದೆ..

**- ಕಾವ್ಯಶ್ರೀ .ಹೆಚ್. ಎಲ್, ದುಬೈ- ಯು.ಎ.ಇ.**



# ಜರಗನಹಳ್ಳಿ ಶಿವಶಂಕರ್

ಶ್ರೀಕಾಂತ ಪತ್ರೆಮರ, ಬೆಂಗಳೂರು

ನಾನು ಕೆನರಾ ಬ್ಯಾಂಕ್ ಪ್ರಧಾನ ಕಾರ್ಯಾಲಯದಲ್ಲಿ ವೃತ್ತಿಗೆ ಸೇರಿದ್ದ 1992 ಸಮಯದಲ್ಲಿ, ಸಣ್ಣಗೆ ಬಹಳ ಬಾಲಿಶವಾಗಿ ಚುಟುಕು, ಹನಿಗವನ ಬರೆಯುವ ಆಸಕ್ತಿ ಇತ್ತು. ನಮ್ಮ ಸಹೋದ್ಯೋಗಿಗಳು ನನ್ನ ಆಸಕ್ತಿಯನ್ನು ಕಂಡು ನೋಡಿ, ನಮ್ಮ ಪ್ರಧಾನ ಕಾರ್ಯಾಲಯದಲ್ಲೇ ಸೊಗಸಾದ ಹನಿಗವನಗಳನ್ನು ಬರೆಯುವ ಉದ್ಯೋಗಿ ಇದ್ದಾರೆ. ಅವರನ್ನು ಭೇಟಿ ಮಾಡಿ, ನಿಮ್ಮ ಬರಹಕ್ಕೆ ತುಸು ಮಾರ್ಗದರ್ಶನ ಸಿಗಬಹುದು ಎಂದು ಸಲಹೆಯಿತ್ತರು. ಹೌದಾ ಯಾರದು ಎಂದು ನಾನು ಕೇಳಿದಾಗ. ಜರಗನಹಳ್ಳಿ ಶಿವಶಂಕರ್ ಎಂದು ಹೆಸರು, ಬದಾಮಿ ಹೌಸ್‌ನಲ್ಲಿರುವ ಪ್ರಿಂಟಿಂಗ್ ಮತ್ತು ಸ್ಟೇಷನರಿ ಸೆಕ್ಷನ್‌ನಲ್ಲಿ ಅವರ ನೌಕರಿ, ಭೇಟಿಯಾಗಿ ಎಂದರು.

ಜರಗನಹಳ್ಳಿ ಶಿವಶಂಕರ್ ಎಂದ ತಕ್ಷಣ, ಅವರ ಹಲವಾರು ಹನಿಗವನಗಳನ್ನು ಸುಧಾ, ತರಂಗ ಮಯೂರ ಮತ್ತು ವಿಶೇಷಾಂಕಗಳಲ್ಲಿ ಓದಿದ್ದ ನೆನಪಾಯಿತು. ಇಷ್ಟು ಚೆನ್ನಾಗಿ ಬರೆಯುವ ಜನಪ್ರಿಯ ಕವಿಯೊಬ್ಬರು ನಮ್ಮ ಬ್ಯಾಂಕ್‌ನಲ್ಲೇ ಇರುವ ವಿಷಯ ಪುಳಕ ತಂದಿತ್ತು. ಕಾರಣ ನಾನು ಅ ಮೊದಲು ಹಳ್ಳಿಯ ವಾತಾವರಣದಲ್ಲಿ ಬೆಳೆದವನು. ಪುಸ್ತಕಗಳಲ್ಲಿ ಕವಿಗಳ, ಕವಿ-ಕಾವ್ಯ ಪರಿಚಯ ಓದಿದ್ದವನಷ್ಟೆ. ಯಾವೊಂದು ಹೆಸರಾಂತ ಕವಿಯನ್ನೂ ಹತ್ತಿರದಿಂದ ನೋಡಿದವನಲ್ಲ, ಮಾತನಾಡಿಸಿದವನಲ್ಲ ಆವರೆಗೆ. ಸಹಜವಾಗೇ ಕುತೂಹಲವಿತ್ತು. ಬೆಂಗಳೂರಿಗೆ ಹೊಸದಾಗಿ ಬಂದ ಸಮಯವದು. ಜರಗನಹಳ್ಳಿಯವರನ್ನು ಭೇಟಿ ಮಾಡಲು ಮನಸ್ಸು ತುಡಿಯುತ್ತಿತ್ತು.

ಒಂದು ಸೂಕ್ತ ಸಮಯ ನೋಡಿ ಅವರು ಕೆಲಸ ಮಾಡುವ ಜಾಗಕ್ಕೆ ಹೋಗಿ ಪರಿಚಯ ಹೇಳಿಕೊಂಡೆ. ಬಹಳ ಆತ್ಮೀಯವಾಗಿ ಬರಮಾಡಿಕೊಂಡು ಸುಮಾರು ಒಂದು ಗಂಟೆ ಸಂವಾದಿಸಿದರು. ನನ್ನ ಬಾಲಿಶ ಚುಟುಕುಗಳನ್ನು ಓದಿದರು. ಧನಾತ್ಮಕವಾಗಿ ಪ್ರತಿಕ್ರಿಯಿಸುತ್ತ, ಬರೆಯುತ್ತ ಹೋಗಿ, ಔನ್ನತ್ಯ ಸಾಧಿಸುವಿರಿ, ಆಗಾಗ ಬರುತ್ತಿರಿ ಎಂದು ಹರಸಿದರು. ಮುರಳಿ ಎಂಬ ಮತ್ತೊಬ್ಬ ನಮ್ಮ ಬ್ಯಾಂಕ್ (ಗಡ್ಡದಾರಿ) ಹಾಗೂ ವರದರಾಜನ್ ಎಂಬುವ ಸಹೋದ್ಯೋಗಿ ಮಿತ್ರರೂ ಕವಿತೆ ಚುಟುಕು ಹನಿಗವನಗಳನ್ನು ಬರೆಯುತ್ತಿದ್ದರು. ಅವರೂ ಜರಗನಹಳ್ಳಿಯವರ ಜೊತೆ ದೀರ್ಘಕಾಲದವರೆಗೆ ಸಾಹಿತ್ಯದ ವಿಷಯ ಚರ್ಚಿಸುತ್ತಿದ್ದರು. ಆಗ ನಾನೂ ಬರೆಯಬೇಕೆಂಬ ಆಸಕ್ತಿಗೆ ಒಳಗಾದೆನು. ಹೀಗೆ ಜರಗನಹಳ್ಳಿಯವರು, ನನಗೆ ಬರೆಯುವ ಮತ್ತು ಕನ್ನಡ ಸಾಹಿತ್ಯ ಓದುವ ಕಡೆ ಸ್ಪೂರ್ತಿ ಮತ್ತು ಪ್ರೇರಣೆ ನೀಡಿದವರು.

ನಾನು ಬರೆದ ಚುಟುಕು, ಹನಿಗವನಗಳನ್ನು ಅಂಚೆ ಲಕೋಟೆಯ ಮೂಲಕ ತರಂಗ, ಸುಧಾ, ಮಯೂರ ಪತ್ರಿಕೆಗಳಿಗೆ ಕಳುಹಿಸಿಕೊಟ್ಟೆ. ಯಥಾವತ್ತಾಗಿ ಅಸ್ವೀಕೃತವಾಗಿ ವಾಪಸ್ ಬಂದವು. ನನಗೆ ನನ್ನ ರಚನೆಗಳೂ ರಾಜ್ಯಮಟ್ಟದ ನಿಯತಕಾಲಿಕೆಗಳಲ್ಲಿ ಪ್ರಕಟವಾಗಬೇಕೆಂಬ ಉತ್ಕಟತೆಯಿತ್ತು. ಆದರೆ ಕಸುವಿಲ್ಲದ ಸಾಹಿತ್ಯವ ಯಾರು ಒಪ್ಪಿಯಾರು? ಆಗ ನನ್ನದು ಹುಡುಗುತನ. ನನಗೆ ಅದರ ಅರಿವಿರಲಿಲ್ಲ. ಅಲ್ಲಿಗೆ ನನ್ನ ಬರೆಯುವ ಉತ್ಸಾಹವೂ ಕುಂದಿತು. ಬರೆಯುವ ಸಾಹಸಕ್ಕೆ ತಾತ್ಕಾಲಿಕವಾಗಿ ತಿಲಾಂಜಲಿಯಿಟ್ಟೆ.

ಅದರೆ ಜರಗನಹಳ್ಳಿಯವರ ಜೊತೆಯ ಒಡನಾಟ ಮಾತ್ರ ಮುಂದುವರಿದಿತ್ತು. ಹಾಗೆಯೇ ಹಲವು ವರ್ಷಗಳು ಕಳೆದವು. ನಮ್ಮ ಬ್ಯಾಂಕ್‌ನಿಂದ ಸ್ವಯಂ ನಿವೃತ್ತಿ ತೆಗೆದುಕೊಂಡ ಜರಗನಹಳ್ಳಿಯವರು, ನೂರು ಶತ ತಮ್ಮನ್ನು ಸಾಹಿತ್ಯದ ಕ್ಷೇತ್ರದಲ್ಲಿ ತೊಡಗಿಸಿಕೊಂಡರು. ಹಲವಾರು ಪುಸ್ತಕಗಳನ್ನು ಪ್ರಕಟಿಸಿದರು. ಸಾಹಿತ್ಯ ಸಂಘಟನಾ ಕ್ಷೇತ್ರದಲ್ಲೂ ಗಟ್ಟಿ ಹೆಜ್ಜೆಗಳನ್ನಿಟ್ಟರು. ಅವರ ದಿಢೀರ್ ಬೆಳವಣಿಗೆ ನನ್ನನ್ನು ಬೆರಗುಗೊಳಿಸಿತು. ನಾಡಿನ ಹೆಸರಾಂತ ಸಾಹಿತಿಗಳ ಸಾಲಿನಲ್ಲಿ ಜರಗನಹಳ್ಳಿಯವರೂ ರಾರಾಜಿಸುತ್ತಿದ್ದರು. ಅದನ್ನು ಪತ್ರಿಕೆಗಳಲ್ಲಿ ಓದಿ ಹೆಮ್ಮೆ ಪಡುತ್ತಿದ್ದೆನು.

ಆಗಾಗ ಅವರ ಮನೆಗೆ ಹೋಗಿ ಬರುತ್ತಿದ್ದೆ. ನಾನು ಮತ್ತೆ ಬರೆಯಲು ಶುರುವಿಟ್ಟದ್ದು ಹದಿನೈದು ಇಪ್ಪತ್ತು ವರ್ಷಗಳ ಮೇಲೆ. ನನ್ನ ಬರಹಗಳನ್ನು ಈಗ್ಗೆ ಎರಡು ವರ್ಷದ ಮುಂಚೆ ಒಂದು ಕಡತದಲ್ಲಿ ಹಾಕಿ ಅವರಿಗೆ ಕೊಟ್ಟು ಮುನ್ನುಡಿಗಾಗಿ ಭಿನ್ನವಿಸಿದ್ದೆ. ಬಿಡುವು ಮಾಡಿಕೊಂಡು ಬನ್ನಿ ನಿಧಾನಕ್ಕೆ ಚರ್ಚಿಸಿ ಮುಂದುವರಿಯೋಣವಂತೆ ಎಂದಿದ್ದರು. ನಾನು ನನ್ನ ಸೋಂಭೇರಿತನದಿಂದ ಮತ್ತು ನೌಕರಿಯ ಒತ್ತಡದಿಂದ ನನ್ನ ಕವಿತೆಗಳ ಬಗ್ಗೆ ಚರ್ಚೆ ಮಾಡಲು ಅವರನ್ನು ಭೇಟಿಯಾಗಲು ಇಂದಿಗೂ ಹೋಗಲೇ ಇಲ್ಲ. ಅವರಿಗೆ ನೀಡಿದ್ದ ನನ್ನ ಕವಿತೆಗಳ ಪ್ರತಿಗಳು ಅವರಲ್ಲೇ ಉಳಿದು ಹೋದವು.

2018 ರಲ್ಲಿ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಜರುಗಿದ್ದ ಭಾವಸಂಗಮ ಎಂಬ ಸಾಹಿತ್ಯ ಸಮೂಹದ ಮೂರನೇ ವಾರ್ಷಿಕ ಸಮಾಗಮಕ್ಕೆ ಅವರನ್ನು ಕವಿಗೋಷ್ಠಿಯ ಅಧ್ಯಕ್ಷರನ್ನಾಗಿ ಆಹ್ವಾನಿಸಿ, ಕೆಲವಾರು ಗಂಟೆಗಳು ಅವರ ಜೊತೆ ಸಾಹಿತ್ಯದ ವಿಚಾರಗಳನ್ನು ಚರ್ಚಿಸಿದ್ದು ಇಂದಿಗೂ ಸದಾ ಹಸಿರಾಗಿದೆ. ಹಾಗೆಯೇ ಅವರನ್ನು ನಮ್ಮ ಕೆನರಾ ಬ್ಯಾಂಕ್ ಪ್ರಧಾನ ಕಾರ್ಯಾಲಯವು ಎರಡು ವರ್ಷಗಳ ಮುಂಚೆ ಸನ್ಮಾನಿಸಿದ್ದು ನನ್ನ ನೆನಪಿನಂಗಳದಲ್ಲಿ ಸದಾ ಹಸಿರಾಗಿದೆ.

ಜರಗನಹಳ್ಳಿಯವರು ಪ್ರತೀ ತಿಂಗಳೂ, ಬೆಳದಿಂಗಳ ಸಾಹಿತ್ಯ ಸಮಾವೇಶವನ್ನು ತಮ್ಮ ಮನೆಯ ಹತ್ತಿರದ ಸಭಾಂಗಣದಲ್ಲಿ ನಡೆಸಿಕೊಂಡು ಬರುತ್ತಿದ್ದರು. ಇತ್ತೀಚೆಗೆ (ಅಂದರೆ 2019 ರಲ್ಲಿರಬೇಕು) ಪದ್ಮಾವತಿ ಚಂದ್ರುರವರು ಮತ್ತಿತರರು ಭಾಗಿಯಾಗಿದ್ದ, ಬೆಳದಿಂಗಳ ಸಾಹಿತ್ಯ ಕೂಟದಲ್ಲಿ ನಾನು ಭಾಗವಹಿಸಿದ್ದು ನೆನಪಿದೆ. ಆಗ ನಮ್ಮನ್ನೆಲ್ಲ ಭೋಜನ ಸಮೇತ ಸತ್ಕರಿಸಿದ್ದರು ಜರಗನಹಳ್ಳಿಯವರು. ಇವಿಷ್ಟು ಅವರ ಜೊತೆ ಒಡನಾಡಿದ ನನ್ನ ನೆನಪುಗಳು.

ಒಬ್ಬ ಸಾಹಿತಿಯಾಗಿ, ಬರಹಗಾರರಾಗಿ ಜರಗನಹಳ್ಳಿಯವರು ಸೂಕ್ಷ್ಮ ವಿಚಾರಗಳತ್ತ, ಆಧ್ಯಾತ್ಮದ ವಿಚಾರಗಳತ್ತ, ಪ್ರಕೃತಿಯ ವಿಸ್ಮಯಗಳತ್ತ ನೋಟ ಹರಿಸಿದ್ದವರು. ಬಹುಶಃ ಸ್ವಯಂ ನಿವೃತ್ತಿಯ ನಂತರ, ಅವರಿಗೆ ಸಾಹಿತ್ಯವು ಪ್ರವೃತ್ತಿಗಿಂತ ಮುಖ್ಯ ವೃತ್ತಿಯಾಗಿ ಮಾರ್ಪಾಟಾಗಿತ್ತು. ಯಾವಾಗಲೂ ಸಾಹಿತ್ಯ ಕ್ಷೇತ್ರದ ಜನರಿಂದ ಅವರ ಮನೆ ತುಂಬಿರುತ್ತಿತ್ತು. ಕರ್ನಾಟಕದಾದ್ಯಂತ ಹಲವಾರು ಸಾಹಿತ್ಯಿಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುತ್ತಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲೂ ಸಕ್ರಿಯವಾಗಿ

ತೊಡಗಿಸಿಕೊಂಡಿದ್ದವರು. ವಚನ ಸಾಹಿತ್ಯದ ಮೇಲೆ ಸಾಕಷ್ಟು ಅಧ್ಯಯನ ಮಾಡಿ ಹಲವು ಕೃತಿಗಳನ್ನು ರಚಿಸಿರುವರು.

ಅವರ ಮಗಳಾದ ಶುಭದರವರ ಮದುವೆ ಸಮಾರಂಭದಲ್ಲಿ "ತಾಂಬೂಲ" ಎಂಬ ಹಿತನುಡಿಗಳ, ಅಮೃತವಾಣಿಗಳ ಸಂಗ್ರಹ ಸಂಕಲನವನ್ನು ಪುಸ್ತಕವಾಗಿ ಹೊರತಂದು, ಬಂದ ಅತಿಥಿಗಳಿಗೆಲ್ಲ ಅದನ್ನು ತಾಂಬೂಲ ಸಮೇತ ಕೊಟ್ಟಿದ್ದರು. ಇದೊಂದು ವಿಭಿನ್ನ ಒಳನೋಟದ ನಡೆಯಾಗಿತ್ತು.

ಅವರ ಮನೆಯಲ್ಲಿ ಒಂದು ಪ್ರತ್ಯೇಕವಾದ ಕೊಠಡಿ ಇದೆ. ಅದು ಅವರ ಸಾಹಿತ್ಯ ಕ್ಷೇತ್ರದ ಹೃದಯ. ಅವರ ಪುಸ್ತಕಗಳು, ಪ್ರಶಸ್ತಿಗಳು, ಪದವಿ, ಪುರಸ್ಕಾರಗಳ ಅನಾವರಣದ ಜೊತೆಗೆ ತಮ್ಮ ಓದಿನ ಹಸಿವಿಗಾಗಿ ಸಾವಿರಾರು ಪುಸ್ತಕಗಳನ್ನು ಅಲ್ಲಿ ಅವರು ಸಂಗ್ರಹಿಸಿಟ್ಟಿರುವರು. ಅದನ್ನು ನೋಡಿದ್ದ ನಾನು ನಮ್ಮ ಮನೆಯಲ್ಲೂ ಹೀಗೆ ಪುಸ್ತಕಗಳನ್ನು ಹೊಂದಿಸಬೇಕು ಎಂದು ಕನಸು ಕಂಡವನು.

ನಾನೂ ಈಗ್ಗೆ ಇಪ್ಪತ್ತೈದು ದಿನಗಳಿಂದ ಕೋವಿಡ್ ಪೀಡಿತನಾಗಿ ಈಗ ಸ್ವಲ್ಪ ಸುಧಾರಿಸಿಕೊಳ್ಳುತ್ತಿರುವ ಪರ್ವ ಕಾಲದಲ್ಲೇ, ಇಂತಹಾ ಕೇಳಬಾರದ ಅನಿರೀಕ್ಷಿತ ಸಾವುಗಳ ವಿಚಾರಗಳು ಖಿನ್ನನನ್ನಾಗಿಸಿವೆ. ಏನು ಬರೆದರೂ ಕಡಿಮೆಯೇ.

ಜರಗನಹಳ್ಳಿಯವರು ಉದಾರಿಗಳಾಗಿದ್ದರು, ಚಿಕ್ಕವರನ್ನು ಪ್ರೋತ್ಸಾಹಿಸುವ, ಬೆಳೆಸುವ ಸಹೃಯತೆ ಹೊಂದಿದ್ದರು. ಬಹಳ ಸಮಾಧಾನ ಚಿತ್ತದವರಾಗಿದ್ದರು. ಸಾಹಿತ್ಯದ ವಿಚಾರವಾಗಿ ಸಮಯದ ಪರಿವೆಯೇ ಇಲ್ಲದೆ ಗಂಟೆಗಟ್ಟಲೆ ಸಂವಾದಿಸುವ ದೈತ್ಯ ಸಾಹಿತ್ಯೋಪಾಸಕರಾಗಿದ್ದರು. ಮೃದು ಮಾತಿನ, ಮೆಲು ನಡಿಗೆಯ ತುಂಬು ಜೀವನ ನಡೆಸಿದ ಹಿರಿಯ ಸಾಹಿತಿಯನ್ನು ಕಳೆದುಕೊಂಡುದು ವೈಯಕ್ತಿಕವಾಗಿ ನನಗೆ ಬಹಳ ನಷ್ಟ. ಕನ್ನಡ ಸಾರಸ್ವತ ಲೋಕ ಕೂಡಾ ಅವರ ಇಲ್ಲದಿರುವಿಕೆಯ ಕೊರತೆಯನ್ನು ಅವರು ರಚಿಸಿರುವ ಸಾಹಿತ್ಯದ ಓದಿನ ಮೂಲಕ ಸರಿದೂಗಿಸಬೇಕಿದೆ.



ಇಂದು ಬೆಳಿಗ್ಗೆ ಹಾಸಿಗೆಯಿಂದ ಏಳುತ್ತಿದ್ದಂತೆಯೇ ಜರಗನಹಳ್ಳಿಯವರು ಇನ್ನಿಲ್ಲ ಎಂಬ ಸಂದೇಶವನ್ನು ಮುರಳಿ ಪತ್ತಂಗಿಯವರು ಹಲವಾರು ಸಾಹಿತ್ಯದ ಸಮೂಹಗಳಲ್ಲಿ ಹಾಕಿದ್ದನ್ನು ನೋಡಿ ಮೂಕನಾದೆ. ಈ ವೈರಾಣು ಅಮೂಲ್ಯವಾದ ಜೀವಗಳನ್ನು ಹೀಗೆ ನಿರ್ದಾಕ್ಷಿಣ್ಯವಾಗಿ ಬಲಿ ತೆಗೆದುಕೊಳ್ಳುತ್ತಿದೆಯಲ್ಲಾ ಎಂದು ಮಾತು ಬರದವನಾದೆ.

ನನ್ನ ಸ್ನಾತಕೋತ್ತರ ಪದವಿಯ ಸಹಪಾಠಿ H M ಸೋಮಶೇಖರಯ್ಯ, ಬಳ್ಳಾರಿ, ನಿನ್ನೆ ತಾನೇ ಕೋವಿಡ್‌ಗೆ ಬಲಿಯಾದ ವಿಚಾರ ಕಾಡುತ್ತಿರುವಾಗಲೇ, ನನ್ನ ಮತ್ತೊಬ್ಬ ಆತ್ಮೀಯರು, ಹೆಸರಾಂತ ಕವಿ ಜರಗನಹಳ್ಳಿಯವರು ಇನ್ನಿಲ್ಲವೆಂಬ ವಾರ್ತೆ ಕಂಗೆಡಿಸಿತು.

ಎಲ್ಲರೂ ಒಂದು ದಿನ ಹೊಗಲೇಬೇಕು. ಅವರಿಗೆ ಇಂದು ಕಾಲನ ಕರೆ ಬಂದಿದೆ. ಎಷ್ಟು ನರಳಿ ಹೋದರೋ ಅರಿಯೆ. ಅವರ ಆತ್ಮಕ್ಕೆ ಶಾಂತಿ ಸದ್ಗತಿ ಪ್ರಾಪ್ತಿಯಾಗಲಿ. ಹೆಚ್ಚೇನೂ ಹೇಳಲಾರೆ. ಮೌನವಾಗಿ ಅವರಿಗೆ ಅಂತಿಮ ನಮನಗಳನ್ನು ಅರ್ಪಿಸುವೆನು. ಅವರ ಅಂತಿಮ ದರ್ಶನಕ್ಕೆ ಹೋಗಲೂ ಆಗದ ನಿತ್ರಾಣ ಸ್ಥಿತಿ ನನ್ನದು. ಭೌತಿಕವಾಗಿ ಅವರು ನಮ್ಮೊಡನಿಲ್ಲದಿದ್ದರೂ, ಅವರ ಹನಿಗವಿತೆಗಳ ಮೂಲಕ, ಸಾಹಿತ್ಯ ಸಾಧನೆಗಳ ಮೂಲಕ ಅವರು ಸದಾ ಜೀವಂತ.



# ಪರಿಮಿತ ಮನಸ್ಸು ಅಪರಿಮಿತ ಜೀವಸಂಕುಲ

**ಸತೀಶ್ ಹೊಸನಗರ,** ನ್ಯೂ ಜರ್ಸಿ

ಈ ಜೀವ ಸಂಕುಲ ಅನ್ನೋದು ಬಹಳ ಸ್ವಾರಸ್ಯಕರವಾದದ್ದು ಎಂದು ಅನ್ನಿಸಿದ್ದು ಈ ದಿನ ನಾನು ನಡೆದುಕೊಂಡು ಬರುವ ದಾರಿಯಲ್ಲಿ ಕಾಣಿಸಿದ ಒಂದು ಹಸಿರುಕಟ್ಟಿದ ನೀರು ತುಂಬಿದ ಹೊಂಡವನ್ನು ನೋಡಿದಾಗ. ಮಳೆ ಬಾರದಿದ್ದ ದಿನಗಳಲ್ಲಿ ಅಲ್ಲಿ ಹೆಚ್ಚು ಪಾಚಿ ಬೆಳೆಯದೇ ಅಲ್ಲಲ್ಲಿ ತ್ಯಾಪೆ ಹಾಕಿದ ಹಾಗೆ ಬರಿ ನೀರು ಕಾಣಿಸುತ್ತಿತ್ತು. ಕಳೆದ ಒಂದೆರಡು ವಾರಗಳಲ್ಲಿ ಹುಲುಸಾದ ಮಳೆಯಿಂದಾಗಿ ಈಗ ಎಲ್ಲಿ ನೋಡಿದರಲ್ಲಿ ಹಸಿರೇ ಹಸಿರು, ಅಲ್ಲಿ ನೀರೇ ಇಲ್ಲವೇನೋ ಎನ್ನಿಸುವಂತೆ ಅಗಾಧವಾದ ಶಾಂತಿಯನ್ನು ತನ್ನ ಮುಖದಲ್ಲಿ ಪ್ರತಿಫಲಿಸುವ ಸಂತನ ನಿಷ್ಕಲ್ಮಷ ಮುಖದಂತೆ ಒಂದು ರೀತಿಯ ಸ್ತಬ್ದಚಿತ್ರ. ಬರೀ ಕೀಟಗಳನ್ನು ಅಧ್ಯಯನ ಮಾಡಿಯೇ ಎಷ್ಟೋ ಜನುಮಗಳನ್ನು ಕಳೆಯಬಹುದು. ಪ್ರಪಂಚದಾದ್ಯಂತ ಇರುವ ಇನ್ನೂ ಹೆಸರಿಡದ ಕೀಟಗಳ ಸಂತಾನವನ್ನು, ಅವುಗಳ ಚಲನವಲನವನ್ನು ಶೋಧಿಸಿಕೊಂಡು ಹೊರಟರೆ ಕೀಟಗಳ ಸಾಮಾಜಿಕ ಬದುಕಿನ ಬಗ್ಗೆ ಏನೇನೆಲ್ಲವನ್ನು ಕಂಡುಹಿಡಿಯಬಹುದು. ಸ್ಥಿರ ಸಸ್ಯಗಳು, ನಡೆದಾಡುವ ಸಸ್ಯಗಳು, ಸಸ್ಯಗಳಂತಿರುವ ಕೀಟಗಳು, ಕೀಟದ ಹಾಗಿರುವ ಕೀಟಗಳನ್ನು ಭಕ್ಷಿಸುವ ಸಸ್ಯಗಳು ಇನ್ನೂ ಏನೇನೆಲ್ಲವನ್ನು ಅಗಾಧವಾದ ಬ್ರಹ್ಮಾಂಡ ತನ್ನ ಒಡಲಲ್ಲಿ ತುಂಬಿಕೊಂಡಿದೆ ಎಂದು ಒಮ್ಮೆ ಸೋಜಿಗವಾಯಿತು. ಅಲ್ಲದೇ, ನಮ್ಮ ಉತ್ತರ ಅಮೇರಿಕದ ಈಶಾನ್ಯ ಭಾಗದಲ್ಲಿ ಈ ಋತುಗಳು ಬದಲಾದಂತೆಲ್ಲ ನಿಸರ್ಗದ ಕ್ಯಾನ್‌ವಾಸಿನಲ್ಲಿ ದಿನಕ್ಕೊಂದು ಚಿತ್ರ ಬರೆದವರ ಹಾಗೆ ಬೀಗುವ ಪ್ರಕೃತಿಯ ದಿವ್ಯ ಮನಸ್ಥಿತಿಯನ್ನು ಊಹಿಸಿ ನಿಸರ್ಗ ದೇವಿಯ ಮೇಲಿನ ಗೌರವವೂ ಇಮ್ಮಡಿಯಾಯಿತು.

ಮರುಕ್ಷಣದಲ್ಲಿ, ಯಾವಾಗಲೂ ನಮ್ಮಿಂದ ಈ ನಿಸರ್ಗದ ಮೇಲೆ ಅವ್ಯಾಹತವಾಗಿ ಹಾನಿಯಾಗುತ್ತಿದೆಯಲ್ಲಾ ಎಂದು ಖೇದವೂ ಆಯಿತು. ಈ ನಿಸರ್ಗದಿಂದ ದೊರೆತ ವಸ್ತುಗಳನ್ನೇ ಉಪಯೋಗಿಸಿಕೊಂಡು ನಮ್ಮ ಬೇಳೆಕಾಳುಗಳನ್ನು ಬೇಯಿಸಿಕೊಳ್ಳುವುದರ ಜೊತೆಗೆ ಇಡೀ ವಿಶ್ವವನ್ನೇ ವಿನಾಶಗೊಳಿಸುವ ಶಕ್ತಿಯನ್ನೂ ಪಡೆದವರು ನಾವೇ, ಅಲ್ಲವೇ? ಒಂದು ವೇಳೆ ಈ ಪ್ರಪಂಚದಲ್ಲಿರುವ ಅಣು ಬಾಂಬುಗಳು, ರಸಾಯನಿಕ ಬಾಂಬುಗಳು ಮತ್ತಿತರ ಆಯುಧ-ಸ್ಫೋಟಕಗಳೆಲ್ಲವನ್ನೂ ಉರಿಸಿ-ಸಿಡಿಸಿದರೆ ಏನಾಗಬಹುದು ಎಂಬ ಯೋಚನೆ ಬಂತು. ಈ ಮಾನವ ಜೀವಿ ಒಂದು ದಿನ ತನ್ನ ಅತಿಮಾನುಷ ಶಕ್ತಿಯೊಂದಿಗೆ ತನ್ನ ನಾಶವನ್ನೇ ಬರೆದುಕೊಳ್ಳುತ್ತಾನೇನೋ?

ಈ ಭೂಮಿಯ ಮೇಲ್ಮೈ, ಒಳಗೆ, ನೀರಿನೊಳಗೆ ಅದೆಷ್ಟೋ ಶಾಖ ಉತ್ಪನ್ನವಾದರೂ, ಇಡೀ ಭೂಮಂಡಲದಲ್ಲಿನ ನೀರು ಕೊತಕೊತನೆ ಕುದ್ದು ಆವಿಯಾದರೂ ಅಥವಾ ಅತಿಶೀತದಲ್ಲಿ ಮಂಜುಗಡ್ಡೆಯಾಗಿ ಪರಿವರ್ತನೆಗೊಂಡು ನೂರು ವರ್ಷ ಸೂರ್ಯನ ಕಿರಣಗಳು ಕಾರ್ಮೋಡವನ್ನು ದಾಟಿ ಭೂಮಿಯನ್ನು ತಲುಪದೇ ಇದ್ದರೂ ಸಹ ಒಂದಲ್ಲಾ ಒಂದು ರೀತಿಯಲ್ಲಿ ಯಾವುದಾದರೊಂದಿಷ್ಟು ಜೀವಜಂತುಗಳು ಬದುಕೇ ಇರುತ್ತವೆ ಎನ್ನುವುದು ನನ್ನ ನಂಬಿಕೆ. ಜೀವರಾಶಿಗಳಲ್ಲಿ ಮಾನವ ಅತಿ ಪ್ರಬಲ, ಬುದ್ಧಿಜೀವಿ ಎಂದು ಏನೆಲ್ಲ ಖ್ಯಾತಿಯನ್ನು ಪಡೆದುಕೊಂಡಿದ್ದರೂ, ಅದೇ ತಾನೆ ಹುಟ್ಟಿದ ಮೀನಿನ ಮರಿಯಿಂದ ಹಿಡಿದು, ಮರ್ಕಟ-ಮಾರ್ಜಾಲ ಸಂತಾನಗಳಿಗೆ ತುಲನೆ ಮಾಡಿದಲ್ಲಿ ಮಾನವ ಶಿಶು ಎಷ್ಟೊಂದು ದುರ್ಬಲವಾದದ್ದು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯವೇ. ಇಂದಿಲ್ಲದ ಜಾಗೆಯಲ್ಲಿ ನಾಳೆ ಹುಟ್ಟಿ ಅಂದೇ ಸತ್ತು ಜೀರ್ಣಗೊಳ್ಳುವ ನಾಯಿಕೊಡೆಗಳಿಂದ ಹಿಡಿದು, ಆಕಳಿನ ಸಗಣಿಯಲ್ಲೇ ಹುಟ್ಟಿ, ಬೆಳೆದು ವಿಜೃಂಭಿಸುವ ಗೆದ್ದಲು ಹುಳಗಳಿಂದ ಹಿಡಿದು, ಶೀತಕಗಳಲ್ಲೂ ಸಂತಾನ ವರ್ಧಿಸುವ ಜಿರಲೆಗಳನ್ನು ನೋಡಿ ಸೋಜಿಗಗೊಂಡಿದ್ದೇನೆ. ಇಂತಹ ವಿಭಿನ್ನ ಪ್ರಾಣಿ-ಪಕ್ಷಿ, ಕಶೇರುಕ-ಅಕಶೇರುಕ ಸಂತಾನಗಳ ನಡುವೆ ಅದೆಂತಹ ಸಂಭಾಷಣೆ ನಡೆದೀತು ಎಂದು ಯೋಚಿಸತೊಡಗುತ್ತೇನೆ. ಸಮುದ್ರ ತೀರದಲ್ಲಿ ನಡೆದಾಡುವವರಿಗೆ ದಿಢೀರನೆ ಸುನಾಮಿ ಅಲೆಗಳು ಕಾಣಿಸಿಕೊಂಡ ಹಾಗೆ ಬಚ್ಚಲು ಮೋರಿಯಲ್ಲಿ ಆಹಾರವನ್ನು ಹೊಂಚುತ್ತಿರುವ ಇರುವೆಗೆ ಪಕ್ಕನೆ ತನ್ನಮೇಲೆ ಬಿದ್ದ ನೀರು ಅದರದ್ದೇ ಆದ ಲೋಕದ ಒಂದು ಸುನಾಮಿಯ ಅನುಭವಕ್ಕೆ ಸಮನಾಗುವುದೇ ಎಂದು ತೂಗತೊಡಗುತ್ತೇನೆ.

ಇಡೀ ವಿಶ್ವವೇ ತಲ್ಲಣಗೊಳ್ಳುವ ಹಾಗೆ ಪ್ರಾಣಿಗಳಿಂದ ಮನುಷ್ಯರಿಗೆ ಖಾಯಿಲೆಗಳನ್ನು ಹರಡುವುದರ ಮೂಲಕ, ನಾವು ಸಾವು-ನೋವುಗಳನ್ನು ನೋಡುತ್ತಿರುವುದು ಇದೇ ಮೊದಲ ಸಲವಲ್ಲ. ಎಲ್ಲಿಯವರೆಗೆ ಪ್ರಕೃತಿಯ ಬಗ್ಗೆ ನಮ್ಮ ಅನಾದರ ಹೆಚ್ಚುತ್ತದೆಯೋ ಅಲ್ಲಿಯವರೆಗೆ ಪ್ರಕೃತಿ ತನ್ನನ್ನು ತಾನು ರಕ್ಷಿಸಿಕೊಳ್ಳುವುದಕ್ಕೆ ಯಾವ ಮಟ್ಟವನ್ನು ಬೇಕಾದರೂ ತಲುಪಬಹುದು. ನಮ್ಮ ನಮ್ಮ ಬದುಕುವ ಹಕ್ಕು ಎಲ್ಲರಿಗೂ ಒಂದೇ ಮಟ್ಟದಲ್ಲಿ ಇವೆಯೇ? ತಾನು ಸಾಕಿಯಾಗಲೀ, ಸಲಹಿಯಾಗಲೀ, ಬೇಟೆಯಾಡಿಯಾಗಲೀ ಉಳಿದ ಜೀವಜಂತುಗಳನ್ನು ಕೊಂದು ಬದುಕುವ ಹಕ್ಕನ್ನು ಯಾರು ಯಾರಿಗೆ ಕೊಟ್ಟರು? ಆಹಾರ ಸರಪಳಿಯ ನ್ಯಾಯದಲ್ಲಿ ಯಾರು ಯಾರನ್ನು ಬೇಕಾದರೂ ಭಕ್ಷಿಸಬಹುದಾಗಿದ್ದರೆ ಮಾನವ ಜನಾಂಗಕ್ಕೆ ಪ್ರಾಣಿಗಳಿಂದಾಗುವ ಅಪಾಯಗಳನ್ನು ವಿಶೇಷವಾಗಿ ನೋಡಬೇಕಿತ್ತೇಕೆ? ನಾವು ಯಾವ ಪ್ರಾಣಿಯ ಸಂತತಿಯನ್ನಾದರೂ ಕೊಲ್ಲಬಹುದು, ಆದರೆ ಮನುಷ್ಯನ ಸಂತತಿಗೆ ಇನ್ಯಾವುದೇ ಪ್ರಾಣಿ ಅಪಾಯ ತಂದೊಡ್ಡಿದ್ದೇ ಆದಲ್ಲಿ ಅದನ್ನು ಆಕ್ರಮಣ-ಅತಿಕ್ರಮಣ ಎಂಬ ಹಣೆಪಟ್ಟಿಯನ್ನಿಟ್ಟೇಕೆ ನೋಡುತ್ತೇವೆ?

ಪ್ರತಿಯೊಂದರಲ್ಲೂ ಜೀವವಿರುತ್ತದೆ ನೋಡುವ ಕಣ್ಣುಗಳಿದ್ದರೆ - ನಾವು ನಮ್ಮೊಳಗಿನ ಪ್ರಪಂಚದಲ್ಲೇ ಹೂತು ಹೋಗುವುದರ ಬದಲು ನಮ್ಮ ನೆರೆಹೊರೆಯನ್ನು ವೀಕ್ಷಿಸಿದಲ್ಲಿ ನಿಸರ್ಗದ ಚಕ್ರ ಯಾವಾಗಲೂ ಉರುಳುತ್ತಲೇ ಇರುತ್ತದೆ. ಪ್ರತಿ ಹದಿನೈದು ದಿನಗಳಿಗೊಮ್ಮೆ ಭುವಿಯನ್ನು ಬೆಳಗಿ ಹುಣ್ಣಿಮೆ ಚಂದ್ರ ಬರುತ್ತಾನೆ, ಒಂದು ದಿನವೂ ತಪ್ಪಿಸದೇ ಸೂರ್ಯ ಬರುತ್ತಾನೆ.

ಈ ಸೂರ್ಯನ ಕಿರಣಗಳು ದ್ಯುತಿಸಂಶ್ಲೇಷಣೆಗೆ ಇಂಬು ಕೊಡುತ್ತವೆ. ಎಂತಹ ಛಳಿ-ಮಳೆ-ಗಾಳಿಯಲ್ಲೂ ಗಿಡಮರಗಳು ಬದುಕಿ ಬಾಳುವುದೂ ಅಲ್ಲದೆ ಬುಡದಿಂದ ಹೀರಿ-ಗ್ರಹಿಸಿದ್ದನ್ನು ತಲೆಯವರೆಗೆ ಏರಿಸುವ ಯಂತ್ರರಹಿತ ತಂತ್ರವನ್ನು ತಮ್ಮೊಳಗಿಟ್ಟುಕೊಂಡಿವೆ. ಯಾರೋ ಉದುರಿಸಿ ಹಾಕಿದರೆಂದು ತಾವು ಕಟ್ಟಿದ ಜೇನುಗೂಡನ್ನು ಸಂರಕ್ಷಿಸಲು ಹೋಗಿ, ಜೇನು ನೊಣಗಳು ಕುಟುಕಿ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತವೆ. ಅಗಾಧವಾದ ಜೇನು ಹುಳಗಳ ಮಹಾಯಾಗದಲ್ಲಿ ಒಂದೇ ಒಂದು ರಾಣಿ ಜೇನು ಎಲ್ಲ ಕಾರ್ಯಗಳನ್ನೂ ನಿರ್ವಹಿಸಿ ತನ್ನ ದೊಡ್ಡತನವನ್ನು ಮೆರೆಯುತ್ತದೆ. ಈ ಕೀಟ-ಪಕ್ಷಿ-ಸಸ್ಯಗಳ ಇನ್‌ಸ್ಟಿಂಕ್ಟ್ ಏನು? ಅವುಗಳು ನಮ್ಮಂತಹ ನೀಚರ ನಡುವೆ ಬದುಕುವುದಾದರೂ ಹೇಗೆ ಎಂದೆನಿಸುವುದಿಲ್ಲವೇ?

ಯಾವುದೇ ವಾತಾವರಣದಲ್ಲಿಯೂ ಕಾರಿನ ವಿಂಡ್‌ಶೀಲ್ಡ್‌ಗೆ ಬಡಿದು ಅನೇಕ ಹುಳ-ಜೀವ-ಜಂತುಗಳ ಜೀವ ಹಾರಿ ಹೋಗುತ್ತದೆ. ಹೀಗೆ ಜೀವ ಇರುವವುಗಳಲ್ಲಿ ಒಂದು ಲೌಕಿಕ ಆತ್ಮವೆನ್ನುವುದು ಇರುವುದೇ ಹೌದಾದರೆ, ಆತ್ಮಕ್ಕೆ ಹಾಗೂ ಶರೀರಕ್ಕೆ ಸಂಬಂಧವೇ ಇಲ್ಲದೇ ಹೋದರೆ, ಇರುವೆಯ ಆತ್ಮಕ್ಕೂ ಮಾನವನ ಆತ್ಮಕ್ಕೂ ವ್ಯತ್ಯಾಸವೇನು ಉಳಿಯುತ್ತದೆ ಎನ್ನುವುದು ಈ ಹೊತ್ತಿನ ತತ್ವವಷ್ಟೇ. ಇಡೀ ವಿಶ್ವದಲ್ಲಿರುವ ಆತ್ಮಗಳ ಸಂಖ್ಯೆ ಮಿತವೋ ಅಮಿತವೋ? ವಿಶ್ವದಲ್ಲಿನ ಯಾವುದೇ ವಸ್ತು ಅಥವಾ ಜೀವಿಗಳನ್ನು ನಾವು ಸಂಪೂರ್ಣವಾಗಿ ನಾಶ ಮಾಡಲು ಸಾಧ್ಯವಿಲ್ಲವಾದರೆ, ಇಂದು ಸತ್ತ ಇರುವೆಯ ಆತ್ಮ, ನಾಳೆ ಮತ್ತೊಂದು ಜೀವಿಯ ಮುಖೇನ ಹೊರಬರುತ್ತದೆಯೇ? ಹಾಗಾದರೆ, ಈ ವಿಶ್ವದ ಎಲ್ಲ ಜೀವಿ ಮತ್ತು ಆತ್ಮಗಳ ಮೊತ್ತ ಯಾವಾಗಲೂ ಒಂದೇ ಆಗಿರುತ್ತದೆಯೇ? ಅಂದರೆ, ಸದಾ ಉಲ್ಬಣಿಸುತ್ತಿರುವ ನಮ್ಮ ಸಂತತಿ ಮತ್ತೊಂದು ಸಂತತಿಯನ್ನು ನಾಶ ಮಾಡುವುದರ ಮೂಲಕ ಬದುಕುತ್ತಿರುವುದು ನಿಜವೆಂದಾದಲ್ಲಿ ನಮ್ಮ ಸಂತತಿ ಒಂದು ದಿನ ಹೀಗೇ ನಶಿಸುವುದಿಲ್ಲವೇ?

ನನಗೆ ಇಂದು ದಾರಿಯಲ್ಲಿ ಕಾಣಿಸಿದ, ಒಂದು ಹಸಿರುಕಟ್ಟಿದ ಪಾಚಿಯ ನೀರಿನ ಹೊಂಡ ಅಥವಾ ಕೊಳ ತನ್ನದೇ ಒಂದು ಇರುವಿಕೆಯನ್ನು ಪ್ರಪಂಚಕ್ಕೆ ಪ್ರಚುರ ಪಡಿಸುತ್ತದೆ. ಪಾಚಿಯ ಕೆಳಗೆ, ಮೇಲೆ ಹಾಗೂ ನಡುವೆ ನಡೆಯುತ್ತಿರುವ ಬೇಕಾದಷ್ಟು ಸಾಧನೆಗಳನ್ನು ನಾವು ಗಮನಿಸೋದೇ ಇಲ್ಲ. ನಮಗೆಲ್ಲ ನಮ್ಮ ನಮ್ಮ ಪ್ರಪಂಚವೇ ದೊಡ್ಡದು, ಅದರ ಸುತ್ತಮುತ್ತಲೇ ಎಲ್ಲವೂ ಸುತ್ತೋದು ಎಂದು ಪಿಚ್ಚೆನಿಸುತ್ತದೆ. ಪಾಚಿಯ ಫೋಟೋ ತೆಗೆಯೋಣವಾ ಎಂದು ಒಮ್ಮೆ ಕ್ಯಾಮೆರಾಕ್ಕೆ ಕೈ ಚಾಚುತ್ತದೆ, ಎಲ್ಲವನ್ನೂ ಫೋಟೋ ಹೊಡೆದೂ ಹೊಡೆದೂ ನನ್ನ ಸಂಗ್ರಹಿಸಬೇಕು ಎನ್ನುವ ಸ್ವಾರ್ಥವನ್ನು ಮೊಟ್ಟಮೊದಲ ಬಾರಿ ಗೆದ್ದೆನೆಂಬ ಹರ್ಷವನ್ನು ಕಣ್ಣುಗಳು ಪ್ರತಿಬಿಂಬಿಸತೊಡಗುತ್ತವೆ.

## ***ಪರಿಸರೋತ್ಸವ***



ಲೋಕದ ಚೊಕ್ಕ ಅಸ್ತಿತ್ವದ ಹರಿಕಾರ ಪರಿಸರ।
ಪಂಚ ಮಹಾಭೂತದಿ ಸಂಸಿದ್ಧ ಪೂರ್ಣಕಾರ ॥೧॥

ಜೀವ ಸಂಕುಲದ ನಿತ್ಯದ ಅನನ್ಯ ಕಾರ್ಯಾಗಾರ।
ನಿಸ್ವಾರ್ಥ ಭಾವಾರ್ಪಣೆಯಲಿ ತಾ ಜೊತೆಗಾರ॥೨॥

ಉಡಿಯಲ್ಲಿಟ್ಟುಕೊಂಡು ಅನುಪಮ ಅಗರಗಳ ಭಂಡಾರ।
ಎಲ್ಲರೊಳಗೊಂದಾಗಿ ವಿಶ್ವ ಕುಟುಂಬ ಭಾವಾಂಕುರ ॥೩॥

ಮಣಭಾರ ಹೊತ್ತ ತಾಯಿ ಹೃದಯದ ಗೋಳಾಕಾರ।
ವರಾಹನ ಸ್ಮರಣೆಯ ಉಪಾಯದಿ ತಗ್ಗಿತು ಸಂಸಾರ ಭಾರ॥೪॥

ಹಸಿರುಡುಗೆಯ ಗಿಡ ಮರ ಬಳ್ಳಿಗಳ ಹರ್ಷೋದ್ಗಾರ।
ಮೃಗ ಪಕ್ಷಿಗಳಾದಿ ಸ್ವತಂತ್ರದಿ ವೈವಿಧ್ಯಮಯ ಕಲರವ॥೫॥

ಮಾನ್ಸೂನ್ ಮಳೆ ನಕ್ಷತ್ರಗಳಾದಿ ಭರವಸೆಯ ಆಕಾರ।
ಹಳ್ಳ ಹಗರಿ ವಕ್ರಾಣಿ ನದಿಗಳಾದಿ ವರುಣನ ಕೃಪಾಸಾಗರ॥೬॥

ಜಾಗತಿಕ ತಾಪಮಾನ ಹೆಚ್ಚಳ ನಿವ್ವಳ ಸಂಚಕಾರ।
ನಿಕ್ಷೇಪಗಳು ಸೊರಗುತ ಜೀವನದ ಪಯಣ ದುಸ್ತರ॥೭॥

ತಾಪಮಾನ ಕೆಳಗಿಳಸಲು ತೋರಬೇಕಿದೆ ಪರಾಕ್ರಮ।
ಇನ್ನಾದರೂ ಪಾಲಿಸೋಣ ವಿಜ್ಞಾನದ ನೀತಿ ನಿಯಮ॥೮॥

ಅರಣ್ಯನಾಶ ಇಚ್ಛಿಸದ ಪರ್ಯಾಯ ತಂತ್ರಜ್ಞಾನಗಳು ಹೆಚ್ಚಲಿ।
ಕೈಗಾರಿಕೀಕರಣಾದಿಗಳು ಪರ್ಯಾವರಣದ ಶಾಂತಿ ಕದಡದಿರಲಿ॥೯॥

ಕಾಲ್ನಡಿಗೆ ಕೀಳಲ್ಲ ತೊಲಗಲಿ ಒಣ ಪ್ರತಿಷ್ಠೆಯ ಗೀಳುಗಳು।
ಸಾಕಾರವಾಗಲಿ ಪರಿಸರ ಮಾಲಿನ್ಯ ತಗ್ಗಿಸುವ ಉಸಾಬರಿಗಳು॥೧೦॥

ಸೌರ ಜಲ ಶಕ್ತಿ ವಿದ್ಯುತ್ ಇಂಧನಗಳ ಹಿತ ಮಿತದ ಬಳಕೆ।
ಜಾಗೃತವಾಗಲಿ ಕಚ್ಚಾ ಪದಾರ್ಥ ಮೂಲ ಆಕರಗಳ ಉಳಿಕೆ॥೧೧॥

ಜಗವೆಲ್ಲ ಹಸಿರಾಗಿ ಪರಿಸರೋತ್ಸವ ನಿತ್ಯ ಶುದ್ಧ ಉಸಿರಾಗಲಿ।
ನೈರ್ಮಲೀಕರಣ ಲೋಕ ಕಲ್ಯಾಣ ಕಾರ್ಯೋನ್ಮುಖವಾಗಲಿ॥೧೨॥

**-ನಾಗರಾಜ ರಾವ್**, ಜರ್ಮನಿ



# ಅಗ್ನಿ ದೇವ ನಮೋ ನಮಃ

**ರೋಹಿಣಿ ಅನಂತರಾಮ್,** ನ್ಯೂ ಜರ್ಸಿ

**ಅಂ**ದು ಮಧ್ಯಾಹ್ನ ನಾನು ಮತ್ತು ನಮ್ಮ ಮನೆಯವರು New York ನಿಂದ ಬರುವಾಗ ನನ್ನ ಮಗ ಫೋನ್ ನೋಡಿ ಗಾಭರಿಯಿಂದ "ಅಮ್ಮ ನಮ್ಮ ಹಳೆ apartment is on fire" ಎಂದು ಕಿರುಚಿದ. ಫೋನ್ ನಲ್ಲಿ ಮೆಸೇಜ್ ಮೇಲೆ ಮೆಸೇಜ್, ವಿಡಿಯೋ ಮೇಲೆ ವಿಡಿಯೋ ಬರುವುದಕ್ಕೆ ಶುರುವಾಯಿತು. ತಲೆಗೆ ಮೊದಲು ಹೊಳೆದದ್ದು ಅದು ಯಾವ building, ಅಲ್ಲಿ ನಮಗೆ ಗೊತ್ತಿರೋರು ಯಾರು ಇದ್ದಾರೆ? ಎಂದು.

ಅರ್ಧ ಗಂಟೆಯಲ್ಲಿ ನಾವು ಸೀದ ಅಲ್ಲಿಗೇ ಬಂದೆವು. ಬೆಂಕಿ ಧಗ ಧಗನೆ ಮೇಲಿನ ಚಾವಣಿಯಲ್ಲಿ ಉರಿಯುತ್ತಿತ್ತು. ಸುತ್ತಲು ೫-೬ ಅಗ್ನಿ ಶಾಮಕ ವಾಹನಗಳು ಅದನ್ನು ಆರಿಸಲು ಹರ ಸಾಹಸ ಪಡುತ್ತಿದ್ದವು. ಸುಮಾರು ೫೦-೬೦ ಜನ ಪೊಲೀಸರು, ಅಗ್ನಿ ಶಾಮಕ ದಳದವರು, Droneಗಳು, TV ವಾಹಿನಿಯ helicopterಗಳು ಎಲ್ಲರೂ ಇದ್ದರು.

ಎಲ್ಲಿ ನೋಡಿದರೂ ಪರಿಚಯದ ಮುಖಗಳು, ಅಲ್ಲಿ ಇರುವವರು, ನಮ್ಮಂತೆ ಅಲ್ಲಿ ಹಿಂದೆ ಇದ್ದವರು, ಮೂಕ ಪ್ರೇಕ್ಷಕರಂತೆ ಅಗ್ನಿ ಮತ್ತು ವರುಣನ ಯುದ್ಧದಲ್ಲಿ ವರುಣನು ಶೀಘ್ರದಲ್ಲಿ ಗೆಲ್ಲಲಿ ಎಂದು ಪ್ರಾರ್ಥಿಸುತ್ತಿದ್ದಂತೆ ತೋರುತ್ತಿತ್ತು.

ಆ ಕಟ್ಟಡದಲ್ಲಿ ನನಗೆ ಗೊತ್ತಿರುವ ಎರಡು ಕುಟುಂಬದವರು ಇದ್ದರು. ಹತ್ತಿರ ಹೋಗಿ ಮೊದಲು ಸಾಂತ್ವನ ಹೇಳಿ ನಂತರ ವಿಷಯ ಕೇಳಿದೆ. ನನ್ನ ಸ್ನೇಹಿತೆ ಹೇಳಿದ್ದು, “ಮಧ್ಯಾಹ್ನ ಊಟ ಮಾಡಿ power nap ತೆಗೆದು ಕೊಳ್ಳುತ್ತಿದ್ದಾಗ ಯಾರೊ ಹೊರಗಿನಿಂದ ಧಬ ಧಬನೆ ಬಾಗಿಲು ಬಡಿದರು ಹಾಗೂ fire alarm ಹೊಡೆಯಿತು”. ಈಗ virtual school ಮತ್ತು work from home ಇರುವ ಕಾರಣ ಮನೆಯಲ್ಲಿ ಎಲ್ಲ headphones ಧರಿಸಿರುತ್ತಾರೆ. ಮನೆಯವರನ್ನು ಎಬ್ಬಿಸಿ ಬೆಂಕಿಯ ತೀವ್ರತೆ ನೋಡಲು ಹೊರಗೆ ಹೋದವಳಿಗೆ ಮತ್ತೆ ಒಳಗೆ ಹೋಗಲು ಆಗಲೇ ಇಲ್ಲ. ಬೆಂಕಿ ಹರಡುತ್ತಿರುವ ವೇಗವನ್ನು ಗಮನಿಸಿದ ಅಗ್ನಿಶಾಮಕ ದಳದವರು ಎಲ್ಲರನ್ನು ಹೊರಗೆ ಕಳಿಸಿ ತಮ್ಮ ಕೆಲಸ ಶುರು ಮಾಡಿದ್ದರು. ಇದೆಲ್ಲ ಆದದ್ದು ಸುಮರು ೩:೩೦-೪ ಗಂಟೆಗೆ, ನಾವು ಅಲ್ಲಿಗೆ ತಲುಪಿದಾಗ ಸುಮಾರು ೫:೩೦. ಬೆಂಕಿ ಇನ್ನು ತಹಬಂದಿಗೆ ಬಂದಿರಲಿಲ್ಲ.

ಭಾರತದಲ್ಲಿ ಇರುವ ಅಪ್ಪ ಅಮ್ಮಂದಿರು ಸದಾಕಾಲ ಹೇಳುವು ಮಾತು "ದೂರ ದೇಶದಲ್ಲಿ ಇದ್ದೀರಾ ನಮ್ಮವರು ತಮ್ಮವರು ಯಾರೂ ಇಲ್ಲ" ಎಂಬುದಕ್ಕೆ ತದ್ವಿರುದ್ಧವಾದ ದೃಶ್ಯ ಇಲ್ಲಿಯದ್ದು. ಎಲ್ಲರೂ ಸಹಾಯಕ್ಕೆ ನಿಂತವರಂತೆ ತೋರುತ್ತಿದ್ದರು. ತಮಗೆ ತೋಚಿದ ಸಹಾಯ ಮಾಡುತ್ತಿದ್ದರು. ನೀರಿನ bottle ಗಳನ್ನು ದೊಡ್ಡ ಬುಟ್ಟಿಯಲ್ಲಿ ಹಾಕಿ ಎಲ್ಲರಿಗೂ ಕೇಳುವವರು ಕೆಲವರು, ಕೊವಿಡ್ ಪಿಡುಗಿರುವುದರಿಂದ ಮಾಸ್ಕ್ ಗಳನ್ನು ಕೊಡುವವರು ಕೆಲವರು, snack ಕೇಳುವವರು ಕೆಲವರು, ಮಕ್ಕಳನ್ನು ತಮ್ಮ ಮನೆಗೆ ಕರೆದುಕೊಂಡು ಹೋಗಲು ಸಿದ್ಧರಾದವರು ಕೆಲವರು. ಇದರ ನಡುವೆ Red Cross ನವರು, Community ಯವರು ಮುಂದೆ ಏನೆಂದು ಹೇಳಲು ಸಿದ್ಧರಾಗುತ್ತಿದ್ದರು.

ಬೇರೆ ದೇಶಕ್ಕೆ ವಲಸೆ ಬರುವ ನಮ್ಮಂತವರಿಗೆ ಹೆಚ್ಚು ಕಮ್ಮಿ ೨ suitcase ಗಳಲ್ಲಿ ಶುರುವಾದ ಜೀವನ, ಹಂತ ಹಂತವಾಗಿ ಬೆಳೆದು ಮನೆಯಾಗಿರುತ್ತದೆ. ನನ್ನ ಮನೆ ಎಂದೊಡನೆ ಅದರಲ್ಲಿರುವ ಪ್ರತಿಯೊಂದು ವಸ್ತುವೂ ಎಷ್ಟು ಮುಖ್ಯವೆಂದು ಈಗ ತಿಳಿಯುತ್ತಿದೆ. ಕೇವಲ ಒಂದು ಡಾಲರ್ ಕೊಟ್ಟು ಕೊಂಡ ಆಟಿಕೆಯಾಗಲಿ, ದುಬಾರಿ TV, Couch ಗಳಾಗಲಿ ಎಲ್ಲದರೊಂದಿಗೆ ಒಂದು ಭಾವನಾತ್ಮಕ ಸಂಬಂಧವಿರುತ್ತದೆ. ಅದನ್ನು ಕಳೆದು ಕೊಳ್ಳುವ ದುಗುಡ ಮನಸ್ಸಿಗೆ ಬಹಳ ಕಷ್ಟವನ್ನುಂಟುಮಾಡುತ್ತದೆ.

Renters insurance, Life insurance, ಇತರೆ ವಿಮೆಗಳನ್ನು ತೆಗೆದು ಕೊಳ್ಳುವಾಗ ಯಾರೂ ಇದನ್ನು ಉಪಯೋಗಿಸುತ್ತೇವೆ ಎಂದುಕೊಂಡಿರುವುದಿಲ್ಲ. ಆದರೆ, ಈ ರೀತಿ ಅಪಘಾತವಾದಾಗ ಮೊದಲು ನಮ್ಮ ವಿಮೆಯ ಮೊತ್ತ ಎಷ್ಟು ಎಂದು ದೃಢೀಕರಿಸಿಕೊಳ್ಳುತ್ತೇವೆ. ಈಗಲೂ ಹಾಗೆಯೇ! ಎಲ್ಲರೂ ತಮ್ಮ ವಿಮೆಯ ಸೌಲಭ್ಯವನ್ನು ಬಳಸಿಕೊಳ್ಳುವುದಕ್ಕೆ ಮುಂದಾದರು.

ಸುಮಾರು ೭:೩೦ ರ ಹೊತ್ತಿಗೆ ಕೆಲವರು ಮಕ್ಕಳಿಗೆ pizza ಗಳನ್ನು ತಂದು ಅದನ್ನು ತಿನ್ನಲು ಒಂದು ಕೋಣೆಯನ್ನು ಬಿಡಿಸಿಕೊಂಡರು. ಈ ಸಮಯದಲ್ಲಿ ಮನೆಯೊಳಗೆ ಹೋಗಲು ಸಾಧ್ಯವಿಲ್ಲವೆಂದು ಎಲ್ಲರಿಗೂ ಮನವರಿಕೆಯಾಗಿತ್ತು, ಹಾಗಾಗಿ ತಾವು ತಂಗುವುದಕ್ಕೆ ಹೊಟೇಲ್ ಗಳನ್ನು ಕೆಲವರು ಕಾಯ್ದಿರಿಸಿದರು ಮತ್ತು ಕೆಲವರು ತಮ್ಮ ಸ್ನೇಹಿತರ ಮನೆಗಳಲ್ಲಿ ಉಳಿಯಲು ನಿರ್ಧರಿಸಿದರು.

ಎಲ್ಲರೂ ತಮ್ಮನ್ನು ಮರುದಿನ ಮನೆಯೊಳಗೆ ಬಿಡುವರೆಂಬ ಆಸೆಯಿಂದ ದೂರ ಎಲ್ಲೂ ಹೋಗದೆ, ಅಲ್ಲಿಯೇ ಹತ್ತಿರದಲ್ಲಿರುವ ವ್ಯವಸ್ಥೆ ಮಾಡಿಕೊಂಡರು. ಮುಂದೇನಾಗುವುದು ಎಂದು ಯಾರಿಗೂ ಗೊತ್ತಿಲ್ಲದ ಕಾರಣ ಒಳಗೆ ಹೋಗುವ ಆಸೆ ಹೆಚ್ಚೇ ಇತ್ತು.

ಕಟ್ಟಡಕ್ಕೆ ಆದ ಹಾನಿಯನ್ನು ಪರಿಶೀಲಿಸಿ ಅದರ ಆಧಾರದ ಮೇಲೆ ಎರಡು ದಿನಗಳವರೆಗೆ ಯಾರನ್ನೂ ಒಳಗೆ ಬಿಡಲಿಲ್ಲ. ಮೂರನೆ ದಿನ ಪ್ರತಿ ಮನೆಗೂ ಅಗ್ನಿ ಶಾಮಕ ದಳದ ಒಬ್ಬ ವ್ಯಕ್ತಿಯನ್ನು ಬಿಡಲು ಸಮಯವನ್ನು ನಿರ್ಧರಿಸಿದರು. ಒಳಗೆ ಹೋಗುವ ವ್ಯಕ್ತಿಗೆ ಯಾವ ಜಾಗದಲ್ಲಿ ಏನಿದೆ ಎಂದು

ಸರಿಯಾಗಿ ಹೇಳಿದರೆ ಅವನು ಅದನ್ನು ತರುತ್ತಾನೆ. ಒಳಗಿನಿಂದ ಮುಖ್ಯ ಪತ್ರಗಳು ಮತ್ತು ಅಮೂಲ್ಯ ವಸ್ತುಗಳನ್ನು ಮಾತ್ರ ತರಬೇಕೆಂದು ಆದೇಶಿಸಿದ್ದರು. ಎಲ್ಲ ಮುಖ್ಯ ಪತ್ರಗಳನ್ನು ಸಾಮನ್ಯವಾಗಿ ಒಂದು ಜಾಗದಲ್ಲಿ ಇಟ್ಟಿರುವುದರಿಂದ ಅದನ್ನು ತರಿಸಿಕೊಳ್ಳಲು ಕಷ್ಟವಾಗಲಿಲ್ಲ. ಆದರೆ ಮನೆಯೊಳಗೆ ಹೋಗಿ ಏನಾಗಿದೆ ಎಂದು ನೋಡಲು ಸಾಧ್ಯವಾಗದ್ದು ಬೇಸರದ ವಿಷಯ.

ಕಾನೂನಾತ್ಮಕವಾಗಿ ಹಾಗೂ ಮನುಷ್ಯನ ಸುರಕ್ಷತೆಗೆ ತೆಗೆದುಕೊಳ್ಳಬೇಕಾದ ಕ್ರಮವನ್ನು ತೆಗೆದುಕೊಂಡು ೯-೧೦ ದಿನಗಳ ನಂತರ ಪ್ರತಿ ಮನೆಯಿಂದ ಇಬ್ಬರಂತೆ ಮನೆಯೊಳಗೆ ಹೋಗಿ, ತಮ್ಮ ವಸ್ತುಗಳನ್ನು ತರಲು ೩ ಗಂಟೆಗಳ ಕಾಲಾವಕಾಶವನ್ನು ನೀಡಿದರು. ತಮ್ಮ ಮನೆಯೆಂದು ಹೇಳಲು ಅಸಾಧ್ಯವಾದ ರೀತಿಯಲ್ಲಿ ಮನೆಯನ್ನು ನೋಡಬೇಕಿತ್ತು. ಬೆಂಕಿಯಿಂದಲೂ, ನೀರಿನಿಂದಲೂ ಹಾಳಾದ ವಸ್ತುಗಳು ಅನೇಕ. ಇದೆಲ್ಲಾ ಆಗುವಷ್ಟರಲ್ಲಿ ವಾಸ್ತವ ಸ್ಥಿತಿ ತಿಳಿದು ಮುಂದಿನ ಕ್ರಮದ ಬಗ್ಗೆ, ಅಂದರೆ ಬೇರೆ ಮನೆ, ಅದಕ್ಕೆ ಬೇಕಾದ ಸಾಮಗ್ರಿಗಳು ಇವೆಲ್ಲವನ್ನು ಎಲ್ಲರೂ ನಿರ್ಧರಿಸಿಯಾಗಿತ್ತು.

ಇಲ್ಲಿನ Mayor ಎಲ್ಲರಿಗೂ ಬಹಳ ಸಹಾಯ ಮಾಡಿದರು. ಪ್ರಮುಖವಾಗಿ ಬೇಕಾಗುವ DL, Passportಗಳು ಹಾಳಾಗಿದ್ದಲ್ಲಿ ಸ್ವಯಂ ತಾವೆ USICS, DMV, Indian Embassy ಗಳನ್ನು ಸಂಪರ್ಕಿಸಿ, ನೊಂದವರಿಗೆ ಬೇಕಾದ ಎಲ್ಲ ಪತ್ರಗಳನ್ನು ಒದಗಿಸಿದ್ದರು. ಇದರೊಂದಿಗೆ go fund me ಯಲ್ಲಿ ಬಂದ ಹಣವನ್ನು ಹಂಚಿದರು. ಆ ಹಣ, ಅದರ ಮೌಲ್ಯಕ್ಕಿಂತ ಮಾನವೀಯತೆ ಹಾಗೂ ಸಾಮಾಜಿಕ ಕಳಕಳಿಯನ್ನು ಎತ್ತಿ ಹಿಡಿಯಿತು.

ನಮ್ಮ ಜೀವನದ ಪ್ರತೀ ಘಟನೆಯಿಂದ ನಾವು ಕಲಿಯುವ ಪಾಠ ಅನೇಕ. ನೀಲಿ ಆಕಾಶದ ತಂಪಾದ ಮುಂಜಾನೆ, ಸಂಜೆಯಾಗುವಷ್ಟರಲ್ಲಿ ಬದುಕನ್ನು ತಲೆಕೆಳಗಾಗಿಸಬಹುದು. ಜೀವ ಎಲ್ಲದಕ್ಕಿಂತ ಮುಖ್ಯ ಅದೊಂದಿದ್ದರೆ ಏನನ್ನು ಬೇಕಾದರು ಸಾಧಿಸಬಹುದು. ಈ ವೇದಾಂತದ ಮಾತು ಎರಡು ದಿನ. ಮತ್ತೆ ಜೀವನ ಸಾಗುತ್ತದೆ. Costco, Ikea ಗೆ ಹೋದಾಗ ಎಲ್ಲ ಮರೆತು ಮನೆಗೆ shopping ಶುರು, ಇದುವೇ ಜೀವನ.



# ಮೊರೆ

ಕಾಡಿಸುತ ಪೀಡಿಸುತ
ಸಾಕಷ್ಟು ನೋಯಿಸುತ
ಧೋಯಿಸುತ ಬೇಯಿಸುತ
ಹೆಚ್ಚುತ್ತ ಕೊಚ್ಚುತ್ತ
ಹುರಿಯುತ್ತ ಕರಿಯುತ್ತ
ಬಾಣಸಿಗ ವಿಧಿರಾಯ
ಬಾಯಿ ಚಪ್ಪರಿಸುತಿಹನೇ!
ಹರಿವ ಕಣ್ಣೀರನೊರೆಸುತ
ಉರಿವ ಚಿತೆಗಳ ನೋಡುತ
ಮನವ ನುಕ್ಕಾಗಿಸುತ
ಬೆನ್ನ ಬಾಗಿಸುತ
ಬೇಡುವ ಕೈಗಳ ಜೋಡಿಸುತ
ಬೇಡಿಕೊಂಡೆನು ಎನ್ನೊಡೆಯಾ
ಸಾಕುಮಾಡೀ ಸಹಿಸಲಾಗದ ಗೊಡವೆಯ..!
ಮನುಕುಲವ ಮಸಣಕೆ ದೂಡದಿರು
ವಿರಾಟ್ ಸ್ವರೂಪದಿ ಉಗ್ರದಾಟವನಾಡದಿರು
ನೆಮ್ಮದಿಯ ನಿಟ್ಟುಸಿರ ನೀಡದೆನ್ನದಿರು
ಮನುಜ ಕೋಟೆಯ ಪಾರುಮಾಡು ಬಾ
ಎನ್ನೊಡೆಯ ಬೇಡಿಕೊಂಡೆನು
ಓಡಿ ಬಾ ಓಡಿ ಬಾ
ಮನುಜ ಕೋಟೆಯ ಪಾರುಮಾಡು ಬಾ
ಪಾರುಮಾಡುಬಾ !!!

**-ಕೆ. ಸ್. ಶ್ರೀಕಂಠ ರಾವ್**



# ಬೃಂದಾವನಕ್ಕೆ ಬಂದ ಭಾವಮೈದುನ

**ವಿ. ಪ್ರಸನ್ನ ಕುಮಾರ್,**

**ನ್ಯೂ**ಜರ್ಸಿಯ ನಮ್ಮೇರಿಕ ಸಂಸ್ಥೆ ಅಂತರ್ಜಾಲದಲ್ಲಿ ಪ್ರಪ್ರಥಮ ಬಾರಿಗೆ ಅಂತರರಾಷ್ಟ್ರೀಯ ಕನ್ನಡ ನಾಟಕೋತ್ಸವ ನಡೆಸುವ ತನ್ನ ನಿರ್ಧಾರವನ್ನು ನಮ್ಮ ಬೃಂದಾವನ ಕನ್ನಡ ಕೂಟದ "ಪ್ರಗತಿ" ತಂಡದ ಅಧ್ಯಕ್ಷರಾದ ಪದ್ಮಿನಿ ಹೇಮಂತ್ ಹಾಗೂ ಸಾಂಸ್ಕೃತಿಕ ಕಾರ್ಯದರ್ಶಿಯಾದ ಅಮೃತಾ ರಮೇಶ್ ಅವರನ್ನು ಸಂಪರ್ಕಿಸಿದಾಗ, ಎಂದೋ ಹತ್ತು ವರ್ಷಗಳ ಹಿಂದೆ ನಾಟಕ ಮಾಡಿದ್ದ ನನಗೆ ಅದರ ನಿರ್ವಹಣೆಯ ಜವಾಬ್ದಾರಿ ಬರುವುದು ಎಂದು ನಾನು ಖಂಡಿತಾ ಅಂದುಕೊಂಡಿರಲಿಲ್ಲ.

ನನಗೆ ಗೊತ್ತಿದ್ದ ಮೂವರು ನಿರ್ದೇಶಕರನ್ನು ಸಂಪರ್ಕಿಸಿದಾಗ ಸುಮಾರು ೧೫ ವರ್ಷಗಳ ಹಿಂದೆ ನನ್ನನ್ನು ಪ್ರಧಾನ ಪಾತ್ರಧಾರಿಯಾಗಿ ಹಾಕಿಕೊಂಡು ನಿರ್ದೇಶಿಸಿದ್ದ "ನನ್ನವಳ ಕಾಗದ" ನಾಟಕದ ನಿರ್ದೇಶಕರಾದ ಶ್ರೀಧರ್ ಸುಬ್ಬರಾವ್ ಮನಃಪೂರ್ವಕವಾಗಿ ನಾಟಕೋತ್ಸವಕ್ಕೊಂದು ನಗೆನಾಟಕವನ್ನು ನಿರ್ದೇಶಿಸಲು ಒಪ್ಪಿಕೊಂಡರು. "ಭಾವಮೈದುನ" ನನ್ನು ಬೃಂದಾವನಕ್ಕೆ ಕರೆತರಲು ತಮಗೆ ೧೫ ಪಾತ್ರಧಾರಿಗಳ ತಂಡಕ್ಕೆ ಮೂವರು ಮಹಿಳೆಯರು, ಐವರು ಮಕ್ಕಳು ಹಾಗೂ ಏಳು ಜನ ಪುರುಷರು ಬೇಕಾಗುವುದು ಎಂಬ ಬೇಡಿಕೆಯನ್ನೂ ಇಟ್ಟರು . ಬೃಂದಾವನ ಕನ್ನಡ ಕೂಟದಲ್ಲಿ ಅಧಿಕೃತ ಮಿಂಚಂಚೆ ಹಾಗೂ ಬೃಂದಾವನ ಬಿಂದಾಸ್ ಬಳಗದ "ಏನುಮೇಲೆ" (ವಾಟ್ಸಾಪ್) ಗುಂಪಿನ ಮೂಲಕ ಸಂಪರ್ಕಿಸಿದಾಗ ಸಿಕ್ಕಿದ್ದು ಈ ಹದಿನೈದು ಮಂದಿ ಸದಸ್ಯರು .

ಪುಟಾಣಿಗಳಾದ ರಚನಾ ಆಚಾರ್ಯ (ಸಿಂಗಾರಿ), ಸಂಕೀರ್ತ್ ಭಾರದ್ವಾಜ್ (ಪೆದ್ದಣ್ಣ), ಸಮೀರ್ ಕಟ್ಟೆ (ಎಂಕಟ) ಹಾಗೂ ಸುದೀಪ್ತ ಮೂರ್ತಿ (ಹನುಮಿ). ಸವಿತಾ ಆನಂದ್ (ನಂಜಮ್ಮ), ಶ್ರೀವಿದ್ಯಾ ಪ್ರಶಾಂತ್ (ಕಾವೇರಮ್ಮ) ಹಾಗೂ ಉಷಾ ಪ್ರಸನ್ನ ಕುಮಾರ್ (ಶಾಲಾ ಇನ್ಸ್ ಪೆಕ್ಟರ್) ಮಹಿಳೆಯರ ಪಾತ್ರವರ್ಗ ತುಂಬಿದರೆ ಅಶೋಕ್ ಪಿ ಆರ್ (ರೋಗಿ ನಿಂಗಪ್ಪ), ಅನಂತರಾಮ್ ಬಿಂಡಿಗನವಲೆ (ರೋಗಿ ಕರಿಯ), ಸತ್ಯನಾರಾಯಣ್ ಕೃಷ್ಣಮೂರ್ತಿ(ರೈತ ಹಾಗೂ ಕಾನ್ಸ್ಟೇಬಲ್), ಶ್ರೀಧರ್ ಬಾಣಾವರ (ಪಟೇಲ್ ರಂಗಪ್ಪ), ಸ್ವಾಮಿ ಭಟ್ಟ(ಭಾವಮೈದುನ) ಹಾಗೂ ನಾನು (ಭಾವ..ಶಾಲಾ ಮಾಸ್ತರು ಭೀಮರಾಯ) ಪುರುಷ ಪಾತ್ರಧಾರಿಗಳಾದೆವು!!! .

ಈ ಕರೋನ ಸಮಯದಲ್ಲಿ ಒಟ್ಟಾಗಿ ಒಂದು ಕಡೆ ಸೇರಿ ತಾಲೀಮು ಮಾಡುವುದಂತೂ ಅಸಾಧ್ಯವಾಗಿತ್ತು...ಹಾಗಾಗಿ ನಾಟಕದ ಐದು ದೃಶ್ಯಗಳನ್ನ ಪ್ರತಿ ರಾತ್ರಿ ೯:೩೦ ರಿಂದ ೧೧ ರವರೆಗೆ ಝೂಮಾದೇವಿ ಮೂಲಕ "ವರ್ಚುಅಲ್" ತಾಲೀಮು ನಡೆಸುವುದು ಅಂತ ನಿಶ್ಚಯವಾಯ್ತು. ಇನ್ನು ಮಕ್ಕಳ ನಾಟಕಗಳನ್ನು ಯಶಸ್ವಿಯಾಗಿ ನಿರ್ದೇಶಿಸಿ ಪಳಗಿರುವ ನಮ್ಮ ಬೃಂದಾವನದ "ಲೇಡಿ ಬನ್ಸಾಲಿ" ಎಂದೇ ಪ್ರಸಿದ್ಧಿಯಾಗಿರುವ ಉಮಾ ಮೂರ್ತಿ ಅವರಿಗೆ ಮಕ್ಕಳನ್ನು ತರಬೇತು ಮಾಡುವ ಜವಾಬ್ದಾರಿ ನೀಡಲಾಯ್ತು. ದೊಡ್ಡವರ ಜೊತೆ ಏಗುವ ಕೆಲಸವನ್ನು ಶ್ರೀಧರ್ ಸುಬ್ಬರಾವ್ ಅವರಿಗೆ ಬಿಡಲಾಯ್ತು. ಊಟ ಮುಗಿಸಿ ಪ್ರತಿದಿನ ಝೂಮಾದೇವಿಯಲ್ಲಿ ತಾಲೀಮು, ನಾಟಕದ ಸಾಲುಗಳನ್ನು ಮುಂದಿಟ್ಟುಕೊಂಡು ಕೇವಲ ಅಭಿನಯ ಮಾತ್ರ ಕಲಿಯುತ್ತಿದ್ದೆವು...ಐದರಲ್ಲಿ ನಾಲ್ಕು ದೃಶ್ಯಗಳಲ್ಲಿ ಇದ್ದ ನನಗಂತೂ ನನ್ನ ಸಾಲುಗಳನ್ನು ಬಾಯಿಪಾಠ ಮಾಡುವಷ್ಟರಲ್ಲಿ ಸಾಕು ಸಾಕಾಯ್ತು..ಮಿಕ್ಕವರೆಲ್ಲ ತುಂಬಾ ಬೇಗ ಅವರ ಸಾಲುಗಳನ್ನು ಕಲಿತರು !!!

ನಾಟಕೋತ್ಸವದ ನಿಯಮಗಳು ತುಂಬ ಕಠಿಣವಾಗಿದ್ದರಿಂದ ಪ್ರತಿಯೊಂದು ದೃಶ್ಯವನ್ನು ತಡೆಯಿಲ್ಲದೆ ಒಮ್ಮೆಲೇ "ರೆಕಾರ್ಡ್' ಮಾಡಬೇಕಿತ್ತು...ಹಾಗಾಗಿ ನಾಲ್ಕು ವಾರಗಳ "ವರ್ಚುಅಲ್" ತಾಲೀಮಿನ ಬಳಿಕ ನಮ್ಮ ಮನೆಯಲ್ಲಿ ಮೊಟ್ಟ ಮೊದಲ ಬಾರಿಗೆ ಎಲ್ಲಾ ಒಟ್ಟಾಗಿ ಸೇರಿ ನಾಟಕ ಮಾಡಲು ಹೊರಟಾಗ...ದೇವರೇ ಗತಿ!!!...ಸುಮಾರು ಹೊತ್ತು ಅಭ್ಯಾಸ ಆದ ಮೇಲೆ ಯಾರು ಎಲ್ಲಿ ನಿಂತುಕೊಂಡು ಏನು ಹೇಳಬೇಕು ಅನ್ನೊ ಒಂದು ಅಂದಾಜು ಸಿಕ್ಕಂತಾಯ್ತು..ಇನ್ನು ಸಾಲುಗಳಂತು ಎಲ್ಲರಿಗೂ ಪೂರ್ಣವಾಗಿ ಸರಿಯಾಗಿ ಬರುತ್ತಿರಲಿಲ್ಲ..ನಮ್ಮ ನಿರ್ದೇಶಕರು ಸ್ವಲ್ಪ ನಯವಾಗಿ ಗದರಿ ಹೇಳಿದರು.."ಮುಂದಿನ ವಾರ 'ಡ್ರೆಸ್ಸ್ ರಿಹರ್ಸಲ್' ಇರುತ್ತೆ...ನೀವು ಹೀಗೆ ಮಾಡಿದರೆ ಹ್ಯಾಗ್ರಪ್ಪ ..ದಯವಿಟ್ಟು ನನ್ನ ಮಾನ ಕಾಪಡ್ರಪ್ಪ" ಅಂತ ತಮಾಷೆಯಾಗಿ ನಾಟಕದಲ್ಲಿ ಶಾಲಾಮಾಸ್ತರ ಒಂದು ಸಾಲನ್ನು ಬಳಸಿಕೊಂಡು ಭಿನ್ನವಿಸಿಕೊಂಡರು !!!

ಸುಮ್ಮನೆ "ಟೆನ್ಶನ್" ಆಗುತ್ತೆ ಅಂತ ಎಲ್ಲ ಪಾತ್ರಧಾರಿಗಳಿಗೆ ನಾವು ಇದೊಂದು ನಾಟಕದ "ಸ್ಪರ್ಧೆ" ಅಂತ ತಿಳಿಸಿರಲಿಲ್ಲ...ಅದು ಗೊತ್ತಾದ ಮೇಲಂತೂ ಎಲ್ಲರ ಮುಖದಲ್ಲಿ ನಿಜವಾಗಿಯು ಟೆನ್ಶನ್ ಕಾಣಿಸಿತು...ಆದ್ರೂ ಎಲ್ಲರಿಗೂ ಉತ್ತೇಜನ ಕೊಟ್ಟು "ಡ್ರೆಸ್ಸ್ ರಿಹರ್ಸಲ್" ಮುಗಿಸಿ ಅಂತಿಮ ರೆಕಾರ್ಡಿಂಗನ್ನು ನಮ್ಮ ಅಧ್ಯಕ್ಷರಾದ ಪದ್ಮಿನಿ ಹೇಮಂತ್ ಅವರ ಮನೆಯ ನೆಲಮಾಳಿಗೆಯಲ್ಲಿ ಮಾಡುವುದು ಎಂದು ನಿರ್ಧಾರವಾಯ್ತು..

ನಾಟಕಕ್ಕೆ "ಪ್ರಾಪ್ಸ್" ತಯಾರು ಮಾಡಿದ್ದ ರಾಜೇಶ್ ಆಚಾರ್ಯ ಹಾಗೂ ನರಸಿಂಹ ಮೂರ್ತಿ ಅವರುಗಳು ಅದೆಲ್ಲವನ್ನು ಎರಡು ದಿನ ಮುಂಚೆ ರೆಕಾರ್ಡಿಂಗ್ ಜಾಗಕ್ಕೆ ಕೊಂಡೊಯ್ದು ಸಜ್ಜುಗೊಳಿಸಿದರು...ಬೃಂದಾವನದ ತಾಂತ್ರಿಕ ತಂಡದ ಪ್ರಶಾಂತ್, ನಂದೀಶ್, ಶೇಖರ್ ಹಾಗೂ ಸುಹಾಸ್ ಕ್ಯಾಮೆರ, ಬೆಳಕು ಹಾಗೂ ಧ್ವನಿ ಯನ್ನು ಸಜ್ಜುಗೊಳಿಸಲು ಒಂದು ದಿನ ಮುಂಚೆಯೇ ಅಲ್ಲಿಗೆ ಹೋಗಿ ಎಲ್ಲಾ ತಯಾರು ಮಾಡಿದ್ದರು










ಅಂತೂ ಬಂದೇ ಬಿಟ್ಟಿತು ರೆಕಾರ್ಡಿಂಗ್ ದಿವಸ...ಮದ್ಯಾಹ್ನ ೩ ರಿಂದ ೮ ಘಂಟೆವರೆಗೆ ಎಲ್ಲ ೫ ದೃಶ್ಯಗಳನ್ನೂ ರೆಕಾರ್ಡಿಂಗ್ ಮಾಡಿ ಮುಗಿಸಬೇಕು ಅಂತ ಒಂದು ಸಮಯಕಾಲಿಕ ಹಾಕಿಕೊಂಡು ಎಲ್ಲರಿಗೂ ೩೦ ನಿಮಿಷ ಮುಂಚೆ ಬರಲು ಕಟ್ಟಪ್ಪಣೆ ಆಯ್ತು. ಮುಸುಕುಗಳನ್ನು ಹಾಕಿಕೊಂಡು ಎಲ್ಲರೂ ಬಂದು ತಲುಪಿ ಮೊದಲನೆ ದೃಶ್ಯದ ರೆಕಾರ್ಡಿಂಗ್ ಶುರುವಾದಾಗ ೪ ಘಂಟೆ ಆಗಿತ್ತು.. ಎಲ್ಲರ ಸಂಭಾಷಣೆ, ಅಭಿನಯ ಸರಿಯಾಗಿ ಬರಲು ಮೊದಲನೆಯ ದೃಶ್ಯಕ್ಕೆ ೧೦ ಬಾರಿ "ಟೇಕ್" ಮಾಡಬೇಕಾಯ್ತು..೧೫ ನಿಮಿಷದ ದೃಶ್ಯ ಮುಗಿಸಲು ೨ ಘಂಟೆ ಹಿಡಿಯಿತು..ಸಮಯಕಾಲಿಕೆಯ ಸಮಯಸೂಚಿ ಒಂದೇ ಬಾರಿಗೆ ಉಡೀಸ್...ಮುಂದಿನ ದೃಶ್ಯದ ರೆಕಾರ್ಡಿಂಗ್ ಶುರುವಾದಾಗ ಮೂರು ಘಂಟೆ ಗೊತ್ತಿಲ್ಲದೆ ಕಳೆದು ಹೋಗಿತ್ತು...ಮಧ್ಯೆ ಮಧ್ಯೆ ಪಾನಿಯಮ್ ಸಮರ್ಪಿಯಾಮಿ ಅನ್ನೊ ತರ ಪ್ರತಿ ದೃಶ್ಯ ಮುಗಿದ ಮೇಲೂ ಕಾಫಿ, ಟೀ, ಚುರುಮುರಿ ಬಿಸ್ಕತ್ತುಗಳಿಗೆ ಕೊರತೆ ಏನೂ ಇರಲಿಲ್ಲ...ಕೊನೆಗೆ ಮುನ್ನುಡಿ, ಪಾತ್ರ ಪರಿಚಯ, ವಂದನಾರ್ಪಣೆ ಮತ್ತು ಐದೂ ದೃಶ್ಯಗಳನ್ನ ರೆಕಾರ್ಡ್ ಮಾಡಿ ಮುಗಿಸಿದಾಗ ರಾತ್ರಿ ೧೧ ಘಂಟೆ ಆಗಿತ್ತು... ಭಾವ ಮೈದುನನನ್ನು ಬೃಂದಾವನದ ತಾಂತ್ರಿಕ ವರ್ಗದವರು ತಮ್ಮ ಕ್ಯಾಮೆರದಲ್ಲಿ ಸೆರೆಹಿಡಿಯುವ ಕೆಲಸವನ್ನು ಅಚ್ಚುಕಟ್ಟಾಗಿ ಮುಗಿಸಿದ್ದರು....

ನಮ್ಮವರೇ ಆದ ಸ್ವಾತಿ ಹಾಗೂ ಆನಂದ್ ರಾವ್ ದಂಪತಿಗಳ ನಮ್ಮೇರಿಕ ಸಂಸ್ಥೆಯು ಜಾಲತಾಣದಲ್ಲಿ ಏಪ್ರಿಲ್ ೨೦೨೧ ರಲ್ಲಿ ನಡೆಸಿದ ಪ್ರಪ್ರಥಮ ಅಂತರರಾಷ್ಟ್ರೀಯ ಕನ್ನಡ ನಾಟಕೋತ್ಸವದಲ್ಲಿ ಐದು ದೇಶಗಳಿಂದ ಬಂದಿದ್ದ ೧೧ ನಾಟಕಗಳನ್ನು ಪ್ರದರ್ಶಿಸಿ ಅತ್ಯಂತ ಯಶಸ್ವಿಯಾಗಿ ನಡೆಸಿದರು. ಅಲ್ಲಿ ಪ್ರದರ್ಶನಗೊಂಡ ನಮ್ಮ ಬೃಂದಾವನದ ಭಾವಮೈದುನನ್ನ ವೀಕ್ಷಿಸಿದ ಎಲ್ಲರೂ ಹೊಟ್ಟೆ ಹುಣ್ಣಾಗುವಂತೆ ನಕ್ಕು ನಲಿದೆವು ಅಂತ ತಿಳಿಸಿದಾಗ ನಮ್ಮ ಶ್ರಮ ಸಾರ್ಥಕ ಆಯಿತು ಅಂತ ಅನಿಸಿತು..ಎಲ್ಲರು ತಮ್ಮ ತಮ್ಮ ಪಾತ್ರಗಳಿಗೆ ಜೀವ ತುಂಬಿ ಸಮರ್ಪಕವಾಗಿ ಅಭಿನಯಿಸಿದ್ದರು..ಇಲ್ಲೇ ಹುಟ್ಟಿ ಬೆಳೆದ ನಮ್ಮ ಐದೂ ಮಕ್ಕಳು ಗ್ರಾಮೀಣ ಭಾಷೆಯ ಕನ್ನಡ ಕಲಿತು ಉತ್ತಮವಾಗಿ ಅಭಿನಯಿಸಿದ್ದು ಎಲ್ಲರ ಗಮನ ಸೆಳೆಯಿತು..ತಾಂತ್ರಿಕವಾಗಿಯೂ ಕೂಡ ಅದ್ಭುತವಾಗಿ ಮೂಡಿ ಬಂದಿತು... ಬೃಂದಾವನದ ಸುಮಾರು ೨೫-೩೦ ಮಂದಿ ೫೦ ದಿವಸ ಪಟ್ಟ ಶ್ರಮದಿಂದ ಈ ಕರೋನ ಸಮಯದಲ್ಲೂ ಕೂಡ ಒಂದು ಉತ್ತಮವಾದ ನಾಟಕವನ್ನು ಅಂತರ್ಜಾಲದಲ್ಲಿ ಪ್ರದರ್ಶಿಸಲು ಸಾಧ್ಯವಾಯಿತು... ಬೃಂದಾವನಕ್ಕೆ ಭಾವಮೈದುನ ಬಂದಾಯಿತು!!!!

ಬೃಂದಾವನಕ್ಕೆ ಬಂದ ಭಾವಮೈದುನ ಹೇಗಿದ್ದಾನೆ, ನಮ್ಮ ಬೃಂದಾವನದ ಟೀನೇಜ್ ಮಕ್ಕಳು ಹಾಗೂ ದೊಡ್ಡವರು ತಮ್ಮ ತಮ್ಮ ಪಾತ್ರಗಳನ್ನು ಹೇಗೆ ನಿಭಾಯಿಸಿದ್ದಾರೆ ಎಂದು ನೋಡಲು ಈ ಕೆಳಗಿನ ಕೊಂಡಿಯ ಮೇಲೆ ಕ್ಲಿಕ್ಕಿಸಿ....

https://youtu.be/3qQHrHaj7JY

# ಎನ್ನ ಶಿರಸಿಯಿದು



**ಸ್ವಾತಿ ಪಂಡಿತ್**

ರವಿಯ ಕಿರಣಗಳು
ಸೋಂಕಿ ಅರಳಿತಾ
ಬನಗಳ್ ತೊರೆಗಳ್
ಸವಿಚೇತನಗಳ್
ಪವನದೇವ ತಾ ಪಸರುತಿರ್ಪನು
ಸೌಗಂಧವ ಪೂಮಾಲೆಗಳೊಳ್.

ವರುಣ ಚುಂಬಿಸುವ
ಮದನ ಮೋಹಿಸುವ
ಪ್ರಕೃತಿ ನಲಿವರಮನೆಯೆ ಇದು
ಕವಿಗಳ್ ನರ್ತಿಸಿದ
ಹಸಿರು ಉದಯಿಸಿದ
ತಾಣವಿದು ಚೆಲುವ ಶಿರಸಿಯಿದು..

ರಸಿಕರು ಕಾಶ್ಮೀರ ಎಂದು ಪೇಳ್ವರ್
ಉಳಿದವರು ಐಸಿರಿ ಎಂದು ಪೇಳ್ವರ್
ಲೇಖನಿಯ ಹಿಡಿದು ತೊದಲು ನುಡಿವವರು
ತಿಳಿಯ ಮೊಲೆಯಿಂದ
ಕಲೆಯ ಹಾಲುಣಿಸಿ
ಸಲಹುತಿಹ ತಾಯಿ ಎಂದು ಪೇಳ್ವರ್.

ಯಕ್ಷಗಾನ ಹರಿಕಥಾ ಪಾನ
ಸಾಂಸ್ಕೃತಿಕ ಸುಧೆಯ
ನಿಲ್ದಾಣಮಿದು
ಮಾರಿಕಾಂಬೆ ತಾ ನೆಲಸಿ
ಪೋಷಿಸಿಹ ಬೀಡು ಇದು
ಚೆಲುವ ಶಿರಸಿ ಇದು.

ಎನ್ನ ಜಿಹ್ವೆಯೆಯಿಂ
ದೆಟ್ಟು ಪೊಗಳಿದರೂ
ಇನಿತೆನಿಸುವ
ಸಿರಿ ನಾಕವಿದು
ಎನ್ನ ಕಾವ್ಯದೊಳ ಹೊಕ್ಕಿ
ಹರಿಯುತಿಹ ಸ್ವರಮಿದು
ಎನ್ನ ಶಿರಸಿಯಿದು.



# ಗಂಡಭೇರುಂಡ ಪಕ್ಷಿಯ ಕಥೆ

**ಪರಿಮಳಾ ಕೌಜಲಗಿ**

ಬಹಳ ಹಿಂದೆ ಒಂದು ಕಾಡಿನಲ್ಲಿ ಗಂಡಭೇರುಂಡ ಪಕ್ಷಿಯೊಂದು ವಾಸವಾಗಿತ್ತು. ಗಂಡಭೇರುಂಡ ಎನ್ನುವುದು ಎರಡು ತಲೆ, ಒಂದೇ ದೇಹವುಳ್ಳ ಒಂದು ಪೌರಾಣಿಕ ಪಕ್ಷಿ. ಈಗಲೂ ಸಂಪ್ರದಾಯಸ್ಥರ ಮನೆಯಲ್ಲಿ ಇದನ್ನು ರಂಗೋಲಿಯಲ್ಲಿ ಬಿಡಿಸುವುದನ್ನು ಕಾಣಬಹುದು. ನಮ್ಮ ಕರ್ನಾಟಕ ಸರ್ಕಾರದ ಲಾಂಛನವೂ ಆದ ಈ ಪಕ್ಷಿ, ಹಿಂದೆ ಮೈಸೂರು ರಾಜರ ಲಾಂಛನವಾಗಿತ್ತು.

ಒಂದು ದಿನ ಅದು ಹೀಗೇ ಆನಂದವಾಗಿ ಹಾರಾಡಿಕೊಂಡಿದ್ದಾಗ ಅದಕ್ಕೆ ಒಂದು ಸಿಹಿಯಾದ, ಸುಮಧುರ ವಾಸನೆಯುಳ್ಳ ಹಣ್ಣೊಂದು ಸಿಕ್ಕಿತು. ಮೊದಲನೆಯ ಮುಖ ಅದನ್ನು ತಿನ್ನಲು ಶುರು ಮಾಡಿದಾಗ ಮತ್ತೊಂದು ಮುಖ ತನಗೂ ಸ್ವಲ್ಪ ಭಾಗ ಕೊಡುವಂತೆ ಅಂಗಲಾಚಿತು. ಮೊದಲನೆಯ ಮುಖ ಒಪ್ಪಲಿಲ್ಲ. "ಇದು ನನಗೆ ಸಿಕ್ಕಿದ್ದು, ನಾನೇ ತಿನ್ನುವೆ" ಎಂದಿತು. ಆಗ ಮತ್ತೊಂದು ಮುಖ "ನಾವಿಬ್ಬರೂ ಒಂದೇ ಅಲ್ಲವೇ? ಯಾರು ತಿಂದರೂ ಹೋಗುವುದು ಒಂದೇ ದೇಹಕ್ಕೆ ತಾನೇ? ನಾನೂ ಸ್ವಲ್ಪ ರುಚಿ ನೋಡುವೆ" ಎಂದು ಎಷ್ಟು ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ. ನಿರಾಶೆಗೊಂಡ ಎರಡನೆಯ ಮುಖ ಅಂತಹ ಇನ್ನೊಂದು ಹಣ್ಣಿಗಾಗಿ ಹುಡುಕಾಟ ನಡೆಸಿತು. ಆದರೆ ಅದರ ದುರಾದೃಷ್ಟಕ್ಕೆ ಅಂತಹ ಸುಮಧುರ ಹಣ್ಣು ಮತ್ತೆ ಸಿಗಲೇ ಇಲ್ಲ. ಬದಲಾಗಿ ಒಂದು ವಿಷಪೂರಿತ ಹಣ್ಣು ಅದರ ಕಣ್ಣಿಗೆ ಬಿದ್ದಿತು. ಈ ವೇಳೆಗಾಗಲೇ ಅದರ ಸಹನೆ ಮೀರುತ್ತಿತ್ತು. ಆ ವಿಷಕಾರಿ ಹಣ್ಣನ್ನೇ ತಿನ್ನಲು ಶುರು ಮಾಡಿತು.



ಈಗ ಮೊದಲನೆಯ ಮುಖ ಆ ವಿಷದ ಹಣ್ಣನ್ನು ತಿನ್ನಬೇಡವೆಂದು ಪರಿಪರಿಯಾಗಿ ಅಂಗಲಾಚಿತು, "ನಾನೂ ನೀನೂ ಒಂದೇ ಅಲ್ಲವೇ? ನೀನು ತಿಂದರೆ ಇಬ್ಬರೂ ಸತ್ತುಬಿಡುತ್ತೇವೆ." ಆದರೆ ಎರಡನೆಯ ಮುಖ ಆ ಮಾತನ್ನು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಅದರ ಕೋಪವೀಗ ಕ್ರೋಧವಾಗಿ ಮಾರ್ಪಾಡಾಗಿತ್ತು. ಕೋಪ ಬಂದರೆ ಶಮನವಾಗಬಹುದು, ಆದರೆ ಕ್ರೋಧ ಉಲ್ಬಣವಾಗುತ್ತಲೇ ಹೋಗುತ್ತದೆ. "ನಾನು ವಿಷದ ಹಣ್ಣು ತಿಂದು ಸತ್ತರೂ ಚಿಂತೆಯಿಲ್ಲ, ನೀನು ಮಾತ್ರ ಬದುಕಿರಬಾರದು" ಎನ್ನುತ್ತ ಹಣ್ಣನ್ನು ತಿಂದೇ ಬಿಟ್ಟಿತು. ಎಂತಹ ವಿಕೃತಿ! ಮುಂದೆ ಏನಾಯಿತು ಎಂದು ಹೇಳುವ ಅಗತ್ಯವೇ ಇಲ್ಲ.

ಎಲ್ಲರೂ ಕೇಳಿರಬಹುದಾದ ಒಂದು ಚಿಕ್ಕ ಕಥೆ ಇದು. ಆದರೆ ಸಾರುವ ಸಂದೇಶ ದೊಡ್ಡದು. ಒಂದೇ ಕುಟುಂಬದ ಬೇರೆ ಬೇರೆ ಸದಸ್ಯರಲ್ಲಿ ಸಾಮರಸ್ಯವಿರದೆ ಹೋದರೆ ಹಾನಿ ಯಾರಿಗೆ? ಎಲ್ಲರಿಗೂ! ಎಲ್ಲರೂ ಹೃದಯದಲ್ಲಿ ಪ್ರೀತಿಯನ್ನು ತುಂಬಿಕೊಂಡು, ಪ್ರೀತಿಯನ್ನೇ ಹಂಚುತ್ತ ಹೋದರೆ ಎಲ್ಲರಿಗೂ ಹಿತ. ಹೌದಲ್ಲವೇ? ಹಾಗೆಯೇ ಸಮಾಜದಲ್ಲೂ ಸಹ ಬೇರೆ ಬೇರೆ ಪಂಗಡಗಳು, ಸಮುದಾಯಗಳು ಸೌಹಾರ್ದದಿಂದ ವರ್ತಿಸಿದರೆ ಎಲ್ಲರಿಗೂ ಸುಖ. ಬದಲಾಗಿ ಅಸಹನೆ, ಘರ್ಷಣೆ, ಕಲಹಗಳಿಂದ ತುಂಬಿಹೋದ ಸಮಾಜದಿಂದ ಯಾರಿಗೆ ಹಿತ? ಅದೇ ಪ್ರಕಾರ ಒಂದು ದೇಶದ ಪ್ರತಿಯೊಬ್ಬ ನಾಗರಿಕನೂ 'ಇದು ನನ್ನ ದೇಶ, ಇದರ ಭದ್ರತೆಯೇ ನನ್ನ ಭದ್ರತೆ' ಎಂದು ತಿಳಿದು ನಡೆಯುವ ಬದಲು, ಯಾವುದೋ ಆಮಿಷಕ್ಕೆ ಬಲಿಯಾಗಿ ದೇಶದ್ರೋಹಿ ಕೆಲಸದಲ್ಲಿ ತೊಡಗಿದರೆ ಅದರ ವಿಷದ ಫಲ ಎಲ್ಲರನ್ನೂ ತಲುಪುತ್ತದೆ ಅಲ್ಲವೇ?

ದೇಶದ ಅಭಿವೃದ್ಧಿಯನ್ನು, ಪ್ರಗತಿಯನ್ನು ಸಹಿಸದ ಕೆಲವು ಆಂತರಿಕ ಶಕ್ತಿಗಳೇ ದೇಶದ ವಿರುದ್ಧ ತಿರುಗಿ ನಿಲ್ಲುತ್ತಿರುವ ಇಂದಿನ ವಿದ್ಯಮಾನಗಳನ್ನು ಗಮನಿಸಿದಾಗ ಈ ಪಕ್ಷಿಯ ದಾರುಣ ಅಂತ್ಯದ ಕಥೆ ನೆನಪಾಗುತ್ತದೆ. ಆದರೆ ಹಾಗಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ!



# ಪುಣ್ಯ ಕ್ಷೇತ್ರ ದರ್ಶನ

**ಸುವರ್ಣಲಕ್ಷ್ಮಿ** *ಸೋಮಯಾಜಲಹಳ್ಳಿ, ಶ್ರೀನಿವಾಸಪುರ ತಾಲ್ಲೂಕು.*

**ಮೇ** 25 ವೈಶಾಖ ಶುಕ್ಲ ಚತುರ್ದಶಿಯಂದು ನರಸಿಂಹ ಜಯಂತಿಯನ್ನು ಆಚರಿಸಲಾಗುತ್ತದೆ. ಹಿರಣ್ಯಕಶಿಪುವನ್ನು ಸಂಹರಿಸಲು ನರಸಿಂಹ ಅವತಾರವೆತ್ತಿದ ಕಥೆ ನಮಗೆಲ್ಲಾ ತಿಳಿದಿದೆ. ಭಾರತದಾದ್ಯಂತ ಹಲವಾರು ನರಸಿಂಹ ದೇಗುಲಗಳು ಇದ್ದು, ಹಲವು ನರಸಿಂಹ ದೇಗುಲಗಳ ಬಗ್ಗೆ ನರಸಿಂಹ ಜಯಂತಿಯ ಈ ಶುಭ ಸಂದರ್ಭದಲ್ಲಿ ತಿಳಿಯೋಣ.

## ಅಹೋಬಿಲಂ

ಈ ಸ್ಥಳದಲ್ಲಿಯೇ ವಿಷ್ಣುವು ನರಸಿಂಹಾವತಾರ ತಾಳಿದ್ದು ಹಾಗೂ ಪ್ರಹ್ಲಾದನ ಭಕ್ತಿಗೆ ಮೆಚ್ಚಿ ಹಿರಣ್ಯಕಶಿಪುವನ್ನು ವಧಿಸಿದ್ದು. ನರಸಿಂಹಸ್ವಾಮಿ ಹೊರಬಂದ ಕಂಬವನ್ನು ಸಹ ಇಲ್ಲಿ ನಾವು ನೋಡಬಹುದು, ಆದರೆ ಚಾರಣ ಮಾಡುವುದು ಸ್ವಲ್ಪ ಕಷ್ಟ. ಈ ಅಹೋಬಿಲಂ ಆಂಧ್ರ ಪ್ರದೇಶದ, ನಂದ್ಯಾಲದಿಂದ 66 ಕಿಮೀ ದೂರದಲ್ಲಿದೆ. ಇಲ್ಲಿ ಎಗುವ ಅಹೋಬಿಲಂ ಹಾಗೂ ದಿಗುವ ಅಹೋಬಿಲಂ ಎಂದು ಎರಡು ನರಸಿಂಹ ದೇಗುಲಗಳು ಇವೆ. ಇವಲ್ಲದೆ ಮತ್ತೂ 9 ನರಸಿಂಹ ದೇಗುಲಗಳು ಇವೆ. ಇವುಗಳನ್ನು ನವನಾರಸಿಂಹಗಳು ಅನ್ನುತ್ತಾರೆ. ಇವುಗಳನ್ನು ನೋಡಲು ನಲ್ಲಮಲ ಕಾಡಿನಲ್ಲಿ ಗೈಡ್‌ನ ಸಹಾಯದಿಂದ ಟ್ರೆಕ್ಕಿಂಗ್ ಮಾಡಬೇಕಾಗುತ್ತದೆ. ದಿಗುವ ಅಹೋಬಿಲಂನಲ್ಲಿ ಶಾಂತಮೂರ್ತಿಯಾದ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯವಿದ್ದು ಎಗುವ ಅಹೋಬಿಲಂನಲ್ಲಿ ಅಂದರೆ ಬೆಟ್ಟದ ಮೇಲಿರುವ ನರಸಿಂಹ ಉಗ್ರ ನರಸಿಂಹನಾಗಿದ್ದಾನೆ. ಇದಲ್ಲದೆ ಇಲ್ಲಿ ಇನ್ನಿತರ ನರಸಿಂಹ ರೂಪಗಳೂ ಇವೆ. ಈ ದೇಗುಲಗಳಿಗೆ ಪ್ರತಿದಿನ ಸಾವಿರಾರು ಭಕ್ತರು ಬರುತ್ತಾರೆ ಹಾಗೂ ಹಲವಾರು ಜನ ಮನೆ ದೇವರು ಎಂದು ದೇವರಿಗೆ ನಡೆದುಕೊಳ್ಳುತ್ತಾರೆ. ನನಗೂ ಈ ಆಲಯ ನೋಡುವ ಸೌಭಾಗ್ಯ ಸಿಕ್ಕಿತ್ತು, ನಾನೇ ಧನ್ಯ. ಇಲ್ಲಿ ಜ್ವಾಲಾ ನರಸಿಂಹ, ಅಹೋಬಿಲ ನರಸಿಂಹ, ಮಾಲೋಲ ನರಸಿಂಹ, ಕ್ರೋಧ ನರಸಿಂಹ, ಕಾರಂಜ ನರಸಿಂಹ, ಭಾರ್ಗವ ನರಸಿಂಹ, ಯೋಗಾನಂದ ನರಸಿಂಹ, ಚತ್ರವತ ನರಸಿಂಹ, ಪಾವನ ನರಸಿಂಹ ಎಂಬ ನವನಾರಸಿಂಹ ಕ್ಷೇತ್ರಗಳೂ ಇವೆ. ಇದಲ್ಲದೆ ದಿಗುವ ಅಹೋಬಿಲಂನಲ್ಲಿ ಮತ್ತೊಂದು ನರಸಿಂಹ ದೇಗುಲವಿದ್ದು ಅದನ್ನು ಸ್ವತಃ ತಿರುಪತಿಯ ವೆಂಕಟೇಶನೇ ಪ್ರತಿಷ್ಠಿಸಿದನೆಂದು ಪ್ರತೀತಿ. ಇಲ್ಲಿ ವಿವಿಧ ಛತ್ರಗಳು ಇದ್ದು, ಸದಾ ಅನ್ನದಾನಗಳು ನಡೆಯುತ್ತಲೇ ಇರುತ್ತದೆ. ಏನಾದರೂ ನಲ್ಲಮಲ ಕಾಡಿನ ಸುಂದರ ಪ್ರಕೃತಿಯ ನಡುವಿನ ದೇಗುಲಕ್ಕೊಮ್ಮೆ ಭೇಟಿ ನೀಡಿದರೆ ಮನಸ್ಸಿಗೆ ಆಹ್ಲಾದವೆನಿಸುತ್ತದೆ.

## ಕದಿರಿ

ನರಸಿಂಹ ಸ್ವಾಮಿಯು ಹಿರಣ್ಯಕಶಿಪುವನ್ನು ಸಂಹರಿಸಿದ ನಂತರವೂ ಕೋಪ ಕಡಿಮೆಯಾಗದೆ ಬೆಟ್ಟಗಳಲ್ಲಿ ಅಲೆದಾಡುತ್ತಾ ಈಗಿನ ಅನಂತಪುರ ಜಿಲ್ಲೆಯ ಕದಿರಿ ಹತ್ತಿರ ಇರುವ ಬೆಟ್ಟಕ್ಕೆ ಬರುತ್ತಾರೆ. ಆಗ ದೇವಾನುದೇವತೆಗಳು ಹಾಗೂ ಪ್ರಹ್ಲಾದನು ನರಸಿಂಹ ಸ್ವಾಮಿಯನ್ನು ಶಾಂತನಾಗಬೇಕೆಂದು ಪ್ರಾರ್ಥಿಸಲು, ಸ್ವಾಮಿಯು ಶಾಂತನಾಗುತ್ತಾನೆ. 'ಖಾ' ಅಂದರೆ ವಿಷ್ಣುಪಾದ. 'ಅದ್ರಿ' ಅಂದರೆ ಬೆಟ್ಟ. ವಿಷ್ಣು ಈ ಬೆಟ್ಟದ ಮೇಲೆ ಪಾದ ಊರಿದ್ದರಿಂದ ಇದನ್ನು ಖಾದ್ರಿ ಎಂದು ಕರೆಯುತ್ತಿದ್ದರು. ಈ ಪ್ರದೇಶ ಈಗ ಜನರ ಬಾಯಲ್ಲಿ ಕದಿರಿ ಆಗಿದೆ. ಒಮ್ಮೆ ಈ ಪ್ರದೇಶಕ್ಕೆ ಬಂದಿದ್ದ ಬುಕ್ಕರಾಯರಿಗೆ ಕನಸಿನಲ್ಲಿ ಸ್ವಾಮಿಯು ಕಾಣಿಸಿ, ಖದಿರ(ಚಂಡ್ರ) ವೃಕ್ಷಗಳ ಕೆಳಗಡೆ ತನ್ನ ಸಾಲಿಗ್ರಾಮ ಇರುವುದಾಗಿ ತಿಳಿಸಿ, ದೇಗುಲ ಕಟ್ಟಲು ಆದೇಶಿಸುತ್ತಾರೆ. ಅದರಂತೆ ಬುಕ್ಕರಾಯರು ದೇಗುಲವನ್ನು ನಿರ್ಮಿಸಿ ಅಷ್ಟಭುಜವುಳ್ಳ ನರಸಿಂಹಸ್ವಾಮಿಯನ್ನೂ ಹಾಗೂ ಪ್ರಹ್ಲಾದನನ್ನೂ ಪ್ರತಿಷ್ಠಿಸಿದರು. ಕಾಲಕ್ರಮೇಣ ವಿವಿಧ ರಾಜರುಗಳು ಈ ದೇವಾಲಯದ ವಿವಿಧ ನಿರ್ಮಾಣ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಈಗ ಬೃಹತ್ ದೇಗುಲವಾಗಿದೆ. ಪ್ರಹ್ಲಾದನಿಗೆ ಇಡೀ ಭಾರತದಲ್ಲಿ ಪೂಜೆ ಸಲ್ಲುತ್ತಿರುವುದು ಇಲ್ಲಿ ಮಾತ್ರ. ಸ್ವಾಮಿಯ ಜನ್ಮನಕ್ಷತ್ರವಾದ ಸ್ವಾತಿ ನಕ್ಷತ್ರದ ದಿನದಂದು ನಡೆಯುವ ಅಭಿಷೇಕ ಇಲ್ಲಿ ವಿಶೇಷ. ಆ ದಿನ ಅಭಿಷೇಕದ ನಂತರ, ಸ್ವಾಮಿಯ ವಿಗ್ರಹವನ್ನು ಶೇಷವಸ್ತ್ರದಿಂದ ಒರೆಸಿದಾಗ ನಾಭಿಯ ಬಳಿ ಸ್ವೇದಬಿಂದುಗಳು ಕಂಡುಬರುತ್ತವೆ. ಎಷ್ಟು ಸಲ ಒರೆಸಿದರೂ ಬರುತ್ತಲೇ ಇರುತ್ತದೆ. ಇದನ್ನು ಸ್ವಾಮಿಯ ಮಹಿಮೆಯೆಂದು ತಿಳಿದು ಭಕ್ತರು ಆ ಸ್ವೇದವನ್ನೇ ತೀರ್ಥವೆಂದು ಸ್ವೀಕರಿಸುತ್ತಾರೆ. ಇಲ್ಲಿನ ರಥೋತ್ಸವಕ್ಕೆ ಲಕ್ಷಾಂತರ ಜನ ಸೇರುತ್ತಾರೆ. ಆಂಧ್ರ ಪ್ರದೇಶ ಹಾಗೂ ಕರ್ನಾಟಕದ ಬಹಳಷ್ಟು ಜನ ಈ ದೇವರಿಗೆ ನಡೆದುಕೊಳ್ಳುತ್ತಾರೆ. ಇಲ್ಲಿ ಶುದ್ಧವಾದ ಅರಿಸಿನದಿಂದ ಬಣ್ಣ ಬಣ್ಣದ ಕುಂಕುಮಗಳನ್ನು ತಯಾರಿಸುತ್ತಾರೆ. ಈ ಕುಂಕುಮಕ್ಕೆ ಬಹಳ ಬೇಡಿಕೆ ಇದ್ದು ಇಲ್ಲಿಗೆ ಬಂದವರೆಲ್ಲಾ ಕುಂಕುಮ ಖರೀದಿಸಿಯೇ ತೀರುತ್ತಾರೆ. ಹಾಗೆಯೇ ಮಲ್ಲಿಗೆ ಹೂವಿಗೂ ಈ ಊರು ಪ್ರಸಿದ್ಧಿ. ಕದಿರಿಯಲ್ಲಿ ಇನ್ನೂ ಹಲವಾರು ಆಲಯಗಳು ಇದ್ದು, ಒಮ್ಮೆ ನೋಡಲೇಬೇಕಾದ ಸ್ಥಳವಾಗಿದೆ.

## ಮಂಗಳಗಿರಿ

ನಾವೆಲ್ಲ ನಮ್ಮ ಆಂಧ್ರ ಪ್ರದೇಶದ ಪ್ರವಾಸದಲ್ಲಿ ವಿಜಯವಾಡಕ್ಕೆ ಕನಕದುರ್ಗ ಅಮ್ಮನನ್ನು ದರ್ಶಿಸಲು ಹೋಗಿರುತ್ತೇವೆ. ಅಲ್ಲಿಂದ ಅನತಿ ದೂರದಲ್ಲಿರುವ ಪಾನಕಾಲ ನರಸಿಂಹ ಸ್ವಾಮಿ ದೇವಾಲಯದ ಬಗ್ಗೆ ತಿಳಿದುಕೊಳ್ಳೋಣ. ಈ ದೇವಾಲಯವಿರುವುದು ವಿಜಯವಾಡ ಹಾಗೂ ಗುಂಟೂರುಗಳ ಮಧ್ಯೆ ಇರುವ ಮಂಗಳಗಿರಿ ಪಟ್ಟಣದ ಒಂದು ಬೆಟ್ಟದ ಮೇಲೆ. ಇದೊಂದು ಆನೆಯಾಕಾರದ ಜ್ವಾಲಾಮುಖಿ ಬೆಟ್ಟವಾಗಿದ್ದು, ಇಲ್ಲಿನ ನರಸಿಂಹಸ್ವಾಮಿ, ಭಕ್ತರು ಸಮರ್ಪಿಸಿದ ಪಾನಕವನ್ನು ಸ್ವತಃ ಕುಡಿದು ನಂತರ ಕುಡಿದಿದ್ದರಲ್ಲಿ ಅರ್ಧವನ್ನು ಹೊರಚೆಲ್ಲುತ್ತಾನೆ. ಅದನ್ನೇ ಭಕ್ತರು ಪ್ರಸಾದವೆಂದು ಸ್ವೀಕರಿಸುತ್ತಾರೆ. ಭಕ್ತರು ಒಂದು ಲೋಟ, ಚೊಂಬು, ಬಿಂದಿಗೆ, ಹಂಡೆ ಎಷ್ಟೇ

ಬೆಲ್ಲದ ಪಾನಕ ಅರ್ಪಿಸಿದರೂ ನರಸಿಂಹ ದೇವರು ಎಲ್ಲವನ್ನೂ ಕುಡಿದು ಸ್ವಲ್ಪ ಹೊರಚೆಲ್ಲುತ್ತಾರೆ, ಅದನ್ನೇ ದೇವರ ಪ್ರಸಾದವೆಂದು ಭಕ್ತರು ಸ್ವೀಕರಿಸುತ್ತಾರೆ. ವಾಸ್ತವವಾಗಿ ಇಲ್ಲಿನ ದೇವರಿಗೆ ಯಾವುದೇ ಆಕಾರವಿಲ್ಲ. ದೊಡ್ಡದಾಗಿ ಬಾಯಿ ತೆಗೆದಿರುವ ಒಂದು ಕಲ್ಲಿನ ರಚನೆಯಿದೆ. ಅದನ್ನೇ ನರಸಿಂಹ ಸ್ವಾಮಿ ಎಂದು ಭಾವಿಸಿ ಭಕ್ತರು ಪಾನಕ ಅರ್ಪಿಸುತ್ತಾರೆ. ಇದಕ್ಕೊಂದು ವೈಜ್ಞಾನಿಕ ಕಾರಣವನ್ನೂ ಹೇಳುತ್ತಾರೆ. ಇದು ಜ್ವಾಲಾಮುಖಿ ಬೆಟ್ಟವಾಗಿದ್ದರಿಂದ ಈ ರೀತಿ ಬೆಲ್ಲದ ಪಾನಕ ಅರ್ಪಿಸಿದರೆ ಬೆಲ್ಲದ ನೀರು ಜ್ವಾಲಾಮುಖಿಯ ಸಲ್ಫರ್ ಸಂಯುಕ್ತಗಳನ್ನು ಶಮನಗೊಳಿಸುತ್ತದೆ ಮತ್ತು ಭವಿಷ್ಯದಲ್ಲಿ ಜ್ವಾಲಾಮುಖಿ ಸಿಡಿಯದಿರಲಿ ಎಂದು. ಇಷ್ಟೆಲ್ಲಾ ಬೆಲ್ಲ ಸಕ್ಕರೆ ಪಾನಕಗಳನ್ನು ದೇವಾಲಯದಲ್ಲಿ ಬಳಸುತ್ತಿದ್ದರೂ ಇದುವರೆಗೆ ಇರುವೆ ಹಾಗೂ ನೊಣಗಳು ಬಂದಿಲ್ಲ. ಯಾವಾಗ ಇರುವೆ, ನೊಣಗಳು ಈ ದೇವಾಲಯಕ್ಕೆ ಮುತ್ತುತ್ತವೆಯೋ ಆಗ ಕಲಿಯುಗ ಅಂತ್ಯವಾಗುತ್ತದೆ ಎಂದು ನಂಬಿಕೆ. ಈ ದೇವಾಲಯದ ಹಿಂದೆ ಲಕ್ಷ್ಮೀ ದೇಗುಲವಿದ್ದು, ಪಕ್ಕದಲ್ಲಿ ಗುಹೆಯಿದ್ದು, ಅಲ್ಲಿ ಋಷಿಮುನಿಗಳು ತಪಸ್ಸು ಮಾಡುತ್ತಿದ್ದರೆಂದೂ ಅಲ್ಲಿಂದ ಕೃಷ್ಣಾ ನದಿ ತೀರದಲ್ಲಿರುವ ಉಂಡವಲ್ಲಿ ಗುಹೆಗಳಿಗೆ ದಾರಿ ಇದೆ ಎಂದೂ ಹೇಳುತ್ತಾರೆ. ಉಂಡವಲ್ಲಿ ಗುಹೆಗಳ ಬಗ್ಗೆ ಮುಂದೊಮ್ಮೆ ತಿಳಿದುಕೊಳ್ಳೋಣ. ಈ ದೇವಾಲಯ ಮಧ್ಯಾಹ್ನ 3 ಗಂಟೆಗೆ ಮುಚ್ಚಲ್ಪಡುತ್ತದೆ. ಏಕೆಂದರೆ ಸಂಜೆಯ ಸಮಯದಲ್ಲಿ ದೇವಾನುದೇವತೆಗಳು ಬಂದು ಈ ಪಾನಕಾಲ ನರಸಿಂಹ ಸ್ವಾಮಿಯನ್ನು ಪೂಜಿಸುತ್ತಾರೆ ಎನ್ನುವ ನಂಬಿಕೆ. ಸಂಜೆ ಈ ದೇವಾಲಯದ ಬಳಿ ಯಾರೂ ಸುಳಿಯುವುದಿಲ್ಲ. ಬೆಟ್ಟದ ಕೆಳಗಡೆ ಮತ್ತೊಂದು ಲಕ್ಷ್ಮೀನರಸಿಂಹಸ್ವಾಮಿ ದೇವಾಲಯವಿದ್ದು 153 ಅಡಿ ಎತ್ತರದ ಗೋಪುರವನ್ನು ಹೊಂದಿದೆ. ಇದು ಭಾರತದ ಎತ್ತರದ ಗೋಪುರಗಳಲ್ಲಿ ಒಂದಾಗಿದೆ. ಹಾಗೂ ಇಲ್ಲಿನ ನರಸಿಂಹ ದೇವರು 108 ಸಾಲಿಗ್ರಾಮಗಳ ಹಾರ ಧರಿಸಿ ತನ್ನ ಬಳಿ ಬರುವ ಭಕ್ತರನ್ನು ಹರಸುತ್ತಿದ್ದಾನೆ. ಈ ಸಲದ ವಿಜಯವಾಡದ ಭೇಟಿಯಲ್ಲಿ ನಾವೂ ಪಾನಕ ಅರ್ಪಿಸೋಣವೇ?

## ಝರಣಿ ನರಸಿಂಹಸ್ವಾಮಿ

ಬೀದರ್ ನಿಂದ ಕೇವಲ 4 ಕಿ.ಮೀ ದೂರದಲ್ಲಿದೆ ಈ ವಿಶಿಷ್ಟ ಜಲಾಧಿವಾಸ ನರಸಿಂಹ. ಸದಾ ಎದೆ ಮಟ್ಟದ ನೀರಿನಲ್ಲಿ ಇರುವ ಈ ನರಸಿಂಹನ ಹಿಂದೆ ಒಂದು ಕಥೆಯಿದೆ. ಹಿಂದೆ ಈ ಪ್ರಾಂತ್ಯದಲ್ಲಿ ಜರಾಸುರ ಎಂಬ ರಾಕ್ಷಸನಿದ್ದನಂತೆ. ಈತ ಈಶ್ವರನ ಪರಮಭಕ್ತನಾಗಿದ್ದು, ಗುಹೆಯೊಳಗೆ ದಿನವೂ ಈಶ್ವರನನ್ನು ಪೂಜಿಸುತ್ತಿದ್ದನಂತೆ. ಆದರೆ ಜನರಿಗೆ ಬಹಳ ತೊಂದರೆ ಕೊಡುತ್ತಿದ್ದನಂತೆ. ಆಗ ನರಸಿಂಹಸ್ವಾಮಿಯು ಈತನನ್ನು ಸಂಹರಿಸಲು ಬಂದನಂತೆ. ಸ್ವಲ್ಪ ಹೊತ್ತು ಸ್ವಾಮಿಯ ಜೊತೆ ಹೋರಾಡಿ ಜರಾಸುರ ಸೋಲುವ ಹಂತಕ್ಕೆ ಬಂದಾಗ, ತಾನು ವಾಸವಾಗಿದ್ದು ಶಿವನನ್ನು ಪೂಜಿಸುತ್ತಿದ್ದ ಗುಹೆಗೆ ಓಡಿ ನರಸಿಂಹಸ್ವಾಮಿಯ ಪಾದ ಹಿಡಿದು ನನ್ನ ಪಾಪಗಳನ್ನು ಕ್ಷಮಿಸಿ ಇಲ್ಲೇ ನೆಲೆ ನಿಲ್ಲಬೇಕೆಂದು ಕೇಳಿಕೊಳ್ಳುತ್ತಾನೆ. ಅದರಂತೆ ಸ್ವಾಮಿ ಇಲ್ಲಿಯೇ ನೆಲೆಗೊಳ್ಳುತ್ತಾನೆ. ಜರಾಸುರನು ಸ್ವಾಮಿಯ ಪಾದದಡಿ ನದಿಯಾಗಿ ಹರಿಯುತ್ತಿದ್ದಾನೆ. ಹಾಗೂ ಈ ಕ್ಷೇತ್ರಕ್ಕೆ ತನ್ನ ಹೆಸರು ಇಡಬೇಕೆಂದು ಕೇಳಿಕೊಳ್ಳುತ್ತಾನೆ. ಅದರಂತೆ ಈ ಕ್ಷೇತ್ರಕ್ಕೆ ಝರಣಿ ನರಸಿಂಹ ಎಂದು ಹೆಸರು ಬಂದಿದೆ. ಈ ನರಸಿಂಹನನ್ನು ನೋಡಲು 300 ಮೀಟರ್ ನಷ್ಟು ಉದ್ದವನ್ನು ಎದೆಯೆತ್ತರದ ನೀರಿನಲ್ಲಿ ನಾವು ನಡೆದು ಹೋಗಬೇಕಾಗುತ್ತದೆ. ವರ್ಷದ 365 ದಿನಗಳಲ್ಲೂ ಸದಾ ನೀರು ಇರುತ್ತದೆ. ಈ ನೀರು ಎಲ್ಲಿಂದ ಬರುತ್ತದೆ ಎಂದು ಯಾರಿಗೂ ತಿಳಿದಿಲ್ಲ ಮತ್ತು ಎಂತಹಾ ಸಮಯದಲ್ಲೂ ನೀರು ಎದೆ ಮಟ್ಟ ಮೀರುವುದಿಲ್ಲ. ಗುಹೆಯಾದ್ದರಿಂದ ಇಲ್ಲಿ ಆಮ್ಲಜನಕದ ಕೊರತೆಯಾಗದಂತೆ ವಾತಾಯನ ವ್ಯವಸ್ಥೆ ಮಾಡಲಾಗಿದೆ. ಗುಹೆಯೊಳಗೆ ಜರಾಸುರ ಪೂಜಿಸುತ್ತಿದ್ದ ಶಿವಲಿಂಗವೂ ಇದೆ. ಅದಕ್ಕೂ ಪೂಜೆ ಸಲ್ಲುತ್ತಿದೆ. ಅಲ್ಲಿಗೆ ಈ ಕ್ಷೇತ್ರದಲ್ಲಿ ಹರಿ ಹಾಗೂ ಹರ ಇಬ್ಬರಿಗೂ ಪೂಜೆ ಸಲ್ಲುವುದರಿಂದ ಇದು ಹರಿಹರ ಕ್ಷೇತ್ರವಾಗಿದೆ. ಇಲ್ಲಿಗೆ ಹೋಗುವವರ ಬಟ್ಟೆಗಳು ನೆನೆಯುವುದರಿಂದ ಒಂದು ಜೊತೆ ಬಟ್ಟೆ ಒಯ್ಯುವುದು ಅಗತ್ಯ.

## ಕಾಲಡಿ

ಅದ್ವೈತ ಸಿದ್ಧಾಂತ ಪ್ರತಿಪಾದಕರಾದ ಆದಿ ಶಂಕರಾಚಾರ್ಯರ ಜನ್ಮ ಸ್ಥಳವೇ ಕಾಲಡಿ. ಕೇರಳದ ಕಾಲಡಿಯಲ್ಲಿ ಆರ್ಯಾಂಬ ಹಾಗೂ ಶಿವಗುರು ಇವರ ಪುತ್ರನಾಗಿ, ಶಂಕರರು 509ನೇ ಇಸವಿಯಲ್ಲಿ ನಂಬೂದರಿ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರು. ಎಳೆಯ ವಯಸ್ಸಿನಲ್ಲೇ ಬಹಳ ಚುರುಕಾಗಿ ಇದ್ದ ಇವರು ಏಳನೇ ವಯಸ್ಸಿಗೇ ವೇದಗಳನ್ನು ಅಭ್ಯಾಸ ಮಾಡಿ ಮುಗಿಸಿದ್ದರು. ಶಂಕರರ ತಾಯಿ ಸ್ನಾನಕ್ಕೆ ಹೋಗಲು ಪೂರ್ಣಾನದಿ (ಈಗಿನ ಪೆರಿಯಾರ್ ನದಿ) ಬಹಳ ದೂರ ಇದ್ದುದರಿಂದ ಶಂಕರರು ಕೃಷ್ಣನನ್ನು ಪ್ರಾರ್ಥಿಸಲು, ಕೃಷ್ಣನು, ನದಿ ನಿನ್ನ ಕಾಲಿನಡಿ ಎಲ್ಲಿ ಬೇಕೋ ಅಲ್ಲಿ ಹರಿಯಲಿ ಎಂದು ವರ ಕೊಟ್ಟರು. ಶಂಕರರು ಪಾದ ಊರಿದ ಕಡೆ ನದಿ ಇಬ್ಭಾಗವಾಗಿ ಅವರ ಮನೆ ಬಳಿ ಹರಿಯುತ್ತದೆ. ಅದುವರೆಗೂ ಸಾಸಲ ಆಗಿದ್ದ ಆ ಊರಿನ ಹೆಸರು ಕಾಲಡಿ ಎಂದು ಆಗುತ್ತದೆ. ಇವರು ಬಾಲ್ಯದಲ್ಲಿಯೇ ಸನ್ಯಾಸಿ ಆಗಲು ಬಯಸುತ್ತಾರೆ. ಅವರ ತಾಯಿ ವಿರೋಧಿಸಿದರೂ ಅವರ ಮನವೊಲಿಸಿ ಎಂಟನೇ ವಯಸ್ಸಿನಲ್ಲಿ ಸನ್ಯಾಸ ಸ್ವೀಕರಿಸಿ ಗುರುವನ್ನು ಅರಸುತ್ತಾ ನರ್ಮದಾ ನದಿ ತೀರದಲ್ಲಿ ಗೋವಿಂದಪಾದರ ಶಿಷ್ಯರಾಗುತ್ತಾರೆ.

12ನೇ ವಯಸ್ಸಿಗೆ ಬ್ರಹ್ಮಜ್ಞಾನ ಪಡೆಯುತ್ತಾರೆ. ಗುರುದಕ್ಷಿಣೆಯಾಗಿ ವಿಷ್ಣುಸಹಸ್ರನಾಮಕ್ಕೆ ಭಾಷ್ಯವನ್ನು ಬರೆದು ಅರ್ಪಿಸುತ್ತಾರೆ. ಇದರಿಂದ ಸಂತೋಷಗೊಂಡ ಗುರುಗಳು, ಇಲ್ಲಿ ನಿನ್ನ ವಿದ್ಯಾಭ್ಯಾಸ ಮುಗಿಯಿತು, ಇನ್ನು ನೀನು ಬೌದ್ಧಮತದ ಅನುಯಾಯಿಗಳಿಂದ ಹಿಂದೂ ಧರ್ಮವನ್ನು ಕಾಪಾಡಬೇಕೆಂದೂ, ಅದಕ್ಕಾಗಿ ಭಾರತದ ಉದ್ದಗಲಕ್ಕೂ ದೇಶ ಪರ್ಯಟನೆ ಮಾಡಬೇಕೆಂದೂ ಹೇಳುತ್ತಾರೆ. ಹಾಗೂ ಪ್ರಸ್ಥಾನತ್ರಯಗಳಿಗೆ ಭಾಷ್ಯವನ್ನು ಬರೆಯಲು ಹೇಳುತ್ತಾರೆ. ಇವರು ಬರೆದ ಗ್ರಂಥಗಳನ್ನು ಹೊರಲು ಗುರುಗಳು ಒಂದು ನಂದಿಯನ್ನು ಶಂಕರರಿಗೆ ಕಾಣಿಕೆಯಾಗಿ ಕೊಡುತ್ತಾರೆ. ನಂದಿ ಹಾಗೂ ಮೂವರು ಶಿಷ್ಯರ ಜತೆ ದೇಶ ಪರ್ಯಟನೆ ಪ್ರಾರಂಭಿಸುತ್ತಾರೆ. ಕಾಶಿಯಲ್ಲಿ ಕೆಲಕಾಲ ಇದ್ದು ಗಂಗಾಸ್ತವ, ಹಾಗೂ ವಿಶ್ವನಾಥ ಸ್ತೋತ್ರ ರಚಿಸುತ್ತಾರೆ. ಮುಂದೆ ಬದರಿನಾಥಕ್ಕೆ ತೆರಳುತ್ತಾರೆ. ಅಲ್ಲಿ ಬೌದ್ಧಮತದ ಅನುಯಾಯಿಗಳು ಬದರೀನಾರಾಯಣನ ವಿಗ್ರಹವನ್ನು ನಾರದ ಕುಂಡದಲ್ಲಿ ಎಸೆದಿರುತ್ತಾರೆ. ಶಂಕರರು ತಮ್ಮ ಶಿಷ್ಯರ ಸಹಾಯದಿಂದ ಆ ವಿಗ್ರಹವನ್ನು ಹೊರತೆಗೆದು ಪ್ರತಿಷ್ಠೆ ಮಾಡುತ್ತಾರೆ. ನಂತರ ಅಲ್ಲಿಯೇ ನೆಲೆಸಿ ಉಪನಿಷತ್, ಬ್ರಹ್ಮಸೂತ್ರ, ಭಗವದ್ಗೀತೆಗಳಿಗೆ ಭಾಷ್ಯವನ್ನು ಬರೆಯುತ್ತಾರೆ. ಭಾಷ್ಯ ಎಂದರೆ ಕಠಿಣವಾಗಿರುವ ಸೂತ್ರಗಳನ್ನು ಸರಳವಾಗಿ ಜನರಿಗೆ ಅರ್ಥವಾಗುವ ರೀತಿಯಲ್ಲಿ ಬರೆಯುವುದು. ಬೌದ್ಧಮತದ ತತ್ವಗಳು ಉತ್ತಮವಾಗಿದ್ದರೂ ಬುದ್ಧನ

ನಂತರ ಅವರ ಅನುಯಾಯಿಗಳು ಹಿಂದೂ ಮತಸ್ಥರಿಗೆ ಬೌದ್ಧ ಧರ್ಮ ಹೇರಿ ಕಿರುಕುಳ ಮಾಡುತ್ತಿರುತ್ತಾರೆ. ಶಂಕರರು ಗುರುಗಳ ಆದೇಶದ ಮೇರೆಗೆ ಭಾರತದಲ್ಲಿ ಎಲ್ಲಾ ಕಡೆ ಸಂಚರಿಸಿ ಹಿಂದೂ ಧರ್ಮದ ಪುನರುಜ್ಜೀವನಕ್ಕಾಗಿ, ವೇದಧರ್ಮದ ಉಳಿವಿಗಾಗಿ, ಹಾಗೂ ಹಿಂದೂ ಧರ್ಮವನ್ನು ಸುಸ್ಥಿರಗೊಳಿಸುವುದಕ್ಕಾಗಿ ಶ್ರಮಿಸುತ್ತಾರೆ. ಅನೇಕ ಪಂಡಿತರುಗಳ ಜೊತೆ ವಾದಮಾಡಿ ಗೆಲ್ಲುತ್ತಾರೆ. ಅದರಲ್ಲಿ ಮಂಡನಮಿಶ್ರರು ಪ್ರಮುಖರು.

**ಪೂರಿಯಲ್ಲಿ ಗೋವರ್ಧನ ಪೀಠ, ಶೃಂಗೇರಿಯಲ್ಲಿ ಶಾರದಾಪೀಠ, ದ್ವಾರಕಾದಲ್ಲಿ ದ್ವಾರಕಾಮಠ** ಮತ್ತು **ಬದರಿಯಲ್ಲಿ ಜೋತಿರ್ಷ್ಮಠ** ಎಂಬ ನಾಲ್ಕು ಮಠಗಳನ್ನು ಸ್ಥಾಪಿಸಿ, ಧರ್ಮ ಸಂಸ್ಥಾಪನೆ, ಧರ್ಮ ರಕ್ಷಣೆಯನ್ನು ಆ ಮಠಗಳಿಗೆ ಒಪ್ಪಿಸುತ್ತಾರೆ. ಕಂಚಿಯಲ್ಲಿ ಕಾಮಕೋಟಿ ಪೀಠ ಸ್ಥಾಪಿಸಿ, ತಾವೇ ಪೀಠಾಧೀಶರಾದರು. ಇಂದಿಗೂ ಈ ಮಠಗಳಲ್ಲಿ ಗುರುಪರಂಪರೆ ಹಾಗೂ ಧರ್ಮದ ರಕ್ಷಣೆ ನಡೆಯುತ್ತಿದೆ. ಶಂಕರರು ಕೇವಲ 32 ವರ್ಷಗಳು ಬದುಕಿದ್ದರೂ ಬೆಲೆ ಕಟ್ಟಲಾಗದ, ಜನರನ್ನು ಧರ್ಮಮಾರ್ಗದಲ್ಲಿ ನಡೆಸುವ ಅನೇಕ ಸಾಹಿತ್ಯವನ್ನು ಕೊಟ್ಟಿದ್ದಾರೆ. ಅದರಲ್ಲಿ ಮುಖ್ಯವಾದದ್ದು, ಸೌಂದರ್ಯಲಹರಿ, ಶಿವಾನಂದಲಹರಿ, ವಿವೇಕ ಚೂಡಾಮಣಿ, ಕನಕಧಾರಾ ಸ್ತೋತ್ರ, ಭಜಗೋವಿಂದಂ, ಗಣೇಶ ಪಂಚರತ್ನ ಸ್ತೋತ್ರ, ಲಕ್ಷ್ಮೀನರಸಿಂಹಸ್ವಾಮಿ ಕರಾವಲಂಬ ಸ್ತೋತ್ರ. ಸನ್ಯಾಸ ಸ್ವೀಕರಿಸುವಾಗ ಇವರು ತಾಯಿಗೆ ನೀನು ಕರೆದಾಗ ಬರುತ್ತೇನೆ ಎಂದು ಮಾತು ಕೊಟ್ಟಿರುತ್ತಾರೆ. ಅದರಂತೆ ಅವರ ತಾಯಿ ಅಂತ್ಯಕಾಲದಲ್ಲಿ ಶಂಕರರನ್ನು ನೆನೆಸಿದಾಗ ಬಂದು ಆಕೆಯ ಕೋರಿಕೆಯಂತೆ ಅಂತ್ಯಕ್ರಿಯೆ ನೆರವೇರಿಸುತ್ತಾರೆ. ಶಂಕರರ ಮರಣದ ನಂತರ ಇವೆಲ್ಲಾ ವಿಷಯಗಳು ಇತಿಹಾಸದಿಂದ ಮರೆಯಾಗಿಬಿಟ್ಟಿರುತ್ತವೆ. ಆದರೆ, 1910 ರಲ್ಲಿ ಶೃಂಗೇರಿ ಮಠದ ಶಂಕರಾಚಾರ್ಯ ಅನ್ನುವ ಪೀಠಾಧಿಪತಿಗಳು ಆದಿ ಶಂಕರರ ಇತಿಹಾಸವನ್ನು ಕಂಡುಹಿಡಿದು ಜನರಿಗೆ ಪರಿಚಯಿಸುವ ಕೆಲಸ ಮಾಡಿದರು. ಅಲ್ಲಿನ ರಾಜ, ರಾಜವರ್ಮನ ಸಹಕಾರದಿಂದ ವ್ಯಾಪಕ ಪ್ರಚಾರ ನಡೆಸಿದರು. ಈಗಲೂ ನಾವು ಪುಣ್ಯಭೂಮಿ ಕಾಲಡಿಗೆ ಹೋಗಿ ಪೆರಿಯಾರ್ ನದಿ, ಕೃಷ್ಣನ ದೇಗುಲ, ರಾಮಕೃಷ್ಣ ಆಶ್ರಮ, ಶಂಕರರ ತಾಯಿಯ ಸಮಾಧಿ, ಶೃಂಗೇರಿ ಶಾಖಾಮಠ, ಸಪ್ತಮಾತೃಕಾ ದೇವಾಲಯ, ಶಂಕರರ ಕೀರ್ತಿ ಸ್ತಂಭ, ಶಂಕರರ ಪಾದುಕೆಗಳು ಇನ್ನೂ ಮುಂತಾದ ದೇಗುಲಗಳನ್ನು ನೋಡಿ ದೈವೀಕ ಅನುಭವ ಪಡೆಯಬಹುದು. ಅಂತಹಾ ಪುಣ್ಯಪುರುಷರು ನಡೆದಾಡಿದ ಭೂಮಿಯಲ್ಲಿ ನಡೆದಾಡುವುದೂ ಒಂದು ಪುಣ್ಯವೇ ಅಲ್ಲವೇ?

## ಮಹಾಬಲಿಪುರಂ

ನಾವು ಚಿಕ್ಕವರಿರುವಾಗ ಮಹಾಬಲಿಪುರಂ, ಮಹಾಬಲಿಪುರಂ ಅಂತ ತೆಲುಗು ದೂರದರ್ಶನದಲ್ಲಿ ಒಂದು ಹಾಡು ಬರುತ್ತಿತ್ತು. ಅದನ್ನು ನೋಡಿದಾಗಲೆಲ್ಲಾ ಮಹಾಬಲಿಪುರಂ ನೋಡಬೇಕೆಂದು ಅನಿಸುತ್ತಿತ್ತು. ಆ ಅವಕಾಶ ಇತ್ತೀಚೆಗೆ ಒದಗಿ ಬಂತು. ಇತ್ತೀಚೆಗೆ ನಮ್ಮ ಶಿಕ್ಷಕ ಮಿತ್ರರು ಏರ್ಪಡಿಸಿದ್ದ ಪ್ರವಾಸದಲ್ಲಿ ಬೇರೆ ಬೇರೆ ಊರುಗಳನ್ನು ನೋಡಿದ ನಂತರ ರಾತ್ರಿ 9.30 ಆಗಿತ್ತು. ನಮ್ಮ ಬಸ್ ಮಹಾಬಲಿಪುರಂನ ಪ್ರಸಿದ್ಧ ಗಂಗಾವತರಣದ ಬಳಿ ನಿಲ್ಲಿಸಿತ್ತು. ನನಗೆ ಖುಷಿಯೋ ಖುಷಿ!! ಆ ಶಿಲ್ಪಕ್ಕೆ ಒಳ್ಳೆಯ ವಿದ್ಯುದ್ದೀಪಗಳನ್ನು ಅಳವಡಿಸಿದ್ದರಿಂದ ಬಹಳ ಆಕರ್ಷಣೀಯವಾಗಿತ್ತು. ಈಗಲೇ ಎಲ್ಲಾ ನೋಡಲಾಗುವುದಿಲ್ಲವಲ್ಲ ಅಂತ ಬೇಸರವಾಗಿ ರೂಂ ಪಡೆದು ಮಲಗಿದರೂ ಬೆಳಿಗ್ಗೆ ಮಹಾಬಲಿಪುರಂ ನೋಡುತ್ತೀನಿ ಅನ್ನುವ ಕುತೂಹಲಕ್ಕೆ ನಿದ್ದೆಯೇ ಬರದೆ ಒದ್ದಾಡಿದೆ. ಬೆಳಿಗ್ಗೆ 5.30ಕ್ಕೆ ಎದ್ದು ಸಮುದ್ರ ತೀರದಲ್ಲಿ ಸೂರ್ಯೋದಯ ನೋಡೋಣ ಅಂತ ನನ್ನ ಯಜಮಾನರನ್ನು ಎಬ್ಬಿಸಿದರೆ, ವಾರದ ಹಿಂದೆ ಅವರ ಸ್ನೇಹಿತರ ಜೊತೆ ಇದೇ ಪ್ರವಾಸ ಕೈಗೊಂಡಿದ್ದ ಅವರಿಗೆ ಬರಲು ಆಸಕ್ತಿ ಇರಲಿಲ್ಲ. ಹಾಗಾಗಿ ತಿಳಿಯದ ಊರಿನಲ್ಲಿ, ಬಾರದ ತಮಿಳಿನಲ್ಲಿ ದಾರಿ ಕೇಳುತ್ತಾ ಸಮುದ್ರ ದಡಕ್ಕೆ ಹೊರಟೆ. ಅಲ್ಲಿ ನನಗಿಂತ ಮೊದಲೇ ನಮ್ಮ ಬಸ್ಸಿನ ಮಿತ್ರರು ಇದ್ದಿದ್ದರಿಂದ ಅವರ ಜೊತೆಯಲ್ಲಿ ಸೂರ್ಯೋದಯ ಸಮಯದಲ್ಲಿ ಕೆಂಪು ಕೆಂಪಾದ ಸಮುದ್ರದ ನೀರಿನ ಕಿರಿ ಹಿರಿ ಅಲೆಗಳೊಂದಿಗೆ ಮನಸೋ ಇಚ್ಚೆ ಆಟವಾಡಿದೆವು. ಆನಂತರ ರೂಂಗೆ ಹೋಗಿ ಫ್ರೆಷ್ ಆಗಿ ಶೋರ್ ಟೆಂಪಲ್ ನೋಡಲು ಹೋದೆವು. ಅಲ್ಲಿ ಟಿಕೆಟ್ ಪಡೆಯಲು ಹೋದಾಗ ಅಚ್ಚರಿ ಕಾದಿತ್ತು. 25ರೂ ಮುಖಬೆಲೆಯ ಆ ಟಿಕೆಟ್ ಅನ್ನು ಬಳಸಿ, ಮಹಾಬಲಿಪುರಂನ ಎಲ್ಲಾ ಪ್ರೇಕ್ಷಣೀಯ ಸ್ಥಳಗಳನ್ನೂ ನೋಡಬಹುದಾದ್ದರಿಂದ ಟಿಕೆಟ್ ಜಾಗ್ರತೆಯಾಗಿ ಇಟ್ಟು ಕೊಳ್ಳಬೇಕೆಂದು ಟಿಕೆಟ್ ಕೌಂಟರ್‌ನಲ್ಲಿದ್ದವರು ಹೇಳಿದರು. ಈ ರೀತಿಯ ಟಿಕೆಟ್ ವ್ಯವಸ್ಥೆ ಈ ಮೊದಲು ನೋಡಿರಲಿಲ್ಲ.

ಶೋರ್ ಟೆಂಪಲ್ ಅಂದರೆ ಸಮುದ್ರ ತೀರದಲ್ಲಿರುವ ದೇವಾಲಯ ಎಂದು ಅರ್ಥ. ಈ ದೇವಾಲಯವು ಪಲ್ಲವ ರಾಜರಿಂದ 8ನೇ ಶತಮಾನದಲ್ಲಿ ಗ್ರಾನೈಟ್ ಬ್ಲಾಕ್‌ಗಳಿಂದ ನಿರ್ಮಿಸಲಾಗಿದ್ದು, ಇದನ್ನು ದಕ್ಷಿಣ ಭಾರತದ ಅತ್ಯಂತ ಪ್ರಮುಖ ರಚನಾತ್ಮಕ ದೇವಾಲಯ ಎಂದು ಗುರುತಿಸಲಾಗಿದೆ. ಈ ದೇವಾಲಯದ ಶಿಲ್ಪಕಲೆಯನ್ನು ಕಣ್ತುಂಬಿಕೊಂಡ ನಂತರ ಕೃಷ್ಣನ ಬೆಣ್ಣೆ ಚೆಂಡು ಎಂದು ಹೆಸರಿಸಲಾಗುವ ದೊಡ್ಡ ಕಲ್ಲನ್ನು ನೋಡಲು ಹೊರಟೆವು. ಕಿರಿದಾದ ಅಡಿ ಉಳ್ಳ ಈ ದೊಡ್ಡ ಕಲ್ಲೊಂದು ಮಹಾಬಲಿಪುರಂನ ಗಣೇಶನ ರಥದ ಬಳಿ ಇದೆ. ಇದನ್ನು ಅಲ್ಲಿಂದ ಸರಿಸಲು ಪಲ್ಲವ ರಾಜರೂ, ಬ್ರಿಟೀಷರೂ ಆನೆಗಳಿಂದ ಎಳೆಸಿ ಪ್ರಯತ್ನ ಪಟ್ಟರೂ ಅದನ್ನು ಇಂಚಷ್ಟೂ ಕದಲಿಸಲಾಗಿಲ್ಲ. ಇದೊಂದು ವಿಸ್ಮಯವೇ ಸರಿ!!!

ಮುಂದಿನ ಭೇಟಿ ಪಂಚರಥಗಳಿಗೆ. ಇವು ಐದೂ ಏಕಶಿಲಾ ರಥಗಳಾಗಿದ್ದು, ಗ್ರಾನೈಟ್ ಕಲ್ಲಿನಿಂದ ಕೆತ್ತಲಾಗಿದೆ. ಇವು ದ್ರಾವಿಡ ಶೈಲಿಯಲ್ಲಿವೆ. ಇವುಗಳ ಕಾಲ 6 ರಿಂದ 7 ನೇ ಶತಮಾನವಾಗಿದ್ದು, ಪಲ್ಲವ ರಾಜರಾದ ಮಹೇಂದ್ರವರ್ಮ ಹಾಗೂ ನರಸಿಂಹವರ್ಮ ನಿರ್ಮಿಸಿದರೆಂದೂ ಇತಿಹಾಸ. ಇವುಗಳ ಸೊಬಗನ್ನು ನೋಡಿಯೇ ಅರಿಯಬೇಕು... ವರ್ಣಿಸಲಾಗುವುದಿಲ್ಲ. ಇದರ ನಂತರ ನಾವು ನೋಡಹೊರಟಿದ್ದು ಗಂಗಾವತರಣ ಶಿಲ್ಪವನ್ನು. ಇದಂತೂ ನನಗೆ ತುಂಬಾ ಇಷ್ಟವಾಯಿತು. ಪಾಶುಪತಾಸ್ತ್ರವನ್ನು ಪಡೆಯಲು ಅರ್ಜುನ ತಪಸ್ಸು ಮಾಡಿದ ಗಂಗಾವತರಣದ ಚಿತ್ರ ಇಲ್ಲಿ ಪ್ರಧಾನವಾಗಿದ್ದು, ಇದರ ಜೊತೆಗೆ ವಿವಿಧ ರೀತಿಯ, ವಿವಿಧ ಆಕಾರದ, ವಿವಿಧ ಕಥೆಗಳನ್ನು ಹೇಳುವ ಲೆಕ್ಕವಿಲ್ಲದಷ್ಟು ಕಣ್ಮನ ತಣಿಸುವಷ್ಟು ಶಿಲ್ಪಗಳು ಇವೆ. ಬಹುತೇಕ ಮಹಾಬಲಿಪುರಂ ಶಿಲ್ಪಗಳೆಲ್ಲಾ ರಥದ ಆಕಾರದಲ್ಲಿರುವುದು ವಿಶೇಷ. ಇದಲ್ಲದೇ ಗಣೇಶ ರಥ, ಲೈಟ್ ಹೌಸ್, ಸಿಂಹದ ಗುಹೆಗಳೂ ಇವೆ.



# ಪತಞ್ಜಲಿ ಯೋಗ ಸೂತ್ರ: ಸಮಾಧಿ ಪಾದ ಸೂತ್ರ ೧-೩

ಅನನ್ತ ಅಮ್ಬುಗ

**ಅಪ್ಪೊ ದೀಪೋ ಭವ - ನಿನಗೆ ನೀನೇ ಬೆಳಕಾಗು - ಭಗವನ್ ಬುದ್ಧ**

**ಯೋಗೇನ ಚಿತ್ತಸ್ಯ ಪದೇನ ವಚಾಮ್ ಮಲಮ್ ಶರೀರಸ್ಯ ಚ ವೈದ್ಯಕೇನ ಯೋಪಾಕರೋತ್ತಮ್ ಪ್ರವರಮ್ ಮುನೀನಾಮ್ ಪತಞ್ಜಲಿಂ ಪ್ರಾಞ್ಜಲಿರಾನತೋಸ್ಮಿ**

**ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ಆತ್ಮೈವ ಹ್ಯಾತ್ಮನೋ ಬನ್ಧುರಾತ್ಮೈವರಿಪುರಾತ್ಮನಹ - > ನಿನ್ನ ಉದ್ಧಾರ ನಿನ್ನಿನ್ದಲೇ ಆಗುತ್ತದೆ. ನಿನ್ನ ಪತನವೂ ನಿನ್ನಿನ್ದಲೇ ಆಗುತ್ತದೆ. ನೀನೇ ನಿನಗೆ ಬನ್ಧು/ಮಿತ್ರ ನೀನೇ ನಿನಗೆ ಶತ್ರು - ಭಗವಾನ್ ಕೃಷ್ಣ - ಭಗವದ್ಗೀತೆ ಧ್ಯಾನ ಯೋಗ ಶ್ಲೋಕ ೫**

**ಅತ್ತಾಹಿ ಅತ್ತನೋ ನಾಥೋ ಕೋ ಹಿ ನಾಥೋ ಪರೋಸಿಯಾ ಅತ್ತನಾವ ಸುದನ್ತೇನ ನಾಥಮ್ ಲಭತಿ ದುಲ್ಲಭಮ್ - > ನಿನಗೆ ನೀನೇ ಒಡೆಯ/ಮಿತ್ರ. ಹೊರಗಿನ ಒಡೆಯ/ಮಿತ್ರರು ಯಾರೂ ಇಲ್ಲ. ಚಿತ್ತ ಶುದ್ಧಿ ಇದ್ದಾಗ ಅದರನ್ಥಹಾ ಮಿತ್ರ/ಒಡೆಯನು ದುರ್ಲಭ - ಭಗವಾನ್ ಬುದ್ಧ - ಧಮ್ಮಪದ ಅತ್ತವಗ್ಗೋ (ಆತ್ಮದ ವರ್ಗ/ಯೋಗ) ಸೂತ್ರ ೧೬೦**

## ಮುನ್ನುಡಿ

ಆಧ್ಯಾತ್ಮ ಬಾನ್ಧವರಿಗೆಲ್ಲಾ ನಮಸ್ಕಾರ! ಯೋಗ! ಎಲ್ಲ ಸಙ್ಕೋಲೆಗಳಿನ್ದ ಬಿಡಿಸಿಕೊನ್ಡು ಸಜೀವವಾಗಿ ಮೋಕ್ಷವನ್ನು ಪಡೆಯಲು, ಮನುಕುಲಕ್ಕೆ ಭಾರತ ಕೊಟ್ಟಿರುವ ಒನ್ದು ಶ್ರೇಷ್ಠವಾದ ಅಭಿಹಾರ(offering). ಯೋಗದಲ್ಲಿ ಯಾವುದೇ ಮತದ ಸಙ್ಕೋಲೆಗಳಿಲ್ಲ; ಇಲ್ಲದಿರುವುದರಿನ್ದ ಆಸ್ತಿಕತೆ-ಅನಾಸ್ತಿಕತೆ-ನಾಸ್ತಿಕತೆಯ(theism-nontheism-atheism) ವಲಕಗಳ (poles) ವೈಪರಿತ್ಯಗಳ ಯಾವುದೇ ನೀವೃತ್ತದಲ್ಲಿರುವ (realm) ಸಾಧಕರಿಗೆ ಅಥವ ಪೂರ್ಣವಾಗಿ ಈ ನೀವೃತ್ತಗಳಿನ್ದ ಹೊರಗುಳಿದು ತಮ್ಮದೇ ಆದ ಸ್ವಯಮ್ ಪರಿಭಾಷಿತ ನೀವೃತ್ತದಲ್ಲಿರುವ ಸಾಧಕರಿಗೂ ಆವಾಹನವಾಗುವ (appeal)ಒನ್ದು ಸಾಧನಾ ಮಾರ್ಗ. ಇಲ್ಲಿ ಯಾರ ಅಪರೋಧವೂ(exclusion) ಇಲ್ಲ, ನಮ್ಮ ಗುರುಗಳು, ನಮ್ಮ ಪುಸ್ತಕ, ನಮ್ಮ ದೇವರು, ನಮ್ಮ ಮಾರ್ಗ, ನಮ್ಮ ಮಠ, ನಮ್ಮ ಪ್ರವಾದಿ, ನಮ್ಮ ಆಚರ್ಯರು ಮಾತ್ರ ಸರಿ (ಮಿಕ್ಕವರೆಲ್ಲಾ ತಪ್ಪು) ಮತ್ತು ಇವರಿನ್ದ/ಇವುಗಳಿನ್ದ ಮಾತ್ರ ಮೋಕ್ಷ ಸಾಧ್ಯವೆಮ್ಬ ಅನುಭವ ರಹಿತ ಮತ್ತು ವ್ಯಕ್ತಿ ಮತ್ತು ಮತಗಳ ವೈಪರಿತ್ಯ ಸ್ತುತಿಯ ಸಙ್ಕುಚಿತ ಅಭಿವ್ಯಾಪ್ತಿಯೂ(inclusion) ಇಲ್ಲ. ಯೋಗಃ ಕರ್ಮಸು ಕೌಶಲಮ್ ಎಮ್ಬ ಭಾವದಲ್ಲಿರುವ ಎಲ್ಲ ಸಾಧಕರಿಗೆ ಇಲ್ಲಿ ಮುಕ್ತವಾದ ಉರರೀಕರಣ(admission). ಈ ರಹಾಟದಲ್ಲಿ(spirit), ಯೋಗವು ಭಾರತದ, ಭಾರತೀಯತೆಯ ತೋರ್ಗನ್ನಡಿ. ಯೋಗವೇ ಭಾರತ!, ಭಾರತವೇ ಯೋಗ!

**ಅಥ ಸಮಾಧಿ ಪಾದ:**

**ಸೂತ್ರ ೧: ಅಥ ಯೋಗಾನುಶಾಸನಮ್. ಸೂತ್ರ ೨ : ಯೋಗಶ್ಚಿತ್ತವೃತ್ತಿನಿರೋಧ: ಸೂತ್ರ ೩: ತದಾ ದ್ರಷ್ಟು: ಸ್ವರೂಪೇವಸ್ಥಾನಮ್**

**ಅರ್ಥಗತಿ:**

ಸೂತ್ರ ೧: ಅಥ = ಈಗ, ಯೋಗಾನುಶಾಸನಮ್ - ಯೋಗವೆಮ್ಬ ಅನುಶಾಸನ

ಸೂತ್ರ ೨: ಯೋಗ: = ಯೋಗವೆನ್ದರೆ/ಯೋಗವು , ಚಿತ್ತವೃತ್ತಿ = ಮನಸ್ಸಿನ ವೃತ್ತಿಗಳನ್ನು/ಆಚರಣೆಗಳನ್ನು/ಉಪ್ತುರ್ಯಗಳನ್ನು/ಕರಣಗಳನ್ನು ನಿರೋಧ: = ನಿರೃತಿಗೋಳಿಸುವುದು (dissolution)

ಸೂತ್ರ ೩: ತದಾ = ಆವಾಗ, ಅನ್ದರೆ ನಿರೃತಿಗೋಳಿಸಿದಾಗ, ದ್ರಷ್ಟು: = ನೋಡುವವನು (seer) ಸ್ವರೂಪೇವಸ್ಥಾನಮ್ = ತನ್ನ (ನೈಜ) ಸ್ವರೂಪದಲ್ಲಿ ಸ್ವರೂಪದ ಅವಸ್ಥೆಯಲ್ಲಿರುತ್ತಾನೆ

## ವಿವತ್ತಿ

ಹಿನ್ದಿನ ಸಞ್ಚಿಕೆಯಲ್ಲಿ ಹೇಳಿದ ಹಾಗೆ, ಪತಞ್ಜಲಿ ಮಹರ್ಶಿಗಳು ತಮ್ಮ ಯೋಗ ಸೂತ್ರವನ್ನು ನಾಲ್ಕು ಪಾದಗಳನ್ನಾಗಿ , ತ್ರಿಭಗಗಳನ್ನಾಗಿ(quadrant) ವಿಙ್ಗಡಿಸಿದ್ದಾರೆ. ಇದರಲ್ಲಿ ಮೊದಲನೆಯ ಪಾದ, ಸಮಾಧಿ ಪಾದ. ಕುಡ್ಯವಾದ (curious) ಸಙ್ಗತಿಯೆನ್ದರೆ, ಸಮಾಧಿಯು, ಸಮಾಧಿ ಸ್ಥಿತಿಯು (ಸಮ + ಅಧಿ ಅನ್ದರೆ ಅಧಿ, "ಮೇಲಿನದಕ್ಕೆ" ನಮ್ಮನ್ನು ನಾವು ಸಮಗೊಳಿಸಿಕೋಳ್ಳುವುದು ಅಥವ ಮೇಲಿನದರ ಜೋತೆಗೆ ಯೋಗಗೊಳಿಸಿಕೋಳ್ಳುವುದು, ಒನ್ದಾಗುವುದು. ಸಮಾಧಿ ಪದದ ಹಲವಾರು ನಿರ್ವಚನಗಳಲ್ಲಿ, ಇದೂ ಒನ್ದು) ಯೋಗದ ಚರಮ ಗುರಿ, ಅದರ ಶೆಮುಷೀ(raison d'etre). ಆದರೂ ಸಮಾಧಿ ಪಾದವು ಮೂದಲೇ ಏಕೆ ಬರುತ್ತದೆ?! ಋಜುಲೇಖವಾಗಿ(linear)ನೋಡಿದಾಗ ಸಮಾಧಿಪಾದದ ಉಲ್ಲೇಖವು ಮತ್ತು ವಿಹಿತತ್ವವು (prescription) ಕೊನೆಯಲ್ಲಿ ಬರಬೇಕು! ಇಲ್ಲೇ ಇರುವುದು ಪರಮ ಜ್ಞಾನಿಗಳ ಮರ್ಮ! ನೇರವಾಗಿ ಮುಖ್ಯ ವಿಷಯಕ್ಕೆ ಬರುತ್ತಾರೆ. ಹನುಮನ್ತ ಸೀತೆಯನ್ನು ನೋಡಿ ಹಿನ್ತಿರುಗಿ ಬನ್ದಾಗ, ನೇರವಾಗಿ ವಿಷಯಕ್ಕೆ ಬನ್ದು ದೃಷ್ಟಾ ಅನ್ದರೆ ನೋಡಿದೆ ಎನ್ದನನ್ತೆ. ಸೀತೆಯನ್ನು ನೋಡಿದೆ ಎನ್ನಲ್ಲಿಲ್ಲ, ಸೀತೆಯು ದೃಷ್ಟಾರ್ಥ (obvious) ಆದುದರಿನ್ದ ಹೇಳುವ ಅನವಶ್ಯಕತೆಯನ್ನು ಜ್ಞಾನಿಯಾದ ಹನುಮನ್ತನು ಅರಿತಿದ್ದನು - ಸೀತೆಯೆಮ್ಬ ಪದದಿನ್ದ ಪ್ರಾರಮ್ಭ ಮಾಡಿದ್ದರೆ, ಕ್ಷಣಕಾಲಕ್ಕಾದರೂ ಕೇಳಿದವರಿಗೆ ಸೀತೆಯ ಬಗ್ಗೆ ನಿಹ್ನವಸೂಚಕ ಯೋಚನೆಗಳು ಬರಬಹುದಾಗಿತ್ತು. ಪತಞ್ಜಲಿಗಳು ಇಲ್ಲಿ ಮೊದಲೇ ಸಮಾಧಿಯನ್ದರೆ ಏನೆಮ್ಬುದನ್ನು ತಿಳಿಸಿಕೊಡುತ್ತಾ ಮುನ್ದಿನ ಪಾದಗಳಲ್ಲಿ ಬರುವ ದಿಷ್ಟಿಗಳನ್ನು(priscription) ಹೇಗೆ ಮತ್ತು ಏಕೆ ಅನುಜಿಗಾತಿಸಬೇಕು (follow)ಎನ್ದು ಅರ್ಥಮಾಡಿಕೊಳ್ಳಲು ನಮಗೆ ಸುಲಭ ಮಾಡಿಕೋಟ್ಟಿದ್ದಾರೆ. - ಪತಞ್ಜಲಿ ಮಹರ್ಷಿಗಳು ವ್ಯಾಖ್ಯಾನಿಸಿರುವ ಹಲವು ರೀತಿಯ ಸಮಾಧಿಗಳನ್ನು

ಮುನ್ದೆ ಸಮೀಚೀನವಾಗಿ ನೋಡೋಣ. ಬುದ್ಧ ಭಗವಾನನು ಸಮಾಧಿ ಸುತ್ತದಲ್ಲಿ, ಸಮಾಧಿಯ ಸ್ಥಿತಿಯನ್ನು ವಿವರಿಸುತ್ತಾ ಸಮಾಧಿ ಸ್ಥೀತಿಯಲ್ಲಿ ೫ ರೀತಿಯ ಪ್ರಬೋಧತೆಗಳು ನಮ್ಮಲ್ಲಿ ಪ್ರಸವಗೊಳ್ಳುತ್ತದೆನ್ದು ಈರೀತಿ ಹೇಳುತ್ತಾನೆ. ಸಮಾಧಿಮ್ ಭಿಕ್ಖವೇ ಭಾವೇಥ ಅಪ್ಪಮಾಣಮ್ ನಿಪಕಾ ಪತಿಸ್ಸತಾ. ಸಮಾಧಿಮ್ ಭಿಕ್ಖವೇ ಭಾವಯತಂ ಅಪ್ಪಮಾಣಮ್ ನಿಪಕಾನಂ ಪತಿಸ್ಸತಾನಮ್ ಪಞ್ಚ ಞಾಣಾನಿ ಪಚ್ಚತ್ತಞ್ಞೇವ ಉಪಜ್ಜನ್ತಿ. ಕತಮಾನಿ ಪಞ್ಚ? - ಯಾವ ೫ ಜ್ಞಾನಗಳು? ಈ ೫ ದರಲ್ಲಿ, ನಾಲ್ಕನೆಯದನ್ನು ವಿವರಿಸುತ್ತಾ ಹೀಗೆನ್ನುತ್ತಾನೆ. ಅಯಮ್ ಸಮಾಧಿ ಸನ್ತೋ ಪಣಿತೋ ಪತಿಪ್ಪಸ್ಸದ್ಧ ಲದ್ಧೋ ಏಕೋಧಿಭಾವ ಅಧಿಗತೋ ನ ಸಙ್ಖಾರ ನಿಗ್ಗೇಹವಾರಿತ ಗತೋತಿ ಪಚ್ಚತ್ತಞ್ಞೇವ ಞಾಣನಾಮ್ ಉಪಜ್ಜತಿ. ಮುಖ್ಯವಾಗಿ ಗಮನಿಸಬೇಕಾದ ಅಂಶವೆನ್ದರೆ, "ಏಕೋಧಿಭಾವ ಅಧಿಗತೋ" ಅನ್ದರೆ ಒನ್ದಾಗುವಿಕೆಯನ್ನು (ಯೋಗವನ್ನು) ಅಧಿಗತಿಸುವುದು, ಗಳಿಸಿಕೊಳ್ಳುವುದು ಅದರಲ್ಲೂ ನೈಸರ್ಗಿಕವಾಗಿ ಯಾವುದೇ ಬಲವನ್ತವಾದ ನಿಗ್ರಹಗಳಿಲ್ಲದೇ - ಸಙ್ಖಾರ ನಿಗ್ಗೇಹವಾರಿತ ಗತೋತಿ. ಇದನ್ನೇ ಪತಞ್ಜಲಿಗಳು ಮುನ್ದೆ ಸಾಧನಾ ಪಾದದಲ್ಲಿ ಪ್ರಯತ್ನಶೈಥಿಲ್ಯಾನನ್ತಸಮಾಪತ್ತಿಭ್ಯಾಮ್ ಎನ್ದು ಹೇಳುತ್ತಾ ಪ್ರಯತ್ನಶೈಥಿಲ್ಯಾ ಅನ್ದರೆ relaxed effort ನಿನ್ದ ಅನನ್ತದ ಅನುಭವವು ಸಿಗುವುದೆನ್ದು ಹೀಳುತ್ತಾರೆ.

**ಸೂತ್ರ ೧: ಅಥ ಯೋಗಾನುಶಾಸನಮ್**

**ಅಥ:** - ಯೋಗದ ಕೊನೆಯ ಅಙ್ಗ/ಸ್ಥಿತಿ ಸಮಾದಿಯನ್ತಹ ವಿಟಙ್ಕದ (pinnacle) ಅನುಭವವಾರರೆ, ಯೋಗ ಸೂತ್ರದ ಮೋದಲ ಶಬ್ದವಾದ "ಅಥ"ದ ಅರ್ಥವು ಸಮಾಧಿಯಷ್ಟೇ ವಿಟಙ್ಕಪ್ರಾಯವಾಗಿದೆ. ಏಷ್ಟೆನ್ದರೆ, ಬರೇ "ಅಥ"ದ ಅರ್ಥವನ್ನು ಧಾರಣೆ ಮಾಡಿ, ಅದರ ಮೇಲೆ ಧ್ಯಾನ ಮಾಡಿದರೆ ಸಾಕು, ಸಮಾಧಿಯ ಸ್ಥಿತಿಯನ್ನು ತಲುಪಬಹುದು/ಅನುಭವಿಸಬಹುದು. ಹಾಗಾದರೆ, ಬಹುತೇಕ ಭಾರತೀಯ ದರ್ಶನಗಳಲ್ಲಿ ಅನುಷ್ಠಾನದ ಪ್ರಾರಮ್ಭದಲ್ಲಿ ಬರುವ ಈ "ಅಥ"ದ ಅರ್ಥವೇನು?! ಏಕೆ ಇದು ಅನುಷ್ಠಾನದ ಪ್ರಾರಮ್ಭದಲ್ಲಿ ಬರುತ್ತದೆ?! ಈ ಕೆಳಗಿನ



ಒನ್ದು ಶ್ಲೋಕವನ್ನು ನೋಡೋಣ. **ಓಂಕಾರಶ್ಚಾಥಶಬ್ದಶ್ಚ ದ್ವಾವೇತೌ ಬ್ರಹ್ಮಣಃ ಪುರಾ. ಕಣ್ಠಮ್ ಭಿತ್ವಾ ವಿನಿರ್ಯಾತೌ ತಸ್ಮಾನ್ಮಾಙ್ಗಲಿಕಾವುಭೌ.** ಅರ್ಥಾತ್, ಸೃಷ್ಟಿಯ ಆದಿಯಲ್ಲಿ ಓಂಕಾರ ಮತ್ತು ಅಥವೆಮ್ಬ ಎರೆಡು ಶಬ್ದಗಳು, ಬ್ರಹ್ಮನ ಕಣ್ಠದಿನ್ದ ಬನ್ದವು. ಇಲ್ಲಿ "ಸೃಷ್ಟಿಯ ಆದಿ" ಮತ್ತು "ಬ್ರಹ್ಮನ ಕಣ್ಠ" ವನ್ನು, ವಿವಕ್ಷಿತವಾಗಿ (literal) ತೆಗೆದುಕೊಳ್ಳಬಾರದು. ನಿಜವಾಗಿಯೂ "ದೇವರಿಗೆ" throat ಇದೆ ಎನ್ದು ಒಪ್ಪುವುದಾದರೆ, ಅವನಿಗೆ sore-throat ಬರುವ ಸಾಧ್ಯತೆಯನ್ನೂ ಒಪ್ಪಬೇಕಾಗುತ್ತದೆ!! ಪ್ರಾಯಃ ತಥಾ (by and large) ನಮ್ಮೆಲ್ಲರಿಗೂ ಓಂಕಾರದ ಅರ್ಥ ಸ್ವಲ್ಪವಾದರೂ ಗೊತ್ತಿರುವುದರಿನ್ದ, ಅಥದ ಅರ್ಥಕ್ಕೆ ಗಮನ ಕೊಡೋಣ. ಅಥಕ್ಕೆ ಹಲವಾರು ಅರ್ಥಗಳಿದ್ದರೂ, ಅವೆಲ್ಲವೂ ಅದರ ಮೂಲ ಅರ್ಥದ ವ್ಯುತ್ಪಾದದಿನ್ದಾಗಿವೆ (derived). ಅಥದ ಮೂಲ ಅರ್ಥ "ಈಗ", "ಈ ಕ್ಷಣ" (moment or this moment), ಇನ್ನೂ ಆಳದಲ್ಲಿ ಹೇಳುವುದಾದರೆ, "ಅಕ್ಷಮಾತ್ರ". ಅಕ್ಷಮಾತ್ರದಲ್ಲಿ, ಅಕ್ಷಕ್ಕೆ ಆತ್ಮವೆಮ್ಬ ಅರ್ಥವೂ ಇದೆ - ಯಾವುದು ಕ್ಷೀಣಿಸುವುದಿಲ್ಲವೋ ಅದು. ಯಾವ ಕ್ಷಣದಲ್ಲಿ ಮಾತ್ರ ನಮ್ಮ ಆತ್ಮದ ಬಗ್ಗೆ ನಮಗೆ ಪರಿಪೂರ್ಣ ಜ್ಞಾನ ಮತ್ತು ಅರಿವು ಸಾಧ್ಯವೆನ್ದರೆ, ಅದು ಈ ಕ್ಷಣದಲ್ಲಿ ಮಾತ್ರ! ಕಳೆದು ಹೋದ ಹಿನ್ದಿನ ಕ್ಷಣದಲ್ಲಿ ಅಲ್ಲ, ಆಗಮಿಸದಿರುವ ಮುನ್ದಿನ ಕ್ಷಣದಲ್ಲೂ ಅಲ್ಲ- ಈ ಕ್ಷಣವೇ ಸತ್ಯ, ಈ ಕ್ಷಣವೇ ತಥ್ಯ, ಈ ಕ್ಷಣವೇ ಎಲ್ಲ ಶಕ್ಯತ್ವಕ್ಕೆ (possibility)ಋತ ಮತ್ತು ಅಙ್ಕುರ. ಯಾವ ಸಾಕ್ಷಾತ್ಕಾರವಾಗಬೇಕಾದರೂ, ಈ ಕ್ಷಣದಲ್ಲೇ ಆಗಬೇಕು. ಅಲ್ಲಮ ಪ್ರಭುಗಳು ಹೇಳುವಹಗೆ ಹಿನ್ದಣ ಅನನ್ತವನು ಮುನ್ದಣ ಅನನ್ತವನೂ ಒನ್ದುದಿನ ಒಳಗೊಣ್ಡಿತ್ತು ನೋಡ! ಈ ಕ್ಷಣದಲ್ಲಿ ಎಲ್ಲ ಅನನ್ತತೆಯೂ ಸಮ್ಭವಗಳ ಎಲ್ಲ ಅನನ್ತತೆಯು ಇದೆ. ಆದ್ದರಿನ್ದ ಅಥವು, ಅನ್ದರೆ ಈ ಕ್ಷಣವು ಓಂಕಾರದಷ್ಟೇ ಪವಿತ್ರ. ಈ ಕ್ಷಣದ ಅನುಭವವೇ ಪರಮಾನುಭವ. ಯೋಗದ ಪ್ರಾಣಾಯಾಮ, ಬುದ್ಧನ ಆನಾಪಾನಸ್ಸತಿ ಮತ್ತು ಸತಿಪತ್ತಾನ ಸುತ್ತಗಳು ಪ್ರಾಣ ಶಕ್ತಿಯನ್ನು ಹೂರ್ಣಿಗೊಳಿಸುವುದರ ಮೂಲಕ ಮನಸ್ಸನ್ನು "ಈ ಕಷಣಕ್ಕೆ" ತರುವ ಕಾರ್ಯಪ್ರಣಾಲಿಯನ್ನು ಕೊಡುತ್ತವೆ. ಅಥ ಎನ್ದು ಹೇಳುವುದರ ಮೂಲಕ, ಪತಞ್ಜಲಿಗಳು ನಮ್ಮನ್ನು ಈ ಕ್ಷಣಕ್ಕೆ ಬರುವನ್ತೆ ಸೂಚಿಸುತ್ತಿದ್ದಾರೆ? ಕೊನ್ದೊಯ್ಯುತ್ತಿದ್ದಾರೆ.

**ಯೋಗಾನುಶಾಸನಮ್(ಯೋಗ ಅನು ಶಾಸನಮ್):** ಯೋಗದ ಅರ್ಥವನ್ನು ಉಪರೋತ್ತರದಲ್ಲಿ ನೋಡುವುದರಿನ್ದ, ಅನು ಶಾಸನವನ್ನು ನೋಡೋಣ. ಅನುವೆಮ್ಬ ಶಬ್ದಕ್ಕೆ ಹಲವಾರು ಅರ್ಥಗಳಿದ್ದು, ಈ ಪ್ರಸಙ್ಗದಲ್ಲಿ ಅದಕ್ಕೆ ಪ್ರತೀಚೀನವೆಮ್ಬ(subsequent) ಅರ್ಥವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅನ್ದರೆ ಹಿನ್ದೆ ಇದ್ದದ್ದು ಪುನರಾವರ್ತನೆಯಾಗಿರುವುದು ಎನ್ದು. ಶಾಸ್ ಎಮ್ಬ ಮೂಲದಿನ್ದ ಬನ್ದ ಶಾಸನವೆನ್ದರೆ, ವಿದ್ಯೆಯನ್ನು, ಜ್ಞಾನವನ್ನು ಕೊಡುವುದು ಎನ್ದಾಗುತ್ತದೆ. ಆದ್ದರಿನ್ದ ಯೋಗಾನುಶಾಸನಮ್ ಎನ್ದು ಹೇಳುವಾಗ ಪತಞ್ಜಲಿ ಮಹರ್ಷಿಗಳು, ಯೋಗ ವಿದ್ಯೆಯ ಅವ್ಯಾಹತ ಪರಮ್ಪರೆಯನ್ನು ಸೂಚಿಸುತ್ತಾರೆ. ಇದು ನಿಜವೂ ಹೌದು. ಪತಞ್ಜಲಿ ಮಹರ್ಷಿಗಳು ಸೂತ್ರಕಾರರೇ ಹುರತು, ಆವಿಶ್ಕಾರರಲ್ಲ. ತೀರ್ಥಙ್ಕರರಾದ ಋಷಭರಿನ್ದ ಹಿಡಿದು(ಇವರು ರಾಮನ ಪೂರ್ವಿಕರಾದುದರಿನ್ದ ಇವರಿನ್ದ ಪ್ರಾರಮ್ಭ ಮಾಡುತ್ತಿದ್ದೇನೆ), ರಾಮ-ವಶಿಷ್ಠರ ಯೋಗ-ವಶಿಷ್ಠವನ್ನೊಳಗೊನ್ದು, ಭಗವಾನ್ ಕೃಷ್ಣನ ಅನಾಸಕ್ತಯೋಗದಿನ್ದ ಪ್ರಪೂರಯಗೊನ್ದು(enriched) ಬುದ್ಧ-ಮಹಾವೀರರರಿನ್ದ ಪೋಷತಿಗೊನ್ದು ತದನನ್ತರ ಭಾರತದಲ್ಲಿ ಸನಾತನ ಧರ್ಮದ (ಸನಾತನ ಧರ್ಮವೆನ್ದರೆ "ಹಿನ್ದು", "Hindu" ಅಲ್ಲ ಮತ್ತು ಬರೇ ವೇದಗಳನ್ನು "ನಮ್ಬುವವರು" ಮಾತ್ರವಲ್ಲ. ಭಾರತದಲ್ಲಿ ಹುಟ್ಟಿದ ಎಲ್ಲ ಮತ ಪನ್ಥಗಳೂ ಸನಾತನ ಧರ್ಮದ ಅಙ್ಗವೇ) ಹೊಕ್ಕಳು ಬಳ್ಳಿಯಿನ್ದ ಹುಟ್ಟಿಬೆಳೆದ ಎಲ್ಲ ಮತ ಪನ್ಥಗಳೂ ಯೋಗದ ಪ್ರಭಾಷೆಯನ್ನು (doctrine) ತಮ್ಮ ಪ್ರಭಾಷದಲ್ಲಿ ಅಳವಡಿಸಿಕೋನ್ಡಿವೆ ಅಥವ ಯೋಗದ ಸಿದ್ಧಾನ್ತಕ್ಕೆ ಅಂಶದತ್ತ(contribute) ಮಾಡಿವೆ. ಅಥ ಯೋಗಾನುಶಾಸನಮ್ ಎನ್ದು ಹೇಳುತ್ತಾ ಮಹರ್ಶಿಗಳು, ಯೋಗಮಾರ್ಗವನ್ನು

ತಿಳಿದುಕೊಳ್ಳಲು, ಈ ಸೂತ್ರದಲ್ಲಿ ನಮ್ಮ ಮನಸ್ಸನ್ನು ಈ ಕ್ಷಣದ ದುರ್ಧರವಾದ ಪರಿನಿಸ್ಪನ್ನತ್ವಕ್ಕೆ (inevitable reality) ಕರೆದೊಯ್ದು ಯೋಗದ ಉಕ್ತಪ್ರತ್ಯುಕ್ತವನ್ನು(discourse) ಪ್ರಾರಮ್ಭಿಸುತ್ತಾರೆ

**ಸೂತ್ರ ೨ :ಯೋಗಶ್ಚಿತ್ತವೃತ್ತಿನಿರೋಧ:** ಈ ಮೊದಲೇ ಯೋಗವೆನ್ದರೆ, ಚಿತ್ತದ/ಮನಸ್ಸಿನ ವೃತ್ತಿಗಳನ್ನು ಅಥವ ಆಚರಣೆಗಳನ್ನು(activities) ನಿರೃತಿಗೋಳಿಸುವುದು ಎನ್ದು ಹೇಳಿದ್ದೆವು. ಹಾಗಾದರೆ, ಮನಸ್ಸಿನ ಆಚರಣೆಗಳನ್ನೆಲ್ಲಾ ನಿಲ್ಲಿಸಿಬಿಟ್ಟರೆ ಯೋಗ ಸಿದ್ಧಿಯಾಗಿಬಿಡುತ್ತದೆಯೇ?! ಇದಕ್ಕೆ ಉತ್ತರ ಮತ್ತು ಪ್ರಾಪಣವನ್ನು(explanation) ಸ್ವಾಮಿ ವಿವೇಕಾನನ್ದರು ತಮ್ಮ ರಾಜ ಯೋಗದ ಕೃತಿಯಲ್ಲಿ ಉಪಯೋಗಿಸಿರುವ ಕೋಳದ ಒನ್ದು ಉಪಮೆಯಿನ್ದ ನೋಡೋಣ. ಯವುದೇ ಕೊಳದಲ್ಲಿ ಮೂರು ರಸ್ತಗಳಿರುತ್ತವೆ - ಕೊಳದ ತಳ, ನೀರಿನ ಭಾಗ ಮತ್ತು ನೀರಿನ ಅಲೆಗಳು(ಮತ್ತು ಅದರಿನ್ದ ಉದ್ಗೀರ್ಣಗೊನ್ದ ನಿವರಣಗಳು - disturbances). ಕೊಳದ ತಳವೇ ನಮ್ಮ ನಿಜ ಸ್ವರೂಪ, ನೀರಿನ ಭಾಗವು ನಮ್ಮ ಚಿತ್ತ (ಮನಸ್ಸು, ಬುದ್ಧಿ ಅಹಙ್ಕಾರ ), ಅಲೆಗಳು ಮನಸ್ಸಿನ ವೃತ್ತಿಗಳು ಅಥವ ಆಚರಣೆಗಳು. ಅಲೆಗಳ ಮತ್ತು ಅದರ ವೈಪರಿತ್ಯಗಳಿನ್ದ ಉನ್ಟಾಗುವ ನಿವರಣಗಳು ಹೇಗೆ ಕೊಳದ ತಳವನ್ನು ಇದ್ದರೂ ಅನುಭವಕ್ಕೆ ಇಲ್ಲದನ್ತೆ ಅಲೊಕನೀಯವನ್ನಾಗಿ (invisible) ಮಾಡುತ್ತದೆಯೋ ಹಾಗೆಯೇ ಚಿತ್ತದ ವೃತ್ತಿಗಳು ನಮಗೆ ನಮ್ಮ ಸ್ವಸ್ವರೂಪದಿನ್ದ ದೂರವಿಡುತ್ತದೆ. ಹೇಗೆ ಕೊಳದಲ್ಲಿನ ನೀರವ ನಿಷ್ಪನ್ದತೆಯು ತಳವನ್ನು ಕಾಣುವಹಗೆ ಮಾಡುತ್ತದೆಯೋ ಹಾಗೆಯೇ ವೃತ್ತಿಗಳ ನಿರೋಧವು ನಮಗೆ ನಮ್ಮ ಸ್ವಸ್ವರೂಪವನ್ನು ಗೋಚರಗೊಳಿಸುತ್ತದೆ. ಈ ಸ್ವಸ್ವರೂಪವನ್ನು ಸಾಙ್ಖ್ಯ-ಯೋಗ ದರ್ಶನವು ಪುರುಷನೆನ್ದು (ಗಣ್ಡಸೆನ್ದು ಅರ್ಥೈಸಬಾರದು) ಕರೆಯೊತ್ತದೆ ಮತ್ತು ಮೇಲೆ ಹೇಳಿದ ಚಿತ್ತ ಮತ್ತು ಅದರ ವೃತ್ತಿಗಳನ್ನು ಪ್ರಕೃತಿಯೆನ್ದು ಕರೆಯುತ್ತದೆ. ಇದರ ಮತ್ತೊನ್ದು ಅರ್ಥ, ಪ್ರಕೃತಿಯಿನ್ದ ಪುರುಷನ ವಿಯೋಗವೇ ಯೋಗ; ಇದು ಏಕೆ, ಹೇಗೆನ್ದು ಮುನ್ದೆ ನೋಡೋಣ. ಇಲ್ಲಿ ಗಮನಿಸಬೇಕಾದ ಅಂಶವೆನ್ದರೆ, ಯೋಗ ಸೂತ್ರದ ಈ ಸೂತ್ರವು, ಬುದ್ಧನ ಸನ್ನ ವೇದಯಿತ ನಿರೋಧ ಮತ್ತು ಬೌದ್ಧ ಮತದ ಯೋಗಚಾರ ಪರಮ್ಪರೆಯ ಪ್ರವರ್ತಕನಾದ ವಸುಬನ್ಧುವಿನ ಚಿತ್ತ-ಚೈತ್ತ ನಿರೋಧ ತತ್ವಗಳು ಒನ್ದೇ ಆಗಿರುತ್ತದೆ - ಚಿತ್ತದ ವೃತ್ತಿಗಳು/ಆಚರಣೆಗಳು ಯಾವುವು ಎನ್ದು ಮುನ್ದೆ ಅದರದೇ ಆದ ಸೂತ್ರದಲ್ಲಿ ನೋಡೋಣ. ಇಲ್ಲಿ ವೃತ್ತಿಗಳನ್ನು ನಿಲ್ಲಿಸುವುದರಿನ್ದ ಎಮ್ಬ ಪದ ಪ್ರಯೋಗವಾಗಿದೆ; "ನಿಲ್ಲಿಸುವುದು" ಅಥವ ನಿರೋಧ ಪದದ ಅರ್ಥವನ್ನು ಯೋಗ ಸೂತ್ರ ಮತ್ತು ಬುದ್ಧನ ತತ್ವಗಳ ನೆಲೆಯಲ್ಲಿ ನೋಡಬೇಕು - ಇಲ್ಲದ್ದಿದ್ದರೆ, ಯೋಗದ ಅರ್ಥವೇ ಸಾಚೀಕೃತಗೊಳ್ಳುತ್ತದೆ (distorted). ಸಮಾನ್ಯವಾಗಿ ನಿರೋಧ ಪದವನ್ನು, ದಮನ ಅಥವ ನಿಷೇಧ (control) ಅನ್ನುವ ಅರ್ಥದಲ್ಲಿ ಬಳಸುತ್ತೇವೆ. ಆದರೆ, ಯೋಗ ಮತ್ತು ಬುದ್ಧನ ದೃಷ್ಟಿಯಲ್ಲಿ ನಿರೋಧ ಪದವನ್ನು ಲಯ ಅನ್ದರೆ ಮೂಲಕ್ಕೆ ಪುನರಾಯನಗೊಳ್ಳುವುದು ಎಮ್ಬ ಅರ್ಥದಲ್ಲಿ (return to the source) ನೋಡಬೇಕು. ಏಕೆನ್ದರೆ, ದಮನವೆಮ್ಬ ಅರ್ಥದಲ್ಲಿ ನೋಡಿದಾಗ , ದಮನ ಮಾಡುವ ಪ್ರತಿಯೊನ್ದು ಪ್ರಯತ್ನವೂ ಹೊಸ ವೃತ್ತಿಗಳ ಪ್ರಸವಕ್ಕೆ ಕಾರಣವಾಗುತ್ತದೆ. ಕೊಳದ ಉಪಮೆಯಲ್ಲಿ ನೋಡಿದಾಗ ಅಲೆಗಳನ್ನು ತಡೆಯುವ ಪ್ರಯತ್ನವು ಹೊಸ ಅಲೆಗಳನ್ನು ಹೊರಡಿಸುವ ಹಾಗೆ. ಕೊಳದಲ್ಲಿನ ಅಲೆಗಳು ಹೋಗಬೇಕಾದರೆ, ಅದರ ಲೋಲತೆಯ (transient)ಪುಗದಿನ್ದ (nature)ಹೊರಬನ್ದು ನೀರಿನಲ್ಲಿ ಅನ್ದರೆ ಅದರ ವಿರೋಹದಲ್ಲಿ(source) ನಿಮಜ್ಜಗೊಳ್ಳುವುದು (merge)

**ಸೂತ್ರ ೩: ತದಾ ದ್ರಷ್ಟು: ಸ್ವರೂಪೇವಸ್ಥಾನಮ್:** ಮನಸಿನ ಆಚರಣೆಗಳನ್ನು ನಿರೃತಿಗೊಳಿಸುವುದು ಯೋಗವೆನ್ದು ಮೇಲಿನ ಸೂತ್ರದ ಪರಿವೇದನದಲ್ಲಿ(discussion) ನೋಡಿದೆವು. ಹಾಗದರೆ, ಯೋಗದ ಗುರಿ ಏನು? ಯೋಗಸಿದ್ಧಿಯಾದಗ ಏನಾಗುತ್ತದೆ? ಈ ಪ್ರಶ್ನೆಯ ಉತ್ತರವನ್ನು ಮೇಲಿನ ಸೂತ್ರದಲ್ಲಿ ಕೊಳದ ಉಪಮೆಯನ್ನು ಚರ್ಚಿಸುವಾಗ ನೋಡಿದ್ದೇವಾದರೂ, ಇಲ್ಲಿ ಇನ್ನೂ ಭಾಗಕವಾಗಿ (detail)ನೋಡೋಣ. ಯೋಗದ ಗುರಿಯನ್ನು ನೋಡುವಾಗ, ಯೋಗ ಸೂತ್ರದ ಕೊನೆಯ ಸೂತ್ರವನ್ನು ಅಗ್ರಿಮದಲ್ಲಿಟ್ಟುಕೊಳ್ಳುವುದು (in front)ಯೊಗದ ಗುರಿಯನ್ನು ಅರ್ಥಮಾಡಿಕೊಣ್ಡರೆ ವಿಶದವಾಗುತ್ತದೆ(easy) - ಪುರುಷಾರ್ಥ ಶೂನ್ಯಾನಾಂ ಗುಣಾನಾಂ ಪ್ರತಿಪ್ರಸವ: ಕೈವಲ್ಯಂ ಸ್ವರೂಪಪ್ರತಿಷ್ಠಾ ವಾ ಚಿತಿಶಕ್ತಿರಿತಿ - ಈ ಸೂತ್ರವನ್ನು ಮುನ್ದೆ ವಿಸ್ತೃತವಾಗಿ ನೋಡುವುದರಿನ್ದ ಇಲ್ಲಿ ಇದನ್ನು, ಈ ಮೇಲಿನ ಸೂತ್ರವನ್ನು ಅರ್ಥಮಾಡಿಕೊಳ್ಳಲು ಒನ್ದು ಜಾಲಕವನ್ನಾಗಿ (window) ಮಾತ್ರ ಉಪಯೋಗಿಸೋಣ. ತುರಾಯಣವಾಗಿ (cursory)ನೋಡಿದಾಗ, ಯೋಗ ಸೂತ್ರದ ಕೊನೆಯ ಸೂತ್ರದ ಅರ್ಥವು ಹೀಗಿದೆ - ಪುರುಷನ ಅರ್ಥವು ಅನ್ದರೆ ಗುರಿಯು, ಗುಣಗಳು (ಸತ್ವ, ರಜಸ್ ಮತ್ತು ತಮಸ್ಸೆಮ್ಬ ಗುಣಗಳಿನ್ದಲೇ ಮನಸ್ಸಿನ ಆಚರಣೆಗಳಿಗೆ ಕಾರಣ. ಆದ್ದರಿನ್ದ, ಆಚರಣೆಗಳು ನಿಲ್ಲಬೇಕಾದರೆ, ಗುಣಗಳ ಕಡೆ ಗಮನ ಕೊಡಬೇಕು) ತಮ್ಮ ಮೂಲಕ್ಕೆ ಹಿನ್ದಿರುಗುವುದರ ಮೂಲಕ (ಕೊಳದ ಅಲೆಗಳು ನಿರಿಗೆ ಪುನರಾಯನಗೊಳ್ಳುವುದರ ಮೂಲಕ) ಇಲ್ಲಗೊನ್ದು (ಪುರುಷನ ಮಟ್ಟಕ್ಕೆ ಇಲ್ಲವಾಗಿ, ಶೂನ್ಯವಾಗಿ), ಇಲ್ಲವಾಗುವುದರ ಮೂಲಕ ಪುರುಷನು ಗುಣಗಳಿನ್ದ ಕೈವಲ್ಯಗೊನ್ದು ಅನ್ದರೆ, ಗುಣಗಳಿನ್ದ ಅನ್ತರ್ಹಿತಗೊಳ್ಳುವುದರಿನ್ದ(separated) ಚಿತಿ ಶಕ್ತಿಯು (ಪುರುಷನು) ತನ್ನ ಸ್ವಸ್ವರೂಪದಲ್ಲಿ (its own state or natural state)ನೆಲೆಗುಳ್ಳುತ್ತದೆ. ಸ್ವಸ್ವರೂಪದಲ್ಲಿ ನೆಲೆಗೊಳ್ಳುವುದೇ ಗುರಿ. ಯೋಗದ ಗುರಿಯನ್ನು ಮತ್ತು ಈ ಸೂತ್ರವನ್ನು (ಸೂತ್ರ ಮೂರನ್ನು) ಮುನ್ದುವರೆಸುವ ಮೊದಲು, ಇಲ್ಲಿ ಉಪಯೋಗಿಸಿರುವ ಕೆಲವು ಪದಗಳ ಲಿಙ್ಗದ ಬಗ್ಗೆ ಎರೆಡು ಮಾತನ್ನು ಹೇಳುವುದು ಸೂಕ್ತ. ಇಲ್ಲಿ ದ್ರಷ್ಟು (ಸೂತ್ರ ಮೂರರಲ್ಲಿ) ಪುರುಷ ಮತ್ತು ಚಿತಿಶಕ್ತಿ(ಯೋಗ ಸೂತ್ರದ ಕೋನೆಯ ಸೂತ್ರದಲ್ಲಿ) ಎಮ್ಬ ಸಮಾನಾರ್ಥ ಅಥವ ಪರ್ಯಾಯ ಪದಗಳನ್ನು ಉಪಯೋಗಿಸಲಾಗಿದೆ. ಇವುಗಳು, ಪರ್ಯಾಯ ಪದಗಳಾದರೂ, ಇವುಗಳ ಲಿಙ್ಗವು ಒನ್ದೇ ಅಲ್ಲ. ದ್ರಷ್ಟು(seer) ಮತ್ತು ಪುರುಷ ಪದಗಳು ಪುಲ್ಲಿಙ್ಗವಾದರೆ, ಚಿತಿಶಕ್ತಿ (ಚಿತಿ ಮತ್ತು ಶಕ್ತಿ) ಸ್ತ್ರೀಲಿಙ್ಗ ಪದ(ಹಾಗೆಯೇ ಸಾಙ್ಖ್ಯ-ಯೋಗದಲ್ಲಿ ಬರುವ ಪ್ರಕೃತಿ ಪದವು ಸ್ತ್ರೀಲಿಙ್ಗ ಪದ). ಒನ್ದೇ ಅರ್ಥವನ್ನು ಹೇಳುವ ಉದ್ದೇಶವಿರುವ ಎರೆಡು ಸೂತ್ರಗಳಲ್ಲಿ ಒನ್ದೇ ಅರ್ಥ ಬರುವ ಆದರೆ ಲಿಙ್ಗದಲ್ಲಿ ವ್ಯತ್ಯಾಸವಿರುವ ಪದಗಳನ್ನು ಉಪಯೋಗಿಸುವ ಉದ್ದೇಶ ಈ ಪದಗಳನ್ನು ತತ್ವದ ನೆಲೆಯಲ್ಲಿ ಯಾವುದೇ ಲಿಙ್ಗಕ್ಕೆ ಸೀಮಿತಗೊಳಿಸಬಾರದು ಎನ್ದು. ಇಲ್ಲಿ ಲಿಙ್ಗದ ಬಳಕೆಯು ನಿವೇದನೆಯ ಅನುಕೂಲಕ್ಕೆ ಮಾತ್ರವೆಮ್ಬುದನ್ನು ಮರೆಯಬಾರದು.

ನಮ್ಮ ದಿನನಿತ್ಯ ಜೀವನದಲ್ಲಿ ನಮ್ಮ ಮತ್ತೊಬ್ಬರ ಜೊತೆಯಲ್ಲಿ ನಡೆಸುವ ವ್ಯವಹಾರ, ಒಡನಟಗಳಲ್ಲಿ, ಒಬ್ಬ ವ್ಯಕ್ತಿಯನ್ನು ಆತನ ಮನಸ್ಥಿತಿ ಮತ್ತು ಅದರ ಕಾರಣದಿನ್ದ ಹೊರಹೊಮ್ಮುವ ಆತನ ಕ್ರಿಯೆಯನ್ನು ಒಳ್ಳೆಯ-ಕೆಟ್ಟ ದ್ವನ್ದ್ವದ ಪರಿಮಿತಿಯಲ್ಲಿ ಅಳೆದು, ಆತನನ್ನು ಒಳ್ಳೆಯವನು ಅಥವ ಕೆಟ್ಟವನು ಎನ್ದು ಶೀರ್ಷಕ (judgement) ಗೊಳಿಸುವ ಅನುಭವ ನಮ್ಮೆಲ್ಲರಿಗೂ ಇದೆ ಮತ್ತು ಹೀಗೆ ಮಾಡುವ ನಮ್ಮ ಪ್ರವೃತ್ತಿಯ ಬಗ್ಗೆ ನಮಗೆ ಅರಿವೂ ಇದೆ.

ವ್ಯಾವಹಾರಿಕ ದೃಷ್ಟಿಯಲ್ಲಿ, ಕಾನೂನಿನ ದೃಷ್ಟಿಯಲ್ಲಿ ಇದು ಸರಿಯೂ ಹೌದು ಮತ್ತು ಅವಶ್ಯಕವೂ ಕೂಡಾ. ಆದರೆ ಸೋಜಿಗವೆನ್ದರೆ, ನಾವು ಮಾಡಿದ ಕ್ರಿಯೆಯ ಮೇಲೆ ಮತ್ತೊಬ್ಬರು ನಮ್ಮನ್ನು ಶೀರ್ಷಕಗೊಳಿಸುವಾಗ, ಅದರಲ್ಲೂ ಕೆಟ್ಟವರೆನ್ದು ಶೀರ್ಷಕಗೊಳಿಸುವಾಗ, ನಮಗೆ ನಾವು ಮೂಲತಹ ಒಳ್ಳೆಯವರು, ಬರೇ ನಾವು ಮಾಡಿದ ತಪ್ಪಿನಿನ್ದ ನಮ್ಮನ್ನು ಕೆಟ್ಟವರೆನ್ದು ಜನರು ಅಳೆಯುವುದು ಅನುಚಿತ ಮತ್ತು ನಾವು ಬೇರೆ ನಮ್ಮ ಕ್ರಿಯೆಗಳು ಬೇರೆ ಎಮ್ಬ ಧೋರಣೆ ತೋರುತ್ತೇವೆ ಮತ್ತು ತೋರುವ ಈ ಪ್ರವೃತ್ತಿಯ ಬಗ್ಗೆಯೂ ನಮಗರಿವಿದೆ. ಇಲ್ಲಿ, ಈ ಧೋರಣೆಯ ಬಕವ್ರತದ (hypocrisy) ಬಗ್ಗೆ ಚರ್ಚಿಸುವುದು ನಮ್ಮ ಗುರಿಯಲ್ಲ; ಈ ಧೋರಣೆಯ ಮೂಲದಲ್ಲೇ ಮೇಲೆ ಹೇಳಿದ ಯೋಗದ ಗುರಿಯ ರಹಸ್ಯ ಅಡಗಿರುವುದು! ಅದೇನೆನ್ದು ನೋಡೋಣ.

ಚಿತ್ತವು (ಮನಸ್ಸು, ಬುದ್ಧಿ ಅಹಙ್ಕಾರ್ ) ಬಾಹ್ಯಮುಖದಲ್ಲಿದ್ದು ಆಚಾರಗಳು, ಕ್ರಿಯೆಗಳು, ವ್ಯವಹಾರಗಳು ಇತ್ಯಾದಿಗಳಲ್ಲಿ ತೊಡಗಿದಾಗ ಅದನ್ನು ವ್ಯುತ್ಥಾನ ಚಿತ್ತವೆನ್ದು ಕರೆಯುತ್ತಾರೆ. ವ್ಯುತ್ಥಾನವೆನ್ದರೆ, ಏಳುವುದು ಎನ್ದರ್ಥ. ಪ್ರಕೃತಿಯಾದ ಚಿತ್ತವು (ಸಾಙ್ಖ್ಯ-ಯೋಗದಲ್ಲಿ ಕ್ರಿಯೆಗಳಿಗೆ ಮತ್ತು ಆಕಾರಣದಿನ್ದ ಬದಲಾವಣೆಗೊಳ್ಳುವ ಎಲ್ಲವನ್ನೂ ಪ್ರಕೃತಿಯೆನ್ದು ಸ್ತ್ರೀಲಿಙ್ಗದ ರೂಪದಲ್ಲಿ ಗುರುತಿಸುತ್ತಾರೆ) ಜಡವಾದುದರಿನ್ದ, ಅದಕ್ಕೆ ತನ್ನದೇ ಆದ ಬೆಳಕು ಅಥವ ಚೇತನವಿರುವುದಿಲ್ಲ. ಆದಕ್ಕೆ ಬೆಳಕು/ಚೇತನವನ್ನು ಕೊಡುವುದೇ ಚೈತನ್ಯವಾದ ಪುರುಷ ಅಥವ ನಮ್ಮ/ಜೀವದ ಮಟ್ಟದಲ್ಲಿ ದ್ರಷ್ಟ (ಅಥವ ಚಿತಿಶಕ್ತಿ). ಬೆಳಕು ಚೆಲ್ಲಿದರೂ, ಚಿತ್ತದ ಚೇಷ್ಟೆಗಳಿನ್ದ ಅಪ್ರಭಾವಿತವಾಗಿರುತ್ತದೆ; ಅಪ್ರಭಾವಿತವಾಗಿದ್ದರೂ, ಚಿತ್ತಕ್ಕೆ ಆದಿಮವಾಗಿ ಬೆಳಕನ್ನು ಕೊಟ್ಟರೂ, ಚಿತ್ತವು ವ್ಯುತ್ಥಾನ ಸ್ಥಿತಿಯಲ್ಲಿದ್ದಾಗ ದ್ರಷ್ಟುವನ್ನು ಈ ವ್ಯುತ್ಥಾನ ದ ಕೃತ್ರಿಮ (artificial) ಬೆಳಕಿನಲ್ಲಿ ಗುರುತಿಸಲಾಗುತ್ತದೆಯೇ ಹೊರತು, ದ್ರಷ್ಟುವಿನ ನೈಜ ಸ್ವರೂಪದ ಅರಿವಾಗುವುದಿಲ್ಲ. ಸ್ಫಟಿಕದ ಮುನ್ದೆ ಕೆಮ್ಪನೆಯ ಗುಲಾಬಿ ಇರುವವರೆಗೂ ಸ್ಫಟಿಕವು ಕೆಮ್ಪಗೆ ಕಣ್ಡು, ಸ್ಫಟಿಕವು ನಿಜವಾಗಿಯೂ ಕೆಮ್ಪು ಬಣ್ಣದ್ದೆಮ್ಬ ಭ್ರಮೆಯನ್ನು ಕೊಟ್ಟು, ಗುಲಾಬಿ ತೆಗೆದ ತಕ್ಷಣ ಸ್ಫಟಿಕದ ನೈಜ ಸ್ವರೂಪ ತಿಳಿಯುವಹಾಗೆ, ಸಮುದ್ರದ ದನ್ಡೆಯ ಮೇಲೆ ನಡೆದು ಹೋಗುವಾಗ ದೂರದಲ್ಲಿ ಆರ್ಜುನವನ್ನು (silver) ಕನ್ಡು, ಹತ್ತಿರ ಹೋದಾಗ ನಿಜವಾಗಿಯೂ ಕಪ್ಪೆ ಚಿಪ್ಪನ್ನು ಕಣ್ಡಹಾಗೆ. ಒಬ್ಬ ಮನುಷ್ಯನ ನೈಜ ಸ್ವರೂಪವನ್ನು ಆತನ ಬಾಹ್ಯದ ಚಟುವಟಿಕೆಗಳಿನ್ದ ಗುರುತಿಸುವ ಹಾಗೆ; ಅಥವಾ ಕೊಳದ ತಳವು, ಅಲೆಗಳಿನ್ದ, ಗಾಳಿಯಿನ್ದ ಅಭಿಲುಪ್ತಗೊನ್ಡ(disturbed) ಅಥವ ಅನಚ್ಚವಾದ(unclear) ನೀರಿನನ್ತೆಯೇ ಕಾಣುವ ಹಾಗೆ. ಈ ಸೂತ್ರವು ತದಾ ದ್ರಷ್ಟುಃ ಸ್ವರೂಪೇವಸ್ಥಾನಮ್ ಎನ್ದು ಹೇಳುವಾಗ, ತದಾ, ಅನ್ದರೆ, ಆಗ, ಒಬ್ಬ ಮನುಷ್ಯನ ಕೃತಿ/ಆಚರಣೆಗಳನ್ನು ಬದಿಗಿಟ್ಟಾಗ, ಕೊಳದ ನೀರಿ ಅಲೆಗಳು ತಮ್ಮ ಮೂಲಕ್ಕೆ ಅನ್ದರೆ ನೀರಿಗೆ ಹಿನ್ದಿರುಗಿದಾಗ, ಮನುಷ್ಯನನ್ನು, ಕೊಳವನ್ನು ಅಚ್ಛವಾಗಿ ನೋಡಿದಾಗ, ಕೊಳದ ತಳದ, ಮನುಷ್ಯನ ನೈಜ ಸ್ವರೂಪದ ಅರಿವಾಗುತ್ತದೆ. ಚಿತ್ತದ ವೃತ್ತಿಗಳು ನಿರ್ವೃತಿಗೊನ್ಡಾಗ ದ್ರಷ್ಟುವು, ಪುರುಷನು, ಪ್ರಕೃತಿಯಿನ್ದ, ಪ್ರಕೃತಿಯ ಚೇಷ್ಟೆಗಳಿನ್ದ ಕೈವಲ್ಯಗೊನ್ದು (separated, liberated) ತನ್ನ ನೈಜ ಸ್ವರೂಪದಲ್ಲಿ ಅವಸ್ಥಿತನಾಗಿರುತ್ತಾನೆ/ತ್ತಾಳೆ. ಆದ್ದರಿನ್ದ, ಪ್ರಕೃತಿಯಿನ್ದ ಪುರುಷನ/ಳ ವಿಯೋಗವೇ ಯೋಗ. ಚಿತ್ತವು ವ್ಯುತ್ಥಾನ ಸ್ಥಿತಿಯಿನ್ದ ಮರಳಿ ನಿರೋಧ ಸ್ಥಿತಿಗೆ, ಸಮಾಧಿ ಸ್ಥಿತಿಗೆ ಹಿನ್ತಿರುಗಿದಾಗ ಯೋಗ - ಇಲ್ಲಿ ಸ್ಫಟಿಕ ಮತ್ತು ಆರ್ಜುನದ ಉದಾಹರಣೆಯು ಹಲವು ರೀತಿಯ ಸಮಾಧಿಗೆ ಉಪಮೆಯಾಗಿದೆ. ಈ ಸಮಾಧಿಗಳನ್ನು ಮುನ್ದೆ ನೋಡೋಣ.

ತತ್ ಸತ್
ಅರಿವಿನ ಸೊಗಡು

ಅರಿವೆ ಇಲ್ಲ! ಅರಿಗಳಿಲ್ಲ! ಅರಿವೇಯಲ್ಲಾ! ಎನ್ದರುಹಿ ಹುಟ್ಟ ಹುಟ್ಟುತ ಭವದ ಹುಟ್ಟಿನಲಿ ಒಟ್ಟಾಗಿ ಹೊಟ್ಟಾಗಿ ಭವಹರನ ಅರಿವುದೆನ್ತು?

ಲೋಕ ಶಙ್ಕರ!

## *ಈ ತಿನಿಸುಗಳನ್ನು ಗುರುತಿಸಬಲ್ಲಿರಾ?*

೧. ಅರೆ ಮಾಗಿದ ಕದಳಿ ತಂಡುಲದೊಳು ಅರೆದು ಹಸಿಮೆಣಸು ಶುಂಠಿ ಪಲಾಂಡುವಿನ
ಹಿತಮಿತ ಬೆರಕೆಯೊಡನೆ ಹದವಾಗಿ ಬೆರೆಸಿದ ನವಣೆ ಘೃತದ ಕಂಪು ಮೇಳೈಸಿರೆ ಕಡು ತೀಕ್ಷ್ಣ
ಶಾಖದಿ ಲೋಹದ ಕುಳಿಯೊಳು ಬೆಂದ ಈ ತಿನಿಸ ಸವಿಯ ಏನೆಂದು ಬಣ್ಣಿಸಲಿ?
ಆ ಪಾಕ ತಜ್ಞ ವಲಲನೇ ಸೋಲೊಪ್ಪಿಕೊಂಡಾನು.

೨ . ಚುಮು ಚುಮು ಮಳೆ ಸುರಿದಿರಲು ,
ಜಿಹ್ವೆಯು ಏನನ್ನೋ ಬಯಸಿರಲು ,
ಹದವಾಗಿ ಅರೆದ ದೋಸೆಯ ಹಿಟ್ಟು ವಾರದಿಂದ ಶೀತಲಪೆಟ್ಟಿಗೆಯೊಳಿರಲು,
ಆರ್ದ್ರಕ ಮೇಥಿಯ ಹಸಿ ಮೆಣಸಿನೊಳರೆದು ಧನಿಯ ಜೀರಕದ ಘಮಘಮವು ಮೇಳೈಸಿರೆ
ಹದವಾಗಿ ರವೆ ಬೆರೆಸಿ ಎಣ್ಣೆಯೊಳು ಕಾಸಿದರೆ ಆಹಾ ಈ ರುಚಿಯೊಳು ಸ್ವರ್ಗಕ್ಕೆ ಕಿಚ್ಚು
ಹಚ್ಚೆಂದ ಸರ್ವಜ್ಞ.



**ಡಾ. ಶರ್ವಾಣಿ ಭಟ್**

(ಉತ್ತರಕ್ಕಾಗಿ ಇಲ್ಲಿ ಕ್ಲಿಕ್ ಮಾಡಿ)



# ಕಾಳಿದಾಸನ ಕಾವ್ಯಗಳಲ್ಲಿ ಪಕ್ಷಿಗಳು

ಎಸ್. ರಂಗನಾಥ್

ಅಲಂಕಾರವಾದಿಗಳು ಉಪಮೆಯೇ ಅಲಂಕಾರದ ಜೀವಾಳವೆಂದೂ "ಉಪಮಾ ಕಾಳಿದಾಸಸ್ಯ" ಎಂದು ಕೈಮುಗಿದರು. ಗುಣ ರೀತಿ ವಾದಿಗಳು ವೈದರ್ಭಿ ರೀತಿಯೇ ಸರ್ವೋತ್ಕೃಷ್ಟವೆಂದು ಮನವರಿಕೆ ಮಾಡಿಕೊಂಡು "ವೈದರ್ಭಗಿರಾಂ ವಾಸಃ ಕಾಳಿದಾಸಃ" ಎಂದರು. ರಸಪಾರಮ್ಯ ವಾದಿಗಳು ಕಾಳಿದಾಸನನ್ನು "ರಸೇಶ್ವರಃ" ಎಂದರು. ಧ್ವನಿವಾದಿಗಳು ಅಸ್ಮಿನ್ ಅತಿ ವಿಚಿತ್ರ ಕವಿ ಪರಂಪರಾವಾಹಿನಿ ಸಂಸಾರೇ ಕಾಳಿದಾಸ ಪ್ರಭೃತಯೋ ದ್ವಿತ್ರಾ ಪಂಚಷೋವಾ ಮಹಾಕವಯಃ ಇತಿ ಗಣ್ಯಂತೆ" ಎಂದು ಗೌರವಿಸಿದರು. ವಕ್ರೋಕ್ತಿ ವಾದಿಗಳು ಸುಕುಮಾರ ಮಾರ್ಗದ ಪರಮಾಚಾರ್ಯ ಕಾಳಿದಾಸ ಎಂದಿದ್ದಾರೆ.

ಸತ್ಕವಯಃ "ಕಾಳಿದಾಸ ಪ್ರಭೃತಯಃ" ಇದೇ ರೀತಿ ಪಾಶ್ಚಾತ್ಯರ ಪ್ರಭಾವದಿಂದ ಮೆರೆದ ಆಧುನಿಕ ವಿಮರ್ಶೆಯು ಕಾಳಿದಾಸನನ್ನು ಗೌರವಿಸುವುದು ಸುವೇವಿದ್ಯ. ಒಟ್ಟಿನಲ್ಲಿ ಕಾಳಿದಾಸನು ಎಲ್ಲ ಬಗೆಯ ವಿಮರ್ಶಕನ ಮಾನದಂಡಗಳಲ್ಲಿಯೂ ಸೇರ್ಪಡೆಯಾಗಿದ್ದಾನೆ. ಇದು ಅವನ ದೃಢವಾದ ಕಾವ್ಯ ಕೌಶಲ್ಯಕ್ಕೆ ಸಾಕ್ಷಿ. ಸುಭಾಷಿತ ರತ್ನ ಭಂಡಾರಾಗಾರದಲ್ಲಿ ಹಂಸ, ದುಂಬಿ, ಕೋಗಿಲೆ, ಚಾತಕ, ನವಿಲು, ಚಕ್ರವಾಕ, ಗಿಳಿಗಳ ಬಗ್ಗೆ ಅನ್ಯೋಕ್ತಿ ಪ್ರಕರಣದಲ್ಲಿ ಉಲ್ಲೇಖವಿದೆ. ಭರ್ತೃಹರಿ ತನ್ನ ನೀತಿಶತಕದಲ್ಲಿ "ಚಾತಕ"ವನ್ನು ಕುರಿತು ಬರೆದಿರುವ ಅನ್ಯೋಕ್ತಿ ಜನಜನಿತವಾಗಿದೆ.

ಈ ಹಿನ್ನೆಲೆಯಲ್ಲಿ ಕಾಳಿದಾಸನ ಎರಡು ಮಹಾಕಾವ್ಯಗಳಾದ "ರಘುವಂಶ", "ಕುಮಾರಸಂಭವ" ಎರಡು ಖಂಡ ಕಾವ್ಯಗಳಾದ "ಮೇಘದೂತ" ಮತ್ತು "ಋತುಸಂಹಾರ", ಮೂರು ನಾಟಕಗಳಾದ ಮಾಲವಿಕಾಗ್ನಿಮಿತ್ರ, ವಿಕ್ರಮೋರ್ವಶೀಯ, ಅಭಿಜ್ಞಾನ ಶಾಕುಂತಲಗಳಲ್ಲಿ ಅವನು ಚಿತ್ರಿಸಿರುವ ನವಿಲು, ಕೋಗಿಲೆ, ಸಾರಸ, ಚಕ್ರವಾಕ, ಹಂಸ, ಚಕೋರ, ಪಾರಿವಾಳ, ದುಂಬಿ ಇತ್ಯಾದಿ ಪಕ್ಷಿಗಳನ್ನು ನೇರವಾಗಿ ಇಲ್ಲವೆ ಉಪಮಾದಿ ಅಲಂಕಾರಗಳ ಮೂಲಕ ಹೇಗೆ ಚಿತ್ರಿಸಿರುವನೆಂದು ಸ್ಥಾಲೀಪುಲಾಕನ್ಯಾಯದಂತೆ ವಿವೇಚಿಸುವುದೇ ಈ ಲೇಖನದ ಉದ್ದೇಶ.

**ಕಾಳಿದಾಸನ ಕಾವ್ಯಗಳಲ್ಲಿ ಪಕ್ಷಿಗಳು**

ಅಮರಕೋಶದಲ್ಲಿ "ಖಗ", "ವಿಹಂಗ", "ವಿಹಗ", "ವಿಹಾಯಸ", "ಶಕುಂತಿ", ಪಕ್ಷಿ", "ಶಕುನಿ", "ಶಕುಂತ", "ಶಕುನ", "ದ್ವಿಜ", "ಪ್ರಪತ್ರಿ", "ಪತ್ರಿ", "ಪತಗ" ಮೊದಲಾದ ಶಬ್ದಗಳಿಂದ ಪಕ್ಷಿಗೆ ಪರ್ಯಾಯವಾಗಿ ಪ್ರಯೋಗಿಸಲ್ಪಟ್ಟಿದೆ. ನಮ್ಮ ರಾಷ್ಟ್ರಕವಿ ಯಾದ ಕಾಳಿದಾಸ ತನ್ನ ಎಲ್ಲ ಕೃತಿಗಳಲ್ಲೂ ಪಕ್ಷಿಗಳ ವರ್ಣನೆಯನ್ನು ಉಪಮೆ ಯಿಂದಲೋ ಅಥವಾ ಇನ್ನಾವುದೇ ಅಲಂಕಾರದ ಮುಖಾಂತರವೋ ಬಳಸಿದ್ದಾನೆ.

**<u>ಮಹಾಕಾವ್ಯಗಳು:</u>** ***<u>1.ರಘುವಂಶ</u>***

ಕಾಳಿದಾಸನ ಶೈಲಿಯ ದೃಷ್ಟಿಯಿಂದ ಅತ್ಯಂತ ಮನೋಜ್ಞವಾದ 19 ಸರ್ಗಗಳಿಂದ ಕೂಡಿರುವ ಮಹಾಕಾವ್ಯ ರಘುವಂಶ, ನಮಸ್ಕಾರಾತ್ಮಕ ಮಂಗಳದಿಂದ ಕೂಡಿರುವ ಈ ಮಹಾಕಾವ್ಯ 1509 ಶ್ಲೋಕಗಳಿಂದ ಕೂಡಿದ್ದು 29 ರಾಜರ ವರ್ಣನೆಯನ್ನು ಒಳಗೊಂಡಿದೆ. ಈ ಕೃತಿಗೆ 33 ಸಂಸ್ಕೃತ ವ್ಯಾಖ್ಯಾನಗಳಲ್ಲಿ, ಮಲ್ಲಿನಾಥನ "ಸಂಜೀವಿನೀ ವ್ಯಾಖ್ಯಾನ" ಅತ್ಯಂತ ಸುಪ್ರಸಿದ್ಧವಾದದ್ದು. ಈ ಕೃತಿಯಿಂದಲೇ ಕಾಳಿದಾಸನಿಗೆ "ದೀಪಶಿಖಾ ಕಾಳಿದಾಸಃ" ಎಂಬ ಬಿರುದು ಜನಜನಿತವಾಗಿದೆ. ಈಗ ಈ ಕಾವ್ಯದಲ್ಲಿ ಬರುವ ಕೆಲವು ಪಕ್ಷಿಗಳ ವರ್ಣನೆ ಇಂತಿದೆ:

1. ರಘು ಮಹಾರಾಜನ ಕೀರ್ತಿಯನ್ನು ನಾಲ್ಕನೇ ಸರ್ಗ 19ನೇ ಶ್ಲೋಕದಲ್ಲಿ ಕಾಳಿದಾಸ ಈ ರೀತಿ ವರ್ಣಿಸುತ್ತಾನೆ:

ಹಂಸ ಶ್ರೇಣೀಷು ತಾರಾಸು ಕುಮುದ್ವತ್ಸು ಚ ವಾರಿಷು ।
ವಿಭೂತಯಸ್ತದೀಯಾನಾಂ ಪರ್ಯಸ್ತಾ ಯಶಸಾಮಿವ ॥ (4.19)

ಹಂಸಗಳ ಸಾಲುಗಳಲ್ಲಿಯೂ, ನಕ್ಷತ್ರಗಳಲ್ಲಿಯೂ, ನೈದಿಲೆಗಳಲ್ಲಿಯೂ, ನೀರಿನಲ್ಲೂ ರಘು ಮಹಾರಾಜನ ಕೀರ್ತಿಯೆಂಬ ಸಂಪತ್ತು ಎಲ್ಲೆಡೆ ಪಸರಿಸಿದಂತೆ ಕಾಣುತ್ತಿತ್ತು ಎಂದಿದ್ದಾನೆ.

2. ಅಜ ಮಹಾರಾಜನನ್ನು ಎಬ್ಬಿಸುವ ಕಾರ್ಯದಲ್ಲಿ ಗಿಣಿಗಳ ಪಾತ್ರವನ್ನು ಕಾಳಿದಾಸ 5ನೇ ಸರ್ಗದ 74ನೇ ಶ್ಲೋಕದಲ್ಲಿ ಹೀಗೆ ವರ್ಣಿಸಿದ್ದಾನೆ.

*ಭವತಿ ವಿರಲಭಕ್ತಿರ್ಮ್ಲಾನಪುಷ್ಪೋಪಹಾರಃ*
*ಸ್ವಕಿರಣಪರಿವೇಷೋದ್ಭೇದಶೂನ್ಯಾಃ ಪ್ರದೀಪಾಃ ।*
*ಅಯಮಪಿ ಚ ಗಿರಂ ನಃ ತ್ವತ್ ಪ್ರಬೋಧಪ್ರಯುಕ್ತಾ -*
*ಮನುವದತಿ ಶುಕಸ್ತೇ ಮಂಜುವಾಕ್ಪಂಜರಸ್ಥಃ ॥ (5.74)*

ಪೂಜಾ ಕಾಲದಲ್ಲಿ ಉಪಯೋಗಿಸಿದ ಹೂವು, ಪೂಜೆ ಮಾಡಿರುವ ಕುಸುಮಗಳು, ಶಿಥಿಲವಾಗಿ ಬಾಡಿದಂತೆ ಮತ್ತು ವಿರಳವಾಗಿ ಕಟ್ಟಿದಂತೆ ತೋರುತ್ತಿದೆ. ರಾತ್ರಿ ಕಾಲದಲ್ಲಿ ಪೂರ್ಣವಾಗಿ ಉರಿದಿರುವುದರಿಂದ ದೀಪಗಳು ಕರಿಕಟ್ಟಿ ಕಿರಣಗಳು ಮಂಡಲಾಕಾರ ಹೊಂದಿ ಪ್ರಕಾಶವಿಲ್ಲದೆ ತೋರುತ್ತಿದೆ. ಪಂಜರದಲ್ಲಿರುವ ಗಿಣಿಯು ಮಂಜುಳ ವಾಕ್ ಸರಣಿಯಿಂದ ನಾವು ಹಾಡುವ ನುಡಿಗಳನ್ನೇ ಆಲಾಪಿಸುತ್ತಿದೆ. ನಿನ್ನನ್ನು ಎಚ್ಚರಿಸಲು ಪಂಜರದ ಗಿಣಿಯು ಮೃದು ಮನೋಹರವಾದ ಕರ್ಣಾನಂದಕರವಾದ ಶಬ್ದಗಳನ್ನು ಪಠಿಸುತ್ತಾ ನಮ್ಮನ್ನೇ ಅನುಸರಿಸುತ್ತಿದೆ.

3. ಅಜ ಮಹಾರಾಜನ ಸಿಂಹಾಸನದ ನವರತ್ನಗಳ ಬಣ್ಣ ನವಿಲಿನ ಬಣ್ಣಕ್ಕೆ ಸಾಟಿಯಾಗಿತ್ತೆಂದು ಕಾಳಿದಾಸ 6ನೇ ಸರ್ಗ 4ನೇ ಶ್ಲೋಕದಲ್ಲಿ ವರ್ಣಿಸಿದ್ದಾನೆ:

*ಪರಾರ್ಧ್ಯವರ್ಣಾಸ್ತರಣೋಪಪನ್ನಮಾಸೇದಿವಾನ್ರತ್ನವದಾಸನಂ ಸಃ ।*
*ಭೂಯಿಷ್ಠಮಾಸೀದುಪಮೇಯಕಾನ್ತಿರ್ಮಯೂರಪೃಷ್ಠಾಶ್ರಯಿಣಾ ಗುಹೇನ ॥*
*(6.4)*

ಅಜನು ನೀಲಿ, ಹಳದಿ, ಮೊದಲಾದ ವರ್ಣಗಳಿಂದ ಹೊಳೆಯುವ ಕನ್ನಡಿಗಳಿಂದಲೂ, ಶ್ರೇಷ್ಠವಾದ ರತ್ನಗಂಬಳಿಗಳಿಂದಲೂ ರಚಿತವಾದ ವೇದಿಕೆಯ ಮೇಲಿರಿಸಿದ ರತ್ನ ಸಿಂಹಾಸನವನ್ನು ಅಲಂಕರಿಸಿದನು. ಅವನು ಶೋಭಾಯಮಾನವಾಗಿ ಮಂಡಿಸಿದಾಗ ದೇವತೆಗಳ ಸೇನಾನಿಯಾದ ಗುಹ ತನ್ನ ವಾಹನವಾದ ಮಯೂರವನ್ನೇರಿ ಕುಳಿತಂತೆ ಕಂಡನು.

4. ನೆರೆದಿರುವ ಜನರ ಗಮನವೆಲ್ಲ ರಾಜನ ಮೇಲೆ ಹೇಗೆ ಕೇಂದ್ರೀಕೃತವಾಗಿತ್ತೆಂದು ಕಾಳಿದಾಸ ದುಂಬಿಯ ದೃಷ್ಟಾಂತದಿಂದ 6ನೇ ಸರ್ಗ 7ನೇ ಶ್ಲೋಕದಲ್ಲಿ ವರ್ಣಿಸುತ್ತಾನೆ:

*ನೇತ್ರವ್ರಜಾಃ ಪೌರಜನಸ್ಯ ತಸ್ಮಿನ್ವಿಹಾಯ ಸರ್ವಾನ್ನೃಪತೀನ್ನಿಪೇತುಃ |*
*ಮದೋತ್ಕಟೇ ರೇಚಿತಪುಷ್ಪವೃಕ್ಷಾ ಗಂಧಾದ್ವಿಪೇ ವನ್ಯ ಇವ ದ್ವಿರೇಫಾಃ॥*
*(6.7)*

ಅಲ್ಲಿ ಉಪಸ್ಥಿತರಿದ್ದ ಅಪಾರ ನಾಗರಿಕರ ಕಣ್ಣು ದೃಷ್ಟಿ ಅಲ್ಲಿ ಆಸೀನರಾಗಿದ್ದ ಅನೇಕ ರಾಜರುಗಳನ್ನು ಬಿಟ್ಟು, ನೇರವಾಗಿ ಅಜ ಕುಮಾರನ ಕಡೆಗೆ ಹರಿಯಿತು. ದುಂಬಿಗಳ ದಿಂಡು ಇತರ ಹೂಗಳ ರಾಶಿಯನ್ನು ಬಯಸದೆ, ಮದೋದಕದಿಂದ ಸೊಕ್ಕಿರುವ, ಮದಜಲ ಸುರಿಸುತ್ತಿರುವ ಕಾಡಾನೆಯ ಕಪೋಲವನ್ನು ಮುತ್ತುವಂತೆ ಅವರ ಕಣ್ಣುಗಳು ಅಜನ ಮೇಲೆ ಕೇಂದ್ರೀಕೃತವಾಗಿತ್ತು.

5. ಇಂದುಮತಿಯನ್ನು ಸ್ವಯಂವರ ಸಮಯದಲ್ಲಿ ಅವಳ ಸಖಿಯಾದ ಸುನಂದೆಯು ಒಬ್ಬ ರಾಜಕುಮಾರನಿಂದ ಮತ್ತೊಬ್ಬ ರಾಜಕುಮಾರನ ಬಳಿ ಕರೆದುಕೊಂಡು ಹೋದ ದೃಶ್ಯವನ್ನು ರಾಜಹಂಸಕ್ಕೆ ಹೋಲಿಸಿ ಕಾಳಿದಾಸ 6ನೇ ಸರ್ಗ 26ನೇ ಶ್ಲೋಕದಲ್ಲಿ ಹಿಡಿದಿದ್ದಾನೆ.

*ತಾಂ ಸೈವ ವೇತ್ರಗ್ರಹಣೇ ನಿಯುಕ್ತಾ ರಾಜಾನ್ತರಂ ರಾಜಸುತಾಂ ನಿನಾಯ |*
*ಸಮೀರಣೋತ್ಥೇವ ತರಂಗಲೇಖಾ ಪದ್ಮಾಂತರಂ ಮಾನಸರಾಜಹಂಸೀಂ ॥*
*(6.26)*

ಆ ರಾಜಮಾನಸ ರಾಜಹಂಸಿಯನ್ನು ಸಖಿ ಸುನಂದೆಯು ಒಬ್ಬ ರಾಜನ ಬಳಿಯಿಂದ ಇನ್ನೊಬ್ಬ ಮಹಾರಾಜನ ಬಳಿಗೆ ಕರೆದುಕೊಂಡು ಹೋದಳು. ಜೋರಾಗಿ ಗಾಳಿ ಬೀಸಿದಾಗ ಮಾನಸ ಸರೋವರ ಜಲರಾಶಿಗಳಲ್ಲಿ ತೆರೆಗಳು ಏಳುವುವು. ಆ ತೆರೆಯಲ್ಲಿ ರಾಜಹಂಸ ಒಂದು ತಾವರೆ ಪುಷ್ಪದಿಂದ ಇನ್ನೊಂದು ತಾವರೆ ಹೂವಿನೆಡೆಗೆ ಬಹಳ ಸಂತಸದಿಂದ ನೀರ ತೆರೆಯಲ್ಲಿ ತೇಲಿಹೋಗಿ ಸೇರುವಂತೆ ಆ ರಾಜಕುಮಾರಿ ನಡೆದು ಹೋದಳು.

6. ಇಂದುಮತಿ ಅಜನನ್ನು ಅರಸಿ ಬಂದದ್ದು ದುಂಬಿಯು ಆಗತಾನೇ ಹೂಬಿಟ್ಟ ಮಾವಿನ ಮರವನ್ನು ಆಶ್ರಯಿಸುವಂತೆ ಎಂದು ಕಾಳಿದಾಸ 6ನೇ ಸರ್ಗ 69ನೇ ಶ್ಲೋಕದಲ್ಲಿ ವರ್ಣಿಸಿದ್ದಾನೆ.

*ತಂ ಪ್ರಾಪ್ಯ ಸರ್ವಾವಯವಾನವದ್ಯಂ*
*ವ್ಯಾವರ್ತತಾನ್ಯೋಪಗಮಾತ್ಕುಮಾರೀ |*
*ನ ಹಿ ಪ್ರಫುಲ್ಲಂ ಸಹಕಾರಮೇತ್ಯ ವೃಕ್ಷಾಂತರಂ ಕಾಂಕ್ಷತಿ ಷಟ್ಪದಾಲೀ ॥*
*(6.69)*

ಇಂದುಮತಿಯು ಆಗತಾನೇ ಪೂರ್ಣವಾಗಿ ಕುಸುಮಿಸಿ ಹೂ ಬಿಟ್ಟಿರುವ ಮಾವಿನ ಮರದ ಬಳಿಗೆ ಬಂದ ದುಂಬಿಯಂತೆ ನಿಂತಳು. ಅಜನಿಂದ ಮುಂದೆ ಹೋಗಲು ಬಯಸಲಿಲ್ಲ.

7. ಇಂದುಮತಿಯ ಮರಣ ವಾರ್ತೆಯನ್ನು ಕಾಳಿದಾಸ 8ನೇ ಸರ್ಗ 39ನೇ ಶ್ಲೋಕದಲ್ಲಿ ಹಕ್ಕಿಗಳ ಆರ್ತನಾದಕ್ಕೆ ಹೋಲಿಸಿದ್ದಾನೆ.

*ಉಭಯೋರಪಿ ಪಾರ್ಶ್ವವರ್ತಿನಾಂ ತುಮುಲೇನಾರ್ತರವೇಣ ವೇಜಿತಾಃ |*
*ವಿಹಗಾಃ ಕಮಲಾಕರಾಲಯಾಃ ಸಮದುಃಖಾ ಇವ ತತ್ರ ಚುಕ್ರುಶುಃ ॥ (8.39)*

ಆ ಸತಿಪತಿಯ ಸೇವಕರು ಒಮ್ಮೆಂದೊಮ್ಮೆಗೆ ದಿಗ್ಭ್ರಾಂತರಾಗಿ ಕಿರುಚಾಡಿದರು. ಆಗ ಅಲ್ಲಿ ಸಮೀಪದಲ್ಲಿ ತಾವರೆ ಕೊಳದಲ್ಲಿದ್ದ ಹಕ್ಕಿಗಳ ಸಮುದಾಯ ಭಯಪಟ್ಟು ಚೀರಾಡಿದವು.

8. ಅಜ ವಿಲಾಪದ ಪ್ರಸಂಗದಲ್ಲಿ ಕಾಳಿದಾಸ ಅಜನ ಮಾತಿನಿಂದ ಇಂದುಮತಿಯ ನಡಿಗೆಯನ್ನು ಹಂಸ ನಡಿಗೆಗೆ ಹೋಲಿಸಿದ್ದಾನೆ.

*ಕಲಮನ್ಯಭೃತಾಸು ಭಾಷಿತಂ ಕಲಹಂಸೀಷು ಮದಾಲಸಂ ಗತಮ್ |*
*ಪೃಷತೀಷು ವಿಲೋಲಮೀಕ್ಷಿತಂ ಪವನಾಧೂತಲತಾಸು ವಿಭ್ರಮಾಃ ॥ (8.59)*

ಮಂದವಾಗಿ ನಡೆಯುವ, ಮದಾಲಸಗಾಮಿಯಾದ ಹಂಸದ ನಡಿಗೆ ಉಳ್ಳವಳು ನೀನು. ನಿನ್ನ ನಡಿಗೆಯನ್ನು ನಾನಿಂದು ರಾಜಹಂಸದಲ್ಲಿ ಕಾಣುವೆನು. ಮೃಗನಯನೆಯಾದ ನಿನ್ನ ಚಂಚಲ ದೃಷ್ಟಿ ಜಿಂಕೆಯ ಕಣ್ಣಿನಲ್ಲಿ ಅಡಗಿದೆ.

9. ಲಕ್ಷ್ಮಣನು ಶೂರ್ಪಣಖಿಯ ಕೋಗಿಲೆಯ ಧ್ವನಿಯಂತಿರುವ ಮಾತನ್ನು ಹೇಗೆ ಶಂಕಿಸಿದನೆಂಬುದನ್ನು 12ನೇ ಸರ್ಗ 39ನೇ ಶ್ಲೋಕದಲ್ಲಿ ಕಾಳಿದಾಸ ವರ್ಣಿಸಿದ್ದಾನೆ

*ಲಕ್ಷ್ಮಣಃ ಪ್ರಥಮಂ ಶ್ರುತ್ವಾ ಕೋಕಿಲಾಮಂಜುವಾದಿನೀಮ್ |*
*ಶಿವಾಘೋರಸ್ವನಾಂ ಪಶ್ಚಾದ್ಬುಬುಧೇ ವಿಕೃತೇತಿ ತಾಂ ॥ (12.39)*

ಲಕ್ಷ್ಮಣ ಶೂರ್ಪಣಖಿಯ ಕುತಂತ್ರವನ್ನು ಕೂಡಲೇ ಅರಿತನು. ಮೊದಲು ಕೋಗಿಲೆಯ ದನಿಯಲ್ಲಿ ಮಾತನಾಡಿದವಳು, ಸ್ಮಶಾನದಲ್ಲಿ ಹೆಣವನ್ನು ಎಳೆದಾಡುತ್ತಾ ಕಿರುಚಾಡುವ ಹೆಣ್ಣು ನರಿಯಂತೆ ತಿರುಗಾಡುತ್ತಿರುವ ಅವಳನ್ನು ವಿಕೃತಿಗೊಳಿಸಲು ನಿರ್ಧರಿಸಿದನು.

10. ರಾಮನಿಂದ ಪತಿತ್ಯಕ್ತಳಾದ ಸೀತೆಯ ರೋಧನವು ಹೆಣ್ಣು ಚಕ್ರವಾಕದ ಅಳುವಂತಿತ್ತೆಂದು ಕಾಳಿದಾಸ ವರ್ಣಿಸುತ್ತಾನೆ :

*ತಥೇತಿ ತಸ್ಯಾಃ ಪ್ರತಿಗೃಹ್ಯ ವಾಚಂ ರಾಮಾನುಜೇ ದೃಷ್ಟಿಪಥಂ ವ್ಯತೀತೇ |*
*ಸಾ ಮುಕ್ತಕಂಠಂ ವ್ಯಸನಾತಿಭಾರಾತ್ ಚಕ್ರಂದ ವಿಗ್ನಾ ಕುರರೀವ ಭೂಯಃ ॥*
*(14.68)*

ಶೋಕಿತಳಾದ ಸೀತಾದೇವಿಯ ಮಾತುಗಳನ್ನು ಹಾಗೆಯೇ ಅಣ್ಣನಿಗೆ ತಿಳಿಸುವೆನೆಂದು ಲಕ್ಷ್ಮಣ ಹೊರಡಲು ಉದ್ಯುಕ್ತನಾದನು. ಆಗ ಸೀತೆಯು ಭಯಗೊಂಡು ಚೀರುತ್ತಿರುವ ಹೆಣ್ಣು ಚಕ್ರವಾಕ ಪಕ್ಷಿಯಂತೆ ರೋಧಿಸುತ್ತಿದ್ದಳು.

11. ವಿಲಾಪಯೋಗದಿಂದ ಪಕ್ಷಿಗಳು ಹೇಗೆ ಸ್ಪಂದಿಸಿದವೆಂಬುದನ್ನು14ನೇ ಸರ್ಗ 69ನೇ ಶ್ಲೋಕದಲ್ಲಿ ಕಾಳಿದಾಸ ಮನೋಜ್ಞವಾಗಿ ವರ್ಣಿಸಿದ್ದಾನೆ.

*ನೃತ್ಯಂ ಮಯೂರಾಃ ಕುಸುಮಾನಿ ವೃಕಾಃ ದರ್ಭಾನುಪಾತ್ತಾನ್ವಿಜಹುರ್ಹರಿಣ್ಯಃ |*
*ತಸ್ಯಾಃ ಪ್ರಪನ್ನೇ ಸಮದುಃಖಭಾವಂ ಅತ್ಯನ್ತಮಾಸೀದ್ರುದಿತಂ ವನೇಽಪಿ ||*
*(14.69)*

ಸೀತೆಯ ಅಳಲನ್ನು ಕಂಡು ನವಿಲು ನರ್ತನ ಮಾಡಲಿಲ್ಲ. ಮರಗಿಡಗಳು ಕಂಬನಿಗರೆಯುವಂತೆ ಹೂಗಳು ಉದುರಿಸಿದವು. ಹೆಣ್ಣು ಜಿಂಕೆಗಳು ಬಾಯಲ್ಲಿದ್ದ ಕವಳವನ್ನು ಚೆಲ್ಲುತ್ತಾ ನಡೆದವು. ಹೀಗೆ ಆ ಕಾಡಿನೊಳಗಿದ್ದ ಸಮಸ್ತವೂ ಸೀತೆಯ ಅಳುವಿಗೆ ಸ್ಪಂದಿಸಿದವು.

12. ರಾಜಮಹಾರಾಜರು ಗಂಗಾನದಿಯನ್ನು ದಾಟುತ್ತಿರಲು ಅಲ್ಲಿ ವಿಹರಿಸುತ್ತಿದ್ದ ಹಂಸ ಪಕ್ಷಿಗಳು ಗಗನಕ್ಕೆ ಹಾರಿ ಚಾಮರದಂತಿದ್ದವು ಎಂಬ ದೃಶ್ಯವನ್ನು ಕಾಳಿದಾಸ 16ನೇ ಸರ್ಗ 33ನೇ ಶ್ಲೋಕದಲ್ಲಿ ಸೆರೆಹಿಡಿದಿದ್ದಾನೆ.

*ತೀರ್ಥೇ ತದೀಯೇ ಗಜಸೇತುಬಂಧಾತ್ ಪ್ರತೀಪಗಾಮುತ್ತರತೋಽಸ್ಯ ಗಂಗಾಮ್ |*
*ಅಯತ್ನಬಾಲವ್ಯಜನೀಬಭೂವುರ್ಹಂಸಾ ನಭೋಲಂಘನಲೋಲಪಕ್ಷಾಃ ||*
*(16.33)*

ಕುಶರಾಜನು ವಿಂಧ್ಯತೀರ್ಥಕ್ಕೆ ಬಂದು ಗಂಗಾನದಿಯಲ್ಲಿ ಆನೆಗಳನ್ನು ಸಾಲು ಸಾಲಾಗಿ ನಿಲ್ಲಿಸಿ ರಚಿಸಿದ ಗಜಸೇತುವೆಯ ಮೂಲಕ ದಾಟಲೆಣಿಸಿದನು. ಆಗ ಗಂಗೆಯಲ್ಲಿ ವಿಹರಿಸುತ್ತಿದ್ದ ಹಂಸ ಪಕ್ಷಿಗಳು ಗಗನ ಮಾರ್ಗಕ್ಕೆ ಹಾರುತ್ತಾ ಚಾಮರದಂತೆ ಶೋಭಿಸುತ್ತಿದ್ದವು.

**(ಮುಂದುವರೆಯುವುದು)**



# ವೈರಾಣು

***ಚಂದ್ರ** , ನ್ಯೂ ಜೆರ್ಸಿ*

ವೈರಾಣು, ಅಥವ ಇಂಗ್ಲೀಷಿನಲ್ಲಿ ವೈರಸ್ ಅಂತ ಕರೆಸಿಕೊಳ್ಳುವ ಈ ಪದ, ಕಳೆದ ಒಂದೂವರೆ ವರ್ಷದಿಂದ ಕರೋನ ಎಂಬ ಹೆಸರಿನಲ್ಲಿ ಬಹಳ ಸುದ್ದಿ ಮಾಡುವುದರೊಂದಿಗೆ, ಲಕ್ಷಾನುಗಟ್ಟಲೆ ಜೀವಗಳನ್ನ ತಿಂದರೂ ಇನ್ನೂ ನಮ್ಮನ್ನು ತೊರೆದು ದೂರಹೋಗುವ ಮನಸ್ಸು ಮಾಡಿಲ್ಲ. ಆಗಾಗ್ಗೆ ದಿನಕ್ಕೊಂದು ರೂಪ ಹೊತ್ತು ಮನುಕುಲಕ್ಕೆ ಮುಳುವಾಗಿದೆ. ಇದರ ನಿರ್ನಾಮಕ್ಕೆ ಪರಿಣಿತ ಜೈವಿಕ ಸಂಶೋಧಕರು ರಾತ್ರಿ ಹಗಲು ನಿರಂತರ ಕಸರತ್ತು ನಡೆಸಿ, ಮೊಟ್ಟಮೊದಲ ಬಾರಿಗೆ ಅತೀ ವೇಗದ ಲಸಿಕೆ ತಯಾರಿಸಿ ನಮ್ಮನ್ನೆಲ್ಲಾ ಕಾಪಾಡುವಲ್ಲಿ ಯಶಸ್ಸುಗಳಿಸಿದ್ದಾರೆ ಎಂಬುಹುದು ಸರಿ ಸಂಗತಿ.

ಕರೋನ ವೈರಾಣುವಿನ ಬಗ್ಗೆ ಮಾಹಿತಿ, ಅಪಮಾಹಿತಿಗಳಿಗೇನು ಕಡಿಮೆ ಇಲ್ಲ. ನಿಮಿಷಕ್ಕೊಂದು ಹೊಸ ಹೊಸ ಮಾಹಿತಿ ನಮ್ಮ ಅಂಗೈಗೆ ಬರುತ್ತೆ. ಆದಕ್ಕೇ, ನಾವು, ಕರೊನ ವೈರಾಣುವಿನಿಂದ ದೂರಸರಿದು, ಮೂಲತಃ ವೈರಾಣು ಅಂದರೆ ಏನು ಅಂತ ತಿಳಿದು, ನಮ್ಮಂತಹ ಸಾಮಾನ್ಯರು ತೆಗೆದುಕೊಳ್ಳಬಹುದಾದ ಎಚ್ಚರಿಕೆಗಳ ಕಡೆ ಗಮನಕೊಟ್ಟು, ತಿಳಿದ ವೈದ್ಯರು ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಸೂಚನೆಗನುಗುಣವಾಗಿ ನಡೆಯುವುದೇ ಸದ್ಯದ ಪರಿಸ್ಥಿತಿಗೆ ಸೂಕ್ತ. ವೈರಾಣು ಸಮಸ್ಯೆ ಮನುಷ್ಯನಿಗೇನು ಹೊಸದಲ್ಲ. ನಿಜ ಹೇಳಬೇಕಾದರೆ, ಮನುಷ್ಯ ಹಲವು ವೈರಾಣುಗಳೊಂದಿಗೆ ಜೀವನ ನಡೆಸುವುದನ್ನ ರೂಢಿಸಿಕೊಂಡ್ಡಿದ್ದಾನೆ. ಹೀಗಾಗಿ, ನಮಗೆ ತಿಳಿಯುವುದು, ಮನುಷ್ಯ ವೈರಾಣುವಿನ ಮಿತ್ರ ಮತ್ತು ಸಮರ್ಥ ಎದುರಾಳಿಯೂ ಹೌದು.

ಮೊಟ್ಟಮೊದಲ ವೈರಾಣು ಯಾವುದು ಮತ್ತು ಯಾವಾಗ ಕಾಣಿಸಿಕೊಂಡಿತು ಅನ್ನುವುದರ ಬಗ್ಗೆ ನಿಖರವಾದ ದಾಖಲೆ ಇಲ್ಲವಾದರೂ, ಮನುಷ್ಯ ಇದರೊಟ್ಟಿಗೆ ಜೀವನ ನಡೆಸಿಕೊಂಡು ಬಂದಿದ್ದಾನೆ ಅನ್ನುವುದು ಖಚಿತ. ವೈರಾಣು ಒಂದು ಅಂತರ್ಜೀವಕೋಶ, ಇದು ಪರಾವಲಂಬಿ ಕೂಡಾ. ಇದು ತನ್ನಷ್ಟಕ್ಕೆ ತಾನೆ ಬದುಕಲು ಸಾಧ್ಯವಾಗದ ಅಣು. ಹೀಗಾಗಿ ಅದು ನಮ್ಮ ದೇಹದ ಜೀವಕೋಶದ ಆಶ್ರಯ ಪಡೆದು ತನ್ನನ್ನು ತಾನು ಉಲ್ಬಣಗೊಳಿಸಿಕೊಂಡು ಬಲಾಢ್ಯವಾಗಲು ಸಾಧ್ಯ. ಈ ಕಾರಣದಿಂದ ಇದನ್ನು ಸುಲಭವಾಗಿ ಶಮನಮಾಡಲು ಕಷ್ಟದ ಸಂಗತಿ ಎಂದು ಹೇಳಲಾಗುತ್ತದೆ. ಇದನ್ನು ಪರಿಣಾಮಕಾರಿಯಾಗಿ ಎದುರಿಸುವ ಸಾಮರ್ಥ್ಯ ನಮ್ಮ ದೇಹದ ಪ್ರತಿರೋಧಕ ಗುಣದಿಂದ ಮಾತ್ರ ಸಾಧ್ಯ ಅನ್ನುವುದು ಒಂದು ಕಡೆ ಕೇಳಿಬರುವ ಮಾತು. ಮತ್ತೊಂದು ಕಡೆ, ತ್ವರಿತಗತಿಯಲ್ಲಿ ಲಸಿಕೆ ತಯಾರಿಸಿ, ಪ್ರತಿಯೊಬ್ಬರಿಗೂ ಲಸಿಕೆ ಹಾಕಿಸಿಕೊಂಡು ಪ್ರತಿರೋಧಕ ಶಕ್ತಿ ಬೆಳೆಸಿಕೊಳ್ಳಲು ಆಗ್ರಹಿಸುವುದು ಸರ್ವೇಸಾಮಾನ್ಯ. ಪ್ರಯತ್ನ ಯಾವುದಾದರೂ, ಪ್ರತಿಯೊಬ್ಬರೂ ತಮ್ಮನ್ನು ಮತ್ತು ಇತರರನ್ನು ಕರೋನದಿಂದ ರಕ್ಷಿಸಿ ಕೊಳ್ಳುವುದು ಪ್ರಥಮ ಆದ್ಯತೆಯಾಗಿರಬೇಕು. ಮನುಷ್ಯನ ಶರೀರ ತುಂಬಾ ಶಕ್ತಿಯುತ ಹಾಗೂ ಹೊರಗಿನ ಜೀವಜಂತುವಿನೊಂದಿಗೆ ಕದನಕ್ಕಿಳಿದು ಶಮನಮಾಡುವ ಸಾಮರ್ಥ್ಯ ಹೊಂದಿದೆ ಅಂತ ಹೇಳಿ, ಶರೀರ ತಡೆದುಕೊಳ್ಳಲಾಗದಷ್ಟು ಅಪಾಯಕ್ಕೀಡುಮಾಡಲು ಬರುವುದಿಲ್ಲ, ತಲೆ ಗಟ್ಟಿ ಇದೆ ಎಂದು ಬಂಡೆಗೆ ಹೊಡೆದು ಕೊಳ್ಳಲಾಗುತ್ತದೆಯೇ? ಈ ಸಮಯದಲ್ಲಿ, ಸೂಕ್ಷ್ಮತೆಯಿಂದ ದೇಹವನ್ನು ಕಾಪಾಡಿ, ಆದಷ್ಟು ವೈರಾಣುವಿನಿಂದ ದೂರವಿದ್ದು, ನಮ್ಮನ್ನು ನಾವು ಕಾಪಾಡಿಕೊಂಡು ಮತ್ತು ವೈದ್ಯಲೋಕಕ್ಕೆ ಹೆಚ್ಚು ಶ್ರಮಕೊಡದೆ ಇರುವುದು ನಮ್ಮೆಲ್ಲರ ಗುರಿಯಾಗಬೇಕು.

**"ಇದು ಹಾದು ಹೋಗುತ್ತದೆ, ಸಂಶಯ ಬೇಡ".**



# ಬಸವನಗುಡಿಯ ಹೃದಯ ಗಾಂಧಿ ಬಜಾರು

**ಶ್ರೀಲಕ್ಷ್ಮಿ** *ಬೆಂಗಳೂರು*

ದೊಡ್ಡ ಬಸವಣ್ಣನ ಗುಡಿಯಿಂದಲೇ ನಾಮಂಕಿತವಾಗಿರುವ ಬಸವನಗುಡಿ ಯಾರಿಗೆ ತಾನೇ ಗೊತ್ತಿಲ್ಲ? ಆಂಗ್ಲ ಬಾಷೆಗೆ ನೇರ ಅನುವಾದ ಮಾಡಬಹುದಾದ ಹೆಸರು 'ಬುಲ್ ಟೆಂಪಲ್'. ಬೆಂಗಳೂರಿನವರಲ್ಲದಿದ್ದರೂ ಈ ಜಾಗದ ಹೆಸರು ಚಿರಪರಿಚಿತವಾಗಿಯೇ ಇರುತ್ತದೆ. ಆರ್. ಕೆ. ನಾರಾಯಣ್ ಅವರ ಸಣ್ಣ ಕಥೆಗಳ ಸಂಕಲನ 'ಮಾಲ್ಗುಡಿ ಡೇಸ್' ಹೆಸರಿನಲ್ಲಿ ಮಲ್ಲೇಶ್ವರಂ ಹಾಗೂ ಬಸವನಗುಡಿಯ ಹೆಸರು ಮಿಶ್ರಿತವಾಗಿರುವುದು ನಮಗೆ ತಿಳಿದಿರುವ ವಿಷಯವೇ ಹೌದು. ಇದು ಬೆಂಗಳೂರಿನ ಅತ್ಯಂತ ಹಳೆಯ ಪ್ರದೇಶಗಳಲ್ಲಿ ಒಂದು. ಬೆಂಗಳೂರಿನ ದಕ್ಷಿಣ ಭಾಗದಲ್ಲಿರುವ ಈ ಜಾಗವನ್ನು ಸಾಂಪ್ರದಾಯಿಕ ಕ್ಷೇತ್ರವೆಂದೇ ಕರೆಯಬಹುದು. ಇನ್ನೊಂದಿಷ್ಟು ಬಸವನಗುಡಿಯ ಬಗ್ಗೆ ತಿಳಿಯುತ್ತಾ ನಂತರ ಗಾಂಧಿ ಬಜಾರಿನ ಕಡೆ ಹೋಗೋಣ.

ಹೆಚ್ಚಾಗಿ ಕನ್ನಡಿಗರೇ ವಾಸಿಸುವ ಈ ಜಾಗದಲ್ಲಿ ಕನ್ನಡತನ ಒಂದಿಷ್ಟು ಉಳಿದು ಕೊಂಡಿದೆ ಎಂದರೆ ತಪ್ಪಾಗಲಾರದು. ಡಿ. ವಿ. ಗುಂಡಪ್ಪ, ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮುಂತಾದ ಹಿರಿಯರು ಇದ್ದ ಜಾಗ ಇದೇ ಬಸವನಗುಡಿ. 560004 ಎಂದು ಬರೆಯುವ ಪಿನ್ ಕೋಡ್ ನಲ್ಲಿಯೂ ಸಹ ಒಂದು ರೀತಿಯ ಎಮೋಷನ್ ಅಡಗಿದೆ. ಬೆಂಗಳೂರಿನಲ್ಲಿ ಕೆಲವು ಪ್ರಸಿದ್ಧ ಶಿಕ್ಷಣ ಸಂಸ್ಥೆಗಳು ಬಸವನಗುಡಿಯಲ್ಲಿ ಇರುವುದು ಇಲ್ಲಿಗೆ ಇನ್ನಷ್ಟು ಹಿರಿಮೆ ತಂದಿದೆ. ನ್ಯಾಷನಲ್ ಕಾಲೇಜು, ವಿಜಯಾ ಕಾಲೇಜು, ಬಿ. ಎಂ. ಎಸ್ ತಾಂತ್ರಿಕ ಮಹಾವಿದ್ಯಾಲಯ, ಆಚಾರ್ಯ ಪಾಠ ಶಾಲೆ ಹೀಗೆ ಇನ್ನು ಹಲವು ಶಿಕ್ಷಣ ಸಂಸ್ಥೆಗಳು ಈ ಜಾಗದಲ್ಲಿದೆ.

ಸುಮಾರು ವರ್ಷಗಳ ಹಿಂದೆ ಇದೇ ಬಸವನಗುಡಿ ಇರುವ ಸ್ಥಳ ಸುಂಕೇನ ಹಳ್ಳಿ ಎಂದು ಹೆಸರಾಗಿತ್ತು. ರೈತಾಪಿ ವರ್ಗದ ಜನ ಇಲ್ಲಿ ವಾಸವಿದ್ದರಂತೆ ಹಾಗೂ ಅವರುಗಳು ತಮ್ಮ ಹೊಲಗಳಲ್ಲಿ ಪ್ರಮುಖವಾಗಿ ಕಡಲೆಕಾಯಿಯನ್ನು ಬೆಳೆಯುತ್ತಿದ್ದರಂತೆ. ಕಡಲೆಕಾಯಿಯ ರಾಶಿಯನ್ನು ಸದಾ ಗೂಳಿಯೊಂದು ರಾತ್ರಿಯ ವೇಳೆ ಬಂದು ತಿಂದು ಹೋಗುತ್ತಿತ್ತಂತೆ. ಬಸವನ ಕಾಟ ತಾಳಲಾರದೆ ಆ ರೈತರು ಒಂದು ರಾತ್ರಿಯಿಡೀ ಕಾದಿದ್ದು, ಆ ಬಸವನನ್ನು ಹೊಡೆಯಲು ಹಿಂಬಾಲಿಸಿಕೊಂಡು ಹೋದಾಗ, ಬಸವ ತಪ್ಪಿಸಿಕೊಳ್ಳಲೆಂದು ಓಡಿಬಂದು ಗುಡ್ಡ ಏರಿ ಕಲ್ಲಾದನಂತೆ. ಇದನ್ನು ನೋಡಿದ ಆ ಜನರು ಇದು ಸಾಮಾನ್ಯ ಗೂಳಿ ಅಲ್ಲ. ಶಿವನ ವಾಹನ ನಂದಿಯೇ ಎಂದು ನಂಬಿ ಅಂದಿನಿಂದ ಬೆಂಗಳೂರಿನ ಸುತ್ತ ಮುತ್ತ ಹಳ್ಳಿಗಳ ರೈತರು ಬಂದು ತಪ್ಪೊಪ್ಪಿಗೆಯಾಗಿ ಪ್ರತಿವರ್ಷ ಕಡಲೆಕಾಯಿ ಬೆಳೆ ಬಂದ ತಕ್ಷಣ ತಮ್ಮ ಮೊದಲ ಬೆಳೆಯನ್ನು ಈ ಬಸವನಿಗೆ ತಂದು ಒಪ್ಪಿಸಿ, ನೈವೇದ್ಯ ಮಾಡಿ ನಂತರ ಮಾರಾಟ ಮಾಡುತ್ತಾರೆ. ಪ್ರತಿ ವರ್ಷ, ಕಾರ್ತಿಕ ಮಾಸದ ಕೊನೆಯ ಸೋಮವಾರದಂದು ಇಲ್ಲಿ 'ಕಡಲೆಕಾಯಿ ಪರಿಷೆ'. ಈ ಪರಿಷೆಗೆ ಜನರು ಬಂದು ಕಡಲೆಕಾಯಿ ತಿಂದರೆ, ನಂದಿ ತೃಪ್ತನಾಗುತ್ತಾನೆ ಎಂಬುದು ಹಲವರ ನಂಬಿಕೆ ಹಾಗೂ ಭಕ್ತರು ತಿಂದು ಎಸೆದ ಸಿಪ್ಪೆಯನ್ನು ರಾತ್ರಿಯ ವೇಳೆ ಕಲ್ಲು ಬಸವ ನಿಜರೂಪ ತಾಳಿ ಆ ಸಿಪ್ಪೆಯನ್ನು ತಿನ್ನುತ್ತದೆ ಎಂಬ ನಂಬಿಕೆಯೂ ಸಹ ಇದೆ. ಇದನ್ನೇ ಬಸವನಗುಡಿಯ ಐತಿಹಾಸ ಪ್ರಸಿದ್ಧ ಕಡಲೆಕಾಯಿ ಪರಿಷೆ ಎಂದು ಹೇಳುವುದು.

ಬಸವನಗುಡಿಯಲ್ಲಿ ನಡೆಯುವ ಬೆಂಗಳೂರು ಗಣೇಶ ಉತ್ಸವವು ಸಹ ಬಹಳ ಪ್ರಸಿದ್ಧವೇ. ಇಲ್ಲಿಯ ಪ್ರಮುಖ ಪ್ರದೇಶಗಳು/ಕಟ್ಟಡಗಳು ದೊಡ್ಡ ಗಣಪತಿ ದೇವಸ್ಥಾನ, ಬ್ಯೂಗಲ್ ರಾಕ್, ರಾಮಕೃಷ್ಣ ಆಶ್ರಮ, ಗೋಖಲೆ ಇನ್ಸ್ಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್, ಸರ್. ಎಂ.ಎನ್. ಕೃಷ್ಣ ರಾವ್ ಪಾರ್ಕ್, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್ ಹಾಗೂ ಇನ್ನು ಹಲವು ಜಾಗಗಳು. ಕೆಲವು ಹಳೆಯ ಕಾಲದ ಬೆಂಗಳೂರಿನ ಮನೆಗಳು ಈ ಬಸವನಗುಡಿ ಪ್ರದೇಶದಲ್ಲಿ ಕಾಣಸಿಗುತ್ತವೆ

.



ಬಸವನಗುಡಿಯ ಪ್ರಮುಖ ವ್ಯಾಪಾರ ಪ್ರದೇಶವೆಂದರೆ ಗಾಂಧಿ ಬಜಾರ್. ಈ ಜಾಗವನ್ನು ನೋಡಿ, ಇಲ್ಲಿ ಓಡಾಡಿರುವವರಿಗೆ ಈ ಜಾಗದ ಸೊಗಡು ತಿಳಿದೇ ಇರುತ್ತದೆ. ರಾಜಸ್ಥಾನ ಎಂದೊಡನೆ ಮರುಭೂಮಿ ಚಿತ್ರಣ ನಮ್ಮ ಮುಂದೆ ಬರುವ ಹಾಗೆ, ಗಾಂಧಿ ಬಜಾರು ಎಂದೊಡನೆ ವರ್ಣಮಯ, ಜೀವಂತಮಯ ಬಜಾರಿನ ಚಿತ್ರಣವೇ ಕಣ್ಣು ಕಟ್ಟುತ್ತದೆ. ಬಗೆ ಬಗೆಯ ಹೂವು, ಹಣ್ಣು ತರಕಾರಿಗಳು ವರ್ಷದ ಮುನ್ನೂರು ಅರವತ್ತೈದು ದಿನಗಳು ರಸ್ತೆಯ ಎರಡು ಬದಿಯಲ್ಲೂ ಇಟ್ಟುಕೊಂಡು ಮಾರುತ್ತಿರುತ್ತಾರೆ, ಬಜಾರಿನ ಕಳೆ ಕಟ್ಟೋದೇ ಇದರಿಂದ. ಸ್ಥಳೀಯರಿಗೆ ಈ ಜಾಗವು ಒಂದು ರೀತಿಯ 'ಒನ್ ಸ್ಟಾಪ್ ಡೆಸ್ಟಿನೇಶನ್' ಇದ್ದಹಾಗೆ. ಅಗತ್ಯವಿರುವ ಸಾಮಾನುಗಳೆಲ್ಲ ಒಂದೇ ಜಾಗದಲ್ಲಿ ಕೊಂಡು ಹೋಗಬಹುದು. ಪೂಜೆ, ಸಮಾರಂಭಗಳಿಗೆ ಬೇಕಿರುವ ಸಾಮಗ್ರಿಗಳು ಸಿಗುವ ಗ್ರಂಧಿಗೆ ಅಂಗಡಿಗಳಿರಬಹುದು, ಪುಸ್ತಕ ಪ್ರಿಯರಿಗೆ

ಪುಸ್ತಕದ ಅಂಗಡಿಗಳು, ಹಬ್ಬ ಅಥವ ಸಮಾರಂಭಕ್ಕೆ ವೈವಿಧ್ಯಮಯ ಉಡುಪುಗಳು, ಸೀರೆ ಪಂಚೆಗಳಿಗೆ ಒಳ್ಳೆಯ ಬಟ್ಟೆ ಮಳಿಗೆಗಳು, ಮಹಿಳೆಯರ ಅಲಂಕಾರಿಕ ವಸ್ತುಗಳಿಗೆ ಬ್ಯಾಂಗಲ್ ಶಾಪ್ಗಳು, ದಿನಸಿ ಸಾಮಾನಿನ ಅಂಗಡಿಗಳು ಹೀಗೆ ಯಾವುದೊಂದು ವಸ್ತುವೂ ಸಿಗುವುದಿಲ್ಲವೆಂದು ಹೇಳಲು ಸಾಧ್ಯವಿಲ್ಲ.



ಆಗಿನ, ಅಂದರೆ ಸುಮಾರು ಐವತ್ತು-ಅರವತ್ತರ ದಶಕದಲ್ಲಿ ಗಾಂಧಿ ಬಜಾರಿನ ಚಿತ್ರಣವನ್ನು ಹಿರಿಯ ಸಾಹಿತಿ ಕೆ. ಎಸ್. ನಿಸಾರ್ ಅಹಮದ್ ಅವರು ತಮ್ಮ 'ಮನಸ್ಸು ಗಾಂಧಿ ಬಜಾರು' ಎಂಬ ಕವನ ಸಂಕಲನದಲ್ಲಿ ವರ್ಣಿಸಿದ್ದಾರೆ. ವಿಶಾಲವಾಗಿ ಬೆಳೆದು ನಿಂತ ಮರಗಳು, ಹಿರಿಯ ನಾಗರೀಕರು ಸಂಜೆಯ ವೇಳೆ ಅಲ್ಲಿ ಸೇರಿ ಮಾತನಾಡುತ್ತಿದುದು ಇವೆಲ್ಲವನ್ನು ಅವರ ಕವನದಲ್ಲಿ ಓದಬಹುದು. ಗಾಂಧಿ ಬಜಾರಿನ ಎರಡು ಮೂರು ಕಿಲೋಮೀಟರ್ ವ್ಯಾಪ್ತಿಯಲ್ಲಿ ಶಂಕರಪುರದ ಶಂಕರಮಠ, ಬ್ಯೂಗಲ್ ರಾಕ್ ಉದ್ಯಾನವನ, ರಾಮಕೃಷ್ಣಾಶ್ರಮ, ಕೃಷ್ಣ ರಾವ್ ಉದ್ಯಾನವನ, ಲಾಲ್ ಬಾಗ್ ಇವೆಲ್ಲವೂ ಇದೆ. ಇನ್ನು ತಿಂಡಿ ಪ್ರಿಯರಿಗೆ ಹೇಳಿ ಮಾಡಿಸಿದ ಜಾಗ. ವಿದ್ಯಾರ್ಥಿ ಭವನ್ ನ ಮಸಾಲೆ ದೋಸೆ ವಿಶ್ವ ವಿಖ್ಯಾತ ಎಂದೇ ಹೇಳಬಹುದು,



ಉಡುಪಿ ಕೃಷ್ಣ ಭವನ್, ಮಹಾಲಕ್ಷ್ಮಿ ಟಿಫನ್ ರೂಮ್, ಕುರುಕಲು ತಿಂಡಿಗೆ ಸುಬ್ಬಮ್ಮನ ಅಂಗಡಿ, ಬೇಕರಿ ಪದಾರ್ಥಗಳಿಗೆ ಶ್ರೀನಿವಾಸ ಬೇಕರಿ ಹೀಗೆ ಇಲ್ಲಿಗೆ ಬಂದವರು ಯಾವುದಾದರೊಂದು ತಿಂಡಿಯನ್ನು ಸವಿಯದೇ ಹೋಗಲಾರರು. ಹಬ್ಬ ಹರಿದಿನಗಳ ಮುನ್ನಾ ದಿನವಂತೂ ಗಾಂಧಿ ಬಜಾರ್ ಮಧುಮಗಳು ಸಿಂಗಾರಗೊಂಡಂತೆ ಶೋಭಿಸುತ್ತಿರುತ್ತದೆ. ಎಷ್ಟೇ ಬ್ರ್ಯಾಂಡ್ ಹೆಸರು ಹಿಡಿದು ಮಾಲ್ಗಳಿಗೆ ಹೋದರೂ ಸಹ ನಮ್ಮ ದೇಸಿಯ ಉತ್ಪನ್ನಗಳಿಗೆ ಇಂತಹ ಬಜಾರ್ ಬೇಕಾಗುತ್ತದೆ. ಉದಾಹರಣೆಗೆ ಗೌರಿ ಹಬ್ಬದ ಮರದ ಬಾಗಿನ, ಸಂಕ್ರಾಂತಿಯ ಎಳ್ಳಿನ ಸಾಮಾನು, ದಸರಾ ಹಬ್ಬದ ಮಣ್ಣಿನ ಗೊಂಬೆಗಳು, ದೀಪಾವಳಿಯಲ್ಲಿ ಹಣತೆ ದೀಪಗಳು ಎಲ್ಲವೂ ಇಲ್ಲಿ ಸಿಗುವುದು. ಮದುವೆಯ ಜವಳಿಗೂ ಇಲ್ಲಿಗೆ ಅನೇಕರು ಬರುತ್ತಾರೆ. ರೇಷ್ಮೆ ಸೀರೆಗಳ ಮಳಿಗೆಗಳು ಬಹಳಷ್ಟು ಇದೆ. ಚಿನ್ನ-ಬೆಳ್ಳಿ ಅಂಗಡಿಗಳು ಸಹ ಇದೆ. ಇತ್ತೀಚಿಗೆ ವಾಣಿಜ್ಯೀಕರಣ ಹೆಚ್ಚಾದಂತೆಲ್ಲಾ, ನಮ್ಮ ದೇಸಿಯ ಸೊಗಡು ಹಾಳಾಗುತ್ತಿದೆಯೇನೋ ಎಂಬ ಭಯ ಕಾಡುತ್ತದೆ. ನಾಗರಿಕತೆ ಬೆಳೆದಂತೆಲ್ಲಾ ಮುಂದಿನ ಪೀಳಿಗೆಯವರಿಗೆ ಬಜಾರ್ ಚಿತ್ರಣ ನೋಡಲು ಸಿಗುವುದೋ ಇಲ್ಲವೋ ಗೊತ್ತಿಲ್ಲ.



ನಾನು ಮೂಲತಃ ಬೆಂಗಳೂರಿನ ದಕ್ಷಿಣ ಭಾಗದಲ್ಲೇ ಹುಟ್ಟಿ, ಬೆಳೆದು, ವಾಸಿಸುತ್ತಿರುವುದರಿಂದ ಈ ಜಾಗ ಮನಸ್ಸಿಗೆ ತುಂಬಾ ಹತ್ತಿರ. ಬಸವನಗುಡಿ ನ್ಯಾಷನಲ್ ಕಾಲೇಜಿಗೆ ಹೋಗುತ್ತಿದ್ದಾಗ ಪ್ರತಿ ನಿತ್ಯ ಬಸ್ಸಿನಲ್ಲಿ ಜಯನಗರದಿಂದ ಹೊರಟು ಗಾಂಧಿ ಬಜಾರ್ ಸ್ಟಾಪ್ ನಲ್ಲಿ ಇಳಿದು, ನಾರ್ತ್ ರೋಡಿನಲ್ಲಿರುವ ಕಾಲೇಜಿನವರೆಗೂ ಡಿ. ವಿ. ಜಿ ರಸ್ತೆಯಲ್ಲಿ ನಡೆದು ಹೋಗುತ್ತಿದ್ದೆ.

ಈ ಲೇಖನ ನಿಮ್ಮನ್ನು ಬಸವನಗುಡಿ ಏರಿಯಾದಲ್ಲಿ ಒಂದು ರೌಂಡ್ ಹಾಕಿಸಿದೆ ಎಂದು ಭಾವಿಸುತ್ತೇನೆ.





# ದಾಸರು ಹಾಗೂ ದಾಸ ಸಾಹಿತ್ಯ

**ರಾಘವೇಂದ್ರ,** *ಬ್ರಿಸ್ಬೇನ್*

ಶ್ರೀ ಸಾಮಾನ್ಯನಿಗೂ ತಾರತಮ್ಯವಿಲ್ಲದೇ ಭಗವದ್ಭಕ್ತಿಯ ರಸದೌತಣ, ಭಗವದಾಶ್ರಯದ ಶಾಂತಿ, ಹೃದಯಕ್ಕೆ ಸಂತೃಪ್ತಿ, ಮನಸ್ಸಿಗೆ ಆನಂದ, ದೈವೀ ಸ್ಪರ್ಶ, ಭಗವತ್ ಸಾಕ್ಷಾತ್ಕಾರ, ಆನಂದಾಶ್ರುವಿನ ಆರ್ದ್ರತೆ, ಹೃದಯ ತುಂಬಿಸಿ ಬಂದ ಉದ್ಗಾರದ ಕೀರ್ತನ, ಸಂತೋಷದ ನರ್ತನ - ಇವುಗಳನ್ನು ಮನೆ ಮನೆಗೂ, ಮನ ಮನಕ್ಕೂ ಭಕ್ತಿ ಪಥದ ಸಂತರು ತೋರಿದರು. ಭಗವತ್ ಪ್ರೇಮವೆಂಬ ಸೂತ್ರದಿಂದ ಹೃದಯಗಳನ್ನು ಪೋಣಿಸಿ, ಮಾನವೀಯತೆಯಿಂದ ಮನಸ್ಸುಗಳನ್ನು ಜೋಡಿಸಿ, ದಿವ್ಯ ಬೆಳಕನ್ನು, ಸತ್ಯಾನಂದದ ಬಾಳ್ವೆಯನ್ನು, ವ್ಯಷ್ಟಿಯಲ್ಲಿಯೂ ಸಮಷ್ಟಿಯಲ್ಲಿಯೂ ಜೀವಿಸಿ ಸುಲಭ ಪ್ರಾಯೋಗಿಕವಾಗಿ ತೋರಿಸಿ ಭಕ್ತರೇ ದಾಸರೆಂಬ ಹೆಸರಿನಲ್ಲಿ ಕರೆಯಲ್ಪಟ್ಟರು.

ಸೃಷ್ಟಿಕರ್ತ ಬ್ರಹ್ಮನ ಮಾನಸಪುತ್ರರಾದ ನಾರದರಿಂದ ಭಕ್ತಿಪಥವು ಸೂತ್ರಗಳ ಸ್ವರೂಪದೊಂದಿಗೆ ಬೆಳಕಿಗೆ ಬಂದಿತು. ಶ್ರೀಸಾಮಾನ್ಯನಿಗೆ ಊಹಿಸಲೂ ಆಗದ ಸಂಕಷ್ಟಗಳನ್ನು ಚಿಕ್ಕಂದಿನಿಂದಲೂ ಎದುರಿಸಿ ಭಕ್ತಿಯ ಮಹಿಮೆಯನ್ನು ಎತ್ತಿಹಿಡಿದು ಜನಮಾನಸದಲ್ಲಿ ಭಕ್ತಿಯ ಶಕ್ತಿಯನ್ನು ಸ್ಥಿರವಾಗಿ ನೆಟ್ಟಿದ್ದು ಪ್ರಹ್ಲಾದರಾಯರು. ಭಗವದ್ದಾಸ್ಯವನ್ನು ಮೆರೆದು 'ರಾಮ' ನಾಮಸ್ಮರಣೆಯ ಹಿರಿಮೆಯನ್ನು ತೋರಿದವರು ಹನುಮಾನ್ ದೇವರು. ಬೀದಿ ಬೀದಿಯಲ್ಲಿಯೂ 'ಕೃಷ್ಣ' ನಾಮ ಸಂಕೀರ್ತನ, ಭಜನೆ, ನರ್ತನವನ್ನು ತಂದು ಭೇದಭಾವವಿಲ್ಲದೇ ಸರ್ವರಿಗೂ ಭಗವತ್ ತಂಪು ಪರಿಚಯಿಸಿದ್ದು ಶ್ರೀ ಚೈತನ್ಯ ಮಹಾಪ್ರಭುಗಳು.

ಹೀಗೇ ಮುಂದುವರೆದು ಶ್ರೀಪಾದರಾಜರು, ವ್ಯಾಸರಾಜರು, ಪುರಂದರದಾಸರು, ಕನಕದಾಸರು, ರಾಘವೇಂದ್ರ ಸ್ವಾಮಿಗಳು, ಹರಪ್ಪನಹಳ್ಳಿ ಭೀಮವ್ವನವರು, ಹೆಳವನಕಟ್ಟೆ ಗಿರಿಯಮ್ಮನವರು ಮತ್ತು ಹಲವಾರು ದಾಸರು ಕನ್ನಡಿಗರೊಂದಿಗೆ ಬಾಳಾಟವನ್ನು ನಡೆಸಿ, ಕನ್ನಡಿಗರ ಮನಸ್ಸಿನಲ್ಲಿ ಭಕ್ತಿಯ ಉಜ್ವಲ ದೀಪವನ್ನು ಸ್ಥಾಯಿಯಾಗಿ ಉಳಿಸಿ, ಬೆಳೆಸಿ, ಕನ್ನಡ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸಿ, ಅದರಿಂದ ಶತಶತಮಾನಗಳಾದರೂ ಭಕ್ತಿಯ ಕಂಪನ್ನು ಹೃದಯಗಳಿಗೆ ಪಸರಿಸುತ್ತಲೇ ಬಂದಿದ್ದಾರೆ.

ಸೃಷ್ಟಿಗೆ ಮೂಲ ನಾದ. ಶಬ್ದದಿಂದ ಸೃಷ್ಟಿ ಪ್ರಕಟ. ಸೃಷ್ಟಿಯೆಂದರೆ ಶಬ್ದವೇ. ನಾದ ಹಾಗೂ ಶಬ್ದಗಳನ್ನು ಬಳಸಿ, ಭಕ್ತಿಯನ್ನು ಬೆಳೆಸಿ, ಹೃದಯವನ್ನು ಅರಳಿಸಿ, ಭಗವಂತನನ್ನು ಬರಮಾಡಿಕೊಂಡು ಭಗವಂತನಲ್ಲಿ ಐಕ್ಯವಾಗುವುದೇ ಭಕ್ತಿಯೋಗವು. ಅವರ ಶುದ್ಧಾಂತರಂಗ, ಸುಶಿಕ್ಷಣ ಹಾಗೂ ತರಬೇತಿಯ ದೆಸೆಯಿಂದ, ಭಗವದ್ಭಕ್ತಿಯ ಆಳದಲ್ಲಿ ಮುಳುಗಿದ್ದುದರ ವತಿಯಿಂದ, ಅವರ ಹೃದಯದಿಂದ ನೈಜವಾಗಿ ಹೊರಹೊಮ್ಮಿದ ಉದ್ಗಾರಗಳೇ, ಆಕ್ರೋಶಗಳೇ, ಅಂತರಾಳದ ಕೂಗುಗಳೇ ಅವರ ಸಾಹಿತ್ಯ, ದಾಸ ಸಾಹಿತ್ಯವಾಗಿ ಸ್ವರೂಪ ತಾಳಿತು.

ಸಾಮಾನ್ಯವಾಗಿ 'ದಾಸ', 'ದಾಸ್ಯ' ಪದಗಳಿಗೆ ನಿರ್ಗತಿಕನು, ನಿಶ್ಶಕ್ತನು ಎಂಬ ಅರ್ಥಗಳನ್ನು ಹೊರಿಸಿ ತಿಳಿದುಕೊಳ್ಳುತ್ತಿದ್ದಾರೆ. ಇದು ನನ್ನ ವೈಯಕ್ತಿಕ ಅಭಿಪ್ರಾಯವಲ್ಲ ಮತ್ತು ಸರಿಯಲ್ಲವೂ ಕೂಡ. ಪ್ರಹ್ಲಾದರಾಯರನ್ನು ನೆನೆದರೆ, ವೀರ ಹನುಮನ ನೆನೆದರೆ, ನಿರ್ಗತಿಕತೆ, ನಿಶ್ಶಕ್ತತೆ ತಿಳಿಯುತ್ತೇವೆಯೇ? ಸಾಧ್ಯವೇ ಇಲ್ಲ. ಪುರಂದರದಾಸರು ನವಕೋಟಿ ನಾರಾಯಣರಾಗಿದ್ದವರು, ನಿರ್ಗತಿಕರಾಗಿದ್ದವರಲ್ಲ. ಅವರು ಹೇಳಿದರು - "ದಾಸನ ಮಾಡಿಕೋ ಎನ್ನ, ಸ್ವಾಮೀ". ಕನಕದಾಸರು ತಿಮ್ಮಪ್ಪ ಯೋಧರಾಗಿದ್ದವರು, ನಿಶ್ಶಕ್ತರಾಗಿದ್ದವರಲ್ಲ. ಅವರು ಹೇಳಿದರು - "ದಾಸನಾಗು ವಿಶೇಷನಾಗು". ಅಂದರೇ ಭಗವದ್ದಾಸ್ಯವು ವಿಶೇಷವಾದದ್ದು. 'ದಾಸ್ಯ' ಎಂಬ ಪದದಲ್ಲಿ ನಾವು ಗ್ರಹಿಸಬೇಕಾದ ಅರ್ಥವೆಂದರೆ - ದೇವರಲ್ಲಿನ ನಿಷ್ಠೆ. ನಿಷ್ಠೆಯೆಂದರೆ ಮನಸ್ಸು ಸದಾ ಆತನ ಕಡೆಯೇ ತಿರುಗಿರುವುದು. ಆತನಲ್ಲಿಯೇ ಐಕ್ಯತೆಗಾಗಿ ಪರಿತಪಿಸುವಿಕೆ, ಆತನವನು ನಾನು ಎಂಬ ದೃಢ ನಿಶ್ಚಯ, ಆತನ ಆಜ್ಞೆಯನ್ನು ನಡೆಸುವುದೇ ನಮ್ಮ ಕರ್ತವ್ಯ ಹಾಗೂ ಸೇವೆ ಎಂಬ ಅರಿವು, ಸರ್ವಶಕ್ತನಾದ ಆತ ನನ್ನೊಟ್ಟಿಗಿದ್ದಾನೆ ಎಂಬ ನಿರ್ಭಯತ್ವ, ಮನೋಸ್ಥಿರತೆ, ಧೈರ್ಯ - ಈ ಅರ್ಥಗಳು ಅಲ್ಲಿ ನನಗೆ ತೋರುತ್ತವೆ. ಇಲ್ಲಿ ಪುರಂದರ ದಾಸರ ಧೈರ್ಯ ಸೂಕ್ತಿ "ಬಂದದ್ದೆಲ್ಲಾ ಬರಲಿ, ಗೋವಿಂದನ ದಯೆಯೊಂದಿರಲಿ", ಮನೋಸ್ಥಿರತೆಯ ಸೂಕ್ತಿಗಳಾದ: "ಮತ್ಸರಿಸುವರೆಲ್ಲ ಕೂಡಿ ಮಾಡುವುದೇನು, ಅಚ್ಯುತ ನಿನದೊಂದು ದಯೆಯಿರಲು", "ಧಾಳಿಲಿ ಕುದುರೆಯು ವೈಯಾರದಿ ಕುಣಿಯಲು ಧೂಳು ರವಿಯ ಮೇಲೆ ಮುಸುಕುವುದೇ!", "ಗಾಳಿಗೆ ಗಿರಿಯು ಅಲ್ಲಾಡಬಲ್ಲುದೇ ರಂಗ" - ಇವುಗಳನ್ನು ಸ್ಮರಿಸಬಹುದು.

ಈ ವಿಶೇಷ ದಾಸನ ಗುರಿಯಾದರೂ ಏನು? ದೇವರಲ್ಲಿ ಐಕ್ಯತೆಯೇ ಗುರಿ. ಪರಮ ಗುರಿಯಿಲ್ಲದ ನಮ್ಮ ಬದುಕುಗಳಿಗೆ ಆ ದೇವರಲ್ಲಿನ ಐಕ್ಯತೆಯ ಗುರಿಯನ್ನೇ ದಾಸ ಸಾಹಿತ್ಯವು ನಮಗೆ ಪರಿಚಯಿಸಿ, ದಿಕ್ಸೂಚಿಯಾಗಿ ಚಿತ್ತದಲ್ಲಿ ಇಣುಕಿ, ಸ್ಮೃತಿಯಲ್ಲಿ ನಿಲ್ಲುತ್ತದೆ. ಕೆಲವು ದಾಸ ಸಾಹಿತ್ಯದ ಸೂಕ್ತಿಗಳು ಇಲ್ಲಿದೆ.

"ಕೃಷ್ಣಾ ನೀ ಬೇಗನೇ ಬಾರೋ, ಮುಖವನ್ನು ತೋರೋ.." - ಶ್ರೀ ವ್ಯಾಸರಾಜರು.

"ಇಂದು ಎನಗೆ ಗೋವಿಂದ, ನಿನ್ನಯ ಪಾದಾರವಿಂದವ ತೋರೋ ಮುಕುಂದನೇ" - ರಾಘವೇಂದ್ರ ಸ್ವಾಮಿಗಳು.

"ಬಾಗಿಲನು ತೆರೆದು ಸೇವೆಯನು ಕೊಡು ಹರಿಯೇ, ಕೂಗಿದರೂ ಧ್ವನಿ ಕೇಳಲಿಲ್ಲವೇ ನರಹರಿಯೇ" - ಕನಕದಾಸರು.

"ಸದಾ ಎನ್ನ ಹೃದಯದಲ್ಲಿ ವಾಸ ಮಾಡೊ ಶ್ರೀ ಹರಿ" - ವಿಜಯದಾಸರು.

## ನೀವು ಈ ತಿಂಡಿಗಳನ್ನು ಗುರುತಿಸಿದ್ದರೆ, ಚಪ್ಪಾಳೆ!!!

೧. ವಾರದಿಂದ ಶೀತಲೀಕರಣಗೊಂಡು ಫ್ರಿಡ್ಜ್ ತೆರೆದಾಗಲೆಲ್ಲ ದೀನಮುಖಭಾವ ಬೀರುತ್ತಿದ್ದ ಬಾಳೆಕಾಯಿ ದೋಸೆ ಹಿಟ್ಟಿಗೆ ಇಂದು ಮುಕ್ತಿ!!

೨. ನೀರು ದೋಸೆಯ ಹಿಟ್ಟು ವಾರದಿಂದ ಫ್ರಿಡ್ಜ್ ನೊಳಗಿದ್ದು ಘಮಘಮಿಸುವ ವಡೆಯಾಗಿ ರೂಪಾಂತರ ಹೊಂದಿದ ಕತೆ



(.. ಹಿಂದಿನ ಪುಟದಿಂದ)

ಏತಕ್ಕಾಗಿ ಈ ಗುರಿ? ದೇವನನ್ನು ಪಡೆದು ಆಗಬೇಕಾದುದಾದರೂ ಏನು? ಇದಕ್ಕೆ ಕನಕದಾಸರು ಹೇಳುತ್ತಾರೆ: "ನಾರಾಯಣ ಅಚ್ಯುತ ಅನಂತಾದಿ ಕೇಶವನ ಸಾರಾಮೃತವನುಂಡು ಸುಖಿಸೋ ಲಂಡ ಜೀವವೇ ಎಲೋ ಭಂಡ ಜೀವವೇ". ಆತನನ್ನು ಪಡೆಯುವುದೇ ಪರಮ ಸುಖ, ಅದೇ ಅಮೃತತ್ವವು. ಅದಿಲ್ಲದಿರುವುದೇ ಲಂಡ ಹಾಗೂ ಭಂಡ ಜೀವನವೆಂದು ನಿರ್ದಾಕ್ಷಿಣ್ಯವಾಗಿ ನುಡಿದಿದ್ದಾರೆ. ಈ ಗುರಿಯನ್ನು ತಲುಪುವುದಾದರೂ ಹೇಗೆ? ಪರಮ ಸುಖವನ್ನು, ಅಮೃತತತ್ವವನ್ನು ಹೊಂದುವುದಾದರೂ ಹೇಗೆ? ದಾಸ ಸಾಹಿತ್ಯದ ರತ್ನಗಳನ್ನು ಶೋಧಿಸಿ ನೋಡೋಣ.

“ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ"

"ಅಂಬಿಗ ನಾ ನಿನ್ನ ನಂಬಿದೆ, ಜಗದಂಬಾರಮಣ ನಿನ್ನ ನಂಬಿದೆ"

"ನೀನ್ಯಾಕೊ ನಿನ್ನ ಹಂಗ್ಯಾಕೊ, ನಿನ್ನ ನಾಮದ ಬಲ ಒಂದಿದ್ದರೇ ಸಾಕೋ",

"ನಿನ್ನ ನಾಮಕೆ ಸರಿ ಕಾಣೆನು ಜಗದೊಳು"

"ಕರುಣಿಸೋ ರಂಗ, ಕರುಣಿಸೋ, ಹಗಲು ಇರಳು ನಿನ್ನ ಸ್ಮರಣೆ ಮರೆಯದಂತೆ ಕರುಣಿಸೋ"

"ಇಂದು ಹರಿಯ ಧ್ಯಾನವನ್ನು ಮಾಡಿ ವಿವೇಕದಿ ಮುಕುಂದನಿಂದ ಮುಕ್ತಿಯನ್ನು ಬೇಡುಕಂಡ್ಯ ನೀ ನೋಡುಕಂಡ್ಯ"

"ಕೃಷ್ಣನ ಎಲ್ಲಿ ನೋಡಿದಿರಿ? ... ಶ್ರೀ ಗುರೂಕ್ತ ಸದಾ ಸುಮಂಗಳ ಯೋಗ ಯೋಗದಲಿ!, ಭಾಗವತರು ಬಾಗಿ ಹಾಡುವ ರಾಗ ರಾಗದಲಿ!, ನಾಚದೆ ಮಾಧವ ಎಂಬ ಭಕ್ತರ ವಾಚಕಂಗಳಲಿ"

"ನಂಬಿ ಕೆಟ್ಟವರಿಲ್ಲವೊ"

"ನಿನ್ನ ನಾನು ಬಿಡುವನಲ್ಲ ಎನ್ನ ನೀನು ಬಿಡಲು ಸಲ್ಲ"

"ಭಕ್ತಿ ಬೇಕು ವಿರಕ್ತಿ ಬೇಕು ಸರ್ವಶಕ್ತಿ ಬೇಕು ಮುಕ್ತಿಯ ಬಯಸುವಗೆ"

"ಇರಿಸು ಭಕ್ತರೊಳಗೆ ಪರಮಪುರುಷ ಶ್ರೀ ಹರಿ"

ಸಂಗ್ರಹಿಸಿ ಹೇಳುವುದಾದರೆ - ಗುರುವಿನ ಆಶ್ರಯ ಸಿಗಬೇಕು, ದೃಢವಾದ ನಂಬಿಕೆ ಅಥವಾ ಶ್ರದ್ಧೆ ಬೆಳೆಸಿಕೊಳ್ಳಬೇಕು, ದೇವರಿಗಾಗಿ ಹಂಬಲವಿರಬೇಕು, ಪ್ರೇಮವಿರಬೇಕು, ಅಂತರಾಳದಿಂದ ಆತನಲ್ಲಿ ಐಕ್ಯವಾಗಲು ಕೂಗು ಇರಬೇಕು, ಸತ್ಸಂಗದಲ್ಲಿ ಇರಬೇಕು, ಆತನ ನಾಮಸ್ಮರಣೆ ಹಾಗೂ ಗುರುವಿನ ಮಾರ್ಗದರ್ಶನದಲ್ಲಿನ ಧ್ಯಾನಯೋಗದ ಸಹಾಯದಿಂದ ದೇವರನ್ನು ಹೊಂದಬಹುದು.

ಹೀಗೆ ದಾಸರು ತಮ್ಮ ಹೃದಯಸಿರಿಯನ್ನು ಸಾಹಿತ್ಯದ ಮೂಲಕ ಧಾರೆಯೆರೆದು, ನಮ್ಮೆಲ್ಲರಿಗೆ ಜೀವನದ ಗುರಿಯೇನು? ಅದನ್ನು ಪಡೆಯುವುದು ಹೇಗೆ? ಎಂಬ ಭಗವದ್ ಭಾಸವನ್ನು ನಮ್ಮಲ್ಲಿ ಉದಯಿಸಿ, ಸರಳ ಭಾವದ ಹಾಡಿನ ಮುಖೇನ ನಮ್ಮ ಚಿತ್ತದಲ್ಲಿ ಭಗವತ್ ಪ್ರೇಮದ ಬೀಜವನ್ನು ಬಿತ್ತಿರುತ್ತಾರೆ. ನಾವುಗಳು ಭಕ್ತಿ ಕೀರ್ತನೆಗಳಿಂದ ಅದರ ಮೊಳಕೆಯೊಡಿಸಿ, ವಿನಮ್ರರಾಗಿ ಗುರುವಿನಾಶ್ರಯವನ್ನು ಪಡೆದು, ಪ್ರೇಮದಿಂದ, ಭಗವದ್ಧ್ಯಾನದಿಂದ, ಭಗವಂತನ ನಾಮಸ್ಮರಣೆಯಿಂದ, ಭಗವಂತನನ್ನು ಹೊಂದಿ ಭಾಗವತರಾಗಿ ಸಾರ್ಥಕವಾಗಿ ಬಾಳೋಣ.

“ಇಟ್ಟಾಂಗೆ ಇರುವೆನೊ ಹರಿಯೇ, ಎನ್ನ ದೊರೆಯೇ" - ಶ್ರೀಪಾದರಾಜರು.

ಅತ್ಯಂತ ಕಠಿಣವೆನ್ನುವ ಅಧ್ಯಾತ್ಮ ಪಥದಲ್ಲಿ ಅತ್ಯಂತ ಸುಲಭವಾಗಿ ವಾತ್ಸಲ್ಯದಿಂದ ನನ್ನನ್ನು ಎತ್ತಿಕೊಂಡು ನಡೆಯುತ್ತಾ, ಧ್ಯಾನಾಭ್ಯಾಸದ ವತಿಯಿಂದ ದೈವೀ ಬೆಳಕು ಆವರಿಸಿಕೊಳ್ಳುವ ಹಾಗೆ ತರಬೇತಿ ನೀಡುತ್ತಾ, ಭಕ್ತಿಯ ಪರಿಮಳವನ್ನು ಹಾಗೂ ದಾಸರ ಜೀವನಮೌಲ್ಯಗಳನ್ನು ನನಗೆ ಭಾಸಮಾಡಿಸಿ, ಅದರ ಬೆಳಕನ್ನು ಈ ಶಬ್ದಗಳಲ್ಲಿ ಉಸಿರಿಸಿದ ಆಚಾರ್ಯವರ್ಯರಾದ ಶ್ರೀ ಸುರೇಶಕುಮಾರ ಮಾಕಮ್ (ಬೆಂಗಳೂರು) ರವರ ಚರಣಾರವಿಂದಗಳಲ್ಲಿ ಸಾಷ್ಟಾಂಗ ಪ್ರಣಾಮಗಳು.



# ಬೇಂದ್ರೆ ಕಂಡ ದಾಂಪತ್ಯ

ಸತ್ಯಮೂರ್ತಿ ಗನವಳ್ಳಿ

ನನಗೂ ನಿನಗೂ ಅಂಟಿದ ನಂಟಿನ ಕೊನೆ ಬಲ್ಲವರಾರು ಕಾಮಾಕ್ಷಿಯೇ! ಎಂದು ಬೇಂದ್ರೆಯವರು ತಮ್ಮ 'ಸಖೀಗೀತ' ಎಂಬ ದೀರ್ಘ ಕವನದಲ್ಲಿ ಮತ್ತೆ ಮತ್ತೆ ಉದ್ಗಾರವೆತ್ತಿದ್ದಾರೆ. ಹೆಂಡತಿಯನ್ನು ಜೀವದ ಗೆಳತಿಯಾಗಿ ಕಂಡಿದ್ದಾರೆ. 1919 ರಿಂದ 1940 ರ ವರೆಗಿನ ತಮ್ಮ ಸಖಿಯೊಂದಿನ ದಾಂಪತ್ಯದ ಸಕಲ ಮಜಲುಗಳನ್ನೂ ತೆರೆದಿಟ್ಟಿದ್ದಾರೆ.

ಮದುವೆಯ ದಿನದ ಸಂಜೆಯ ನೆನಪಿನೊಂದಿಗೆ ಆರಂಭವಾಗುವ ಈ ಕವನ ಅವರ ದಾಂಪತ್ಯ ಜೀವನದ ಎರಡು ದಶಕಗಳನ್ನು ಬಿಚ್ಚಿಡುವ ಪರಿ ಅನನ್ಯವಾದದ್ದು. ಅವರೇ ಹೇಳುವ ಹಾಗೆ, "ಈ ಗೀತದಲ್ಲಿ ನನ್ನ ಜೀವನ ಕಥೆಯ ಹಂದರದ ಮೇಲೆ ಸಾಮಾನ್ಯ ಸಂಸಾರದ ಸುಖ ದು:ಖದ ಹಂಬನ್ನು (ಬಳ್ಳಿ) ಹಬ್ಬಿಸಿದ್ದೇನೆ" ಎಂದಿದ್ದಾರೆ. ಅವರ ದಾಂಪತ್ಯದ ಬಳ್ಳಿ ಚಿಗುರಿ ಹಬ್ಬಿದ ಸೊಗಸನ್ನು ನವಿರಾಗಿ ಹಾಗೂ ವಸ್ತುನಿಷ್ಠವಾಗಿ ಚಿತ್ರಿಸಿದ್ದಾರೆ. ಮತ್ತೆ ದಾಂಪತ್ಯ ಜೀವನ ಎಂಬುದು ಒಂದು ಲೀಲೆ. ಲೀಲೆಯೊಳು ಯಾವುದೂ ವಿಫಲವಲ್ಲ ಎಂದಿದ್ದಾರೆ. ಗಂಗೆ ಸಾಗರಬಿದ್ದು ಸಾಗರವನ್ನಪ್ಪುತ ಸುಖ ದು:ಖ ಸಂಗಮವಾದ ಮನಸ್ಸು ಪಾವನ ಎಂದಿದ್ದಾರೆ.

ಗಂಗೆ ಹಿಮಾಲಯದಲ್ಲಿ ಹುಟ್ಟಿ, ಹರಿದು ಕೊನೆಗೆ ಸಾಗರವನ್ನು ಸೇರಿದಾಗ, ಸುಖ ದು:ಖ ಸಂಗಮವಾಗಿ ದ್ವಂದ್ವ ಕಳೆದುಹೋಗುತ್ತದೆ ಎನ್ನುವುದು ಅರ್ಥವತ್ತಾದ ವಿವರಣೆ. ಗಂಗೆ ಯಾವಾಗಲೂ ಪವಿತ್ರ, ಪಾಪನಾಶಿನಿ ಎನ್ನುವ ಹೋಲಿಕೆ ದಾಂಪತ್ಯದ ಪಾವಿತ್ರ್ಯವನ್ನು ಎತ್ತಿ ಹಿಡಿಯುತ್ತದೆ.

"ಬಾ ಅಲ್ಲಿ ಕಡಲಲ್ಲಿ
ತೆರೆ ತೆರೆಯನೊಡೆವಲ್ಲಿ
ನೀರ್ ಬುರುಗು ಬಿಡುವಲ್ಲಿ
ಮೀಯೋಣ ಬಾ
ತೆರೆ ತೊಡೆ ತೊಟ್ಟಿಲನೇರೋಣ"

ಎಂದು ಗೆಳತಿಯನ್ನು ಕರೆಯುತ್ತಾರೆ. ತೆಪ್ಪ, ಹರಿಗೋಲು(ದೋಣಿ) ಅಥವಾ ಹಡಗಿನ ಮೂಲಕ ಸಂಸಾರ ಸಾಗರವನ್ನು ದಾಟೋಣ ಎಂದು ಹೆಂಡತಿಯನ್ನು ಕರೆಯುತ್ತಾರೆ. ಅವರವರ ಯೋಗ್ಯತೆಗೆ ಅನುಗುಣವಾಗಿ ಸಂಸಾರ ಸಾಗರ ದಾಟಲು ತೆಪ್ಪವೋ, ಹರಿಗೋಲೋ ಅಥವಾ ಹಡಗೋ ಆಗಬಹುದು. ತೆರೆ, ತೊಡೆ, ತೊಟ್ಟಿಲು ಬಹುಶಃ ಪ್ರಣಯ, ಕಾಮ ಮತ್ತು ಸಂತಾನವನ್ನು ಸೂಚಿಸುತ್ತವೆ. ಅವರ ಸಂಜೆ ಗೋಧೂಳಿ ಸಮಯದಲ್ಲಿ ಆದ ಮದುವೆಯ ಮತ್ತು ಹೊಸ ದಾಂಪತ್ಯದ ರಸಮಯ ಸನ್ನಿವೇಶಗಳನ್ನು ಹೀಗೆ ವರ್ಣಿಸಿದ್ದಾರೆ.

"ಮಾಂದಳಿರ(ಮಾವಿನ) ತೋರಣ ಹೂ ಮಿಡಿ
ಗುಡಿಗಟ್ಟಿ ಮಧುಮಾಸ
ಹೊರಟಿತ್ತು ನಿಬ್ಬಣಕೆ" ಆಗ
ವಿಧಿ ತಂದ ವಧು ನೀನು
ಆಟದ ಕನ್ನಿಕೆ ಮಂಗಳ ಲಗ್ನಕೆ ಮಾಲೆಯ ನಿಕ್ಕುತ
ಮಡದಿಯಾದೆ.

ಅವರ ಮದುವೆಯಲ್ಲಿ ಪ್ರಕೃತಿಯೇ ನಿಬ್ಬಣವಾಗಿತ್ತು. ಅಂದರೆ, ದಾಂಪತ್ಯ ಪ್ರಕೃತಿದತ್ತವಾದದ್ದು ಹಾಗೂ ಪ್ರಕೃತಿ ಸಹಜವಾದದ್ದು ಎನ್ನುವ ಸತ್ಯವನ್ನು ಹೇಳುತ್ತಾರೆ. ಮತ್ತೆ ಎಳೆಯರ ಪ್ರಣಯದ ಹೊಸತಿನಲ್ಲಿ,

"ಮೊರೆವ ಬಯಕೆಯ ಕಡಲು ತೆರೆ ತೆರೆ ತೆರನಾಗಿ ತೆರೆಯುತಿರೆ
ಹಗಲೆಲ್ಲೋ ಹಾರಿದವು ಇರುಳೆಲ್ಲ ಜಾರಿದವು" ಎಂದಿದ್ದಾರೆ.

ದಾಂಪತ್ಯದ ಪರಮ ಗುರಿ ಸಂತಾನ. ಚೊಚ್ಚಲ ಬಸಿರು ಕುಸಿದಾಗ "ಮೊದಲ ಫಲವೊಂದು ಮೀಸಲು ಮಣ್ಣಿಗೆ" ಎಂದು ಕೊರಗಿದ್ದಾರೆ. ಮತ್ತೆ ಮಗುವಾದಾಗ "ಬೆಸೆದಿದ್ದ ಜೀವದ ಬೆರಕೆಯಾಗಲು ಬೇಕು ಪಡೆದ ಜೀವ ಕಂಡು" ಎಂದರಿತರು. ಅವರ 'ಚಿರಂತನ' ಕವನದಲ್ಲಿ "ಸಂತತಿಯೆ ಚಿರಂತನ" ಎನ್ನುತ್ತಾರೆ. "ನಲ್ಲ ನಲ್ಲೆ ಕೂಡಿದಲ್ಲೆ, ಹಿಗ್ಗಿಗುಂಟೆ ಮೇರೆ ಎಲ್ಲೆ" ಎಂದು ಇನ್ನೊಂದು ಕಡೆ ಉದ್ಗಾರವೆತ್ತಿದ್ದಾರೆ. "ಹೆಣ್ಣು ಗಂಡಿಗೆ ಚೆಲುವು, ಗಂಡು ಹೆಣ್ಣಿಗೆ ಒಲವು. ಇದುವೆ ಹೆಣಿಗೆಯ ಬಲವು ಮೂಲೋಕಕು" ಎನ್ನುವುದು ಸಾರ್ವಕಾಲಿಕ ಸತ್ಯ. ಈ ಹೆಣಿಗೆಯ ಫಲವೇ ಸಂತಾನ. ಅದು ಚಿರಂತನದ ಪ್ರತೀಕ.

ಅವರ 'ನಾನು ಬಡವಿ' ಕವನದಲ್ಲಿ ಹೆಂಡತಿ ತುಂಬು ಸಂತಸದಿಂದ ಹೇಳುತ್ತಾಳೆ, "ಬೇಕು ಹೆಚ್ಚಿಗೇನು, ಹೊಟ್ಟೆಗಿತ್ತ ಜೀವ ಫಲವ, ತುಟಿಗೆ ಹಾಲುಜೇನು" ಸೃಷ್ಟಿಯ ಮುಖ್ಯ ಉದ್ದೇಶ ಈ ಜೀವಫಲ. ಸಂತಾನದಿಂದ ಸಿಗುವ ಸುಖ, ಸೊಗಸು, ಆನಂದ ಮತ್ತು ಅನುಭೂತಿಗಿಂತ ಮಿಗಿಲಾದದ್ದೇನೂ ಇಲ್ಲ ಎನ್ನುವುದು ಕವಿಯ ತೀರ್ಮಾನ. ಸಂಸಾರದಲ್ಲಿ ದು:ಖ ಇದ್ದದ್ದೆ. ಅವರ ಮಗಳು ಲಲಿತ ತೀರಿಕೊಂಡಾಗ ಆ ತಾಯಿ ತನ್ನೆಲ್ಲಾ ದು:ಖ ಮಡುಕಟ್ಟಿ ತನ್ನ ಗಂಡನನ್ನು ಆರ್ತಳಾಗಿ ನೋಡಿದಾಗ ಕವಿಗೆ ಅನಿಸಿದ್ದು,

"ಹುಣ್ಣಿಮೆ ಚಂದಿರನ ಹೆಣಾ ಬಂತು ಮುಗಿಲಾಗ, ತೇಲತ ಹಗಲ"
ಎಂದು, ಹೆಂಡತಿಯನ್ನು ಸಮಾಧಾನ ಪಡಿಸುತ್ತ ಹೇಳುತ್ತಾರೆ

"ಸಂಸಾರ ಸಾಗರದಾಗ
ಲೆಕ್ಕವಿಲ್ಲದಷ್ಟು ದು:ಖದ
ಬಂಡಿ(ಗಾಡಿ) ನಾ ಬಲ್ಲೆ,
ನನಗೆ ಗೊತ್ತಿಲ್ಲದಿದ್ದರೂ
ಎಲ್ಲಿ ಆಚೆಯಾ ದಂಡಿ(ಆ ಕಡೆ ಇರುವ ದಡ)"

ಈ ಸಂಸಾರ ಸಾಗರದ ಕೊನೆ ಎಲ್ಲಿ, ಗೊತ್ತಿಲ್ಲ ಎನ್ನುತ್ತಾರೆ.

"ನಾ ತಡೀಲಾರೆ ಅದು
ಯಾಕ ನೋಡತಿ
ಮತ ಮತ್ತ ನೀ ಇತ್ತ.
ಅತ್ತು ಬಿಡು
ತುಟಿ ಕಚ್ಚಿ ಹಿಡಿಯದಿರು ಬಿಕ್ಕ"

ಮನಸಾರೆ ಅತ್ತು ದುಃಖ ಕಡಿಮೆ ಮಾಡಿಕೊ ಎಂದು ಸಾಂತ್ವನ ಹೇಳುತ್ತಾರೆ. ಆ ದುಃಖದ ಸಮಯದಲ್ಲೂ ಅವರ ಕವಿ ಪ್ರತಿಭೆ ಹೊರಹೊಮ್ಮುವ ರೀತಿಯನ್ನು ನೋಡಿ.

"ಇಬ್ಬನಿ ತೊಳೆದ ಹಾಲು
ಮೆತ್ತಿದಾ ಕವಳಿ ಕಂಟಿಯಾ ಹಣ್ಣು
ಹೊಳೆ ಹೊಳೆವ ಹಾಂಗ
ಕಣ್ಣಿರುವ ಹೆಣ್ಣ, ಹೇಳು
ನಿನ್ನವೇನ ಈ ಕಣ್ಣು?"
ಕವಳಿಹಣ್ಣು ಕಡುಕಪ್ಪು.

ಇಬ್ಬನಿ ತೊಳೆದ ಹಾಲು ಮೆತ್ತಿದ ಕವಳಿ ಹಣ್ಣಿನ ಬಣ್ಣದ ಕಣ್ಣುಗಳು ಎಂದು ಬಣ್ಣಿಸುತ್ತಾರೆ.

"ರಸವೆ ಜನನ
ವಿರಸ ಮರಣ
ಸಮರಸವೇ ಜೀವನ".

ಇದು ಬೇಂದ್ರೆಯವರ ಬಾಳಿನ ಮಂತ್ರ. ದಾಂಪತ್ಯದಲ್ಲಿಯೂ ಸಮರಸವೇ ಮುಖ್ಯ ಎಂದು ಅವರ "ನಾನು ಬಡವಿ" ಕವನದಲ್ಲಿ ಅದ್ಭುತವಾಗಿ ಚಿತ್ರಿಸಿದ್ದಾರೆ.

"ನಾನು ಬಡವಿ, ಆತ ಬಡವ
ಒಲವೆ ನಮ್ಮ ಬದುಕು
ಬಳಸಿಕೊಂಡೆವದನೆ ನಾವು
ಅದಕು, ಇದಕು, ಎದಕು"

ಜೀವನದಲ್ಲಿ ಎಲ್ಲದಕ್ಕೂ ಒಲವನ್ನೆ ಬಳಸಿಕೊಂಡೆವು ಎನ್ನುತ್ತಾರೆ. ಮತ್ತೆ
"ಆತ ಕೊಟ್ಟ ವಡವೆ ವಸ್ತು
ನನಗೆ ಅವಗೆ ಗೊತ್ತು
ತೋಳುಗಳಿಗೆ ತೋಳಬಂದಿ,
ಕೆನ್ನೆ ತುಂಬಾ ಮುತ್ತು "
ಮತ್ತೇನು ಬೇಕು ಎಂದು ಮಡದಿಯ ಮೂಲಕ ಕೇಳಿದ್ದಾರೆ.

ಕುಂದು ಕೊರತೆ ತೋರಲಿಲ್ಲ, ಬೇಕು ಹೆಚ್ಚಿಗೇನು ಎಂದು ಸಂಸಾರದಲ್ಲಿ ತೃಪ್ತಿಯೇ ಮುಖ್ಯ ಎಂದಿದ್ದಾರೆ.

ಜೀವನ ಮುಂದುವರಿದಂತೆ ಹೆಂಡತಿಗೆ ಹೇಳುತ್ತಾರೆ,

"ಹರಿವ ನೀರಿನ ಹರಿಗೋಲ ಮನೆ ಕಟ್ಟಿ
ಗೊತ್ತಿಲ್ಲವೆ ನಲ್ಲೆ, ಹೊರಟಿಹೆವು".

ಹೀಗೆ ಸಂಸಾರವೆಂಬ ದೋಣಿಗೆ ಹುಟ್ಟು ಹಾಕುತ್ತಾರೆ, ಬಾಳಿನ ಪಯಣ ಮಂದುವರೆಸಲು ಮತ್ತೆ.

ಇಬ್ಬರ ನಡುವಿನ ಮನಸ್ಸು ಕೆಟ್ಟಾಗ


"ಹಗೆಯಾಗದಿರಲೆಂದೆ
ಇಬ್ಬರೂ ಹವಣಿಸಿ
ಒಬ್ಬರನೊಬ್ಬರು ತೂಗಿದೆವು " ಎಂದಿದ್ದಾರೆ.

ಕವನದ ಕೊನೆಯಲ್ಲಿ

ನಾನೂ ನೀನೂ ಸಖ-ಸಖಿ ಸಮ-ಸುಖಿ
ಮತ್ತು ಇನ್ನು ಮುಂದೆಯೂ ಸಖಿಯಾಗು ಬಾ ಎಂದು ಕರೆದಿದ್ದಾರೆ.

ಹೀಗೆ ಅಕ್ಕರತೆ, ಗೆಳೆತನ, ಪ್ರೀತಿ-ಪ್ರಣಯ, ಸಿಡುಕು-ಮಿಡುಕಿನ, ದುಃಖ-ದುಗುಡಗಳ ಹುರಿಯಾಗಿ ನಂದಾದೀಪಕ್ಕೆ ಬತ್ತಿಯಾಗಿ ಜೀವನ ಬೆಳಗುವ ಪರಿಯನ್ನು ಅದ್ಭುತವಾಗಿ ಬೇಂದ್ರೆ ಬಣ್ಣಿಸುತ್ತಾರೆ.

ಒಟ್ಟಿನಲ್ಲಿ "ಸಖೀಗೀತ" ದಾಂಪತ್ಯದಲ್ಲಿ ಸಮರಸವೇ ಎನ್ನುವ ಉದಾತ್ತ ವಿಚಾರದ ಹಂದರವಾಗಿದೆ.





# ಪರಿಸರ ದಿನಾಚರಣೆಯ ಮಹತ್ವ

ಆರ್. ಶ್ರೀಧರ್

ಮನುಷ್ಯನಿಗೂ ಪ್ರಕೃತಿಗೂ ಅಗಾಧವಾದ ಸಂಬಂಧ. ಈ ಪ್ರಕೃತಿಯನ್ನು ಉಳಿಸಿದರೆ ಮಾತ್ರ ಭೂಮಿಯ ಮೇಲೆ ಮನುಷ್ಯನ ಜೀವನ ಸಾಧ್ಯ. ಅದಕ್ಕಾಗಿಯೇ ನಮ್ಮ ಗೆಳೆಯರೊಬ್ಬರು ಹೇಳುತ್ತಾರೆ ,

“ಮನೆಗೊಂದು ಮರ, ಊರಿಗೊಂದು ವನ”
“ಕಾಡಿದ್ದರೆ ನಾಡು, ನಾಡಿದ್ದರೆ ನಾವು”
“ಮರವಿದ್ದರೆ ಮಳೆ, ಮಳೆ ಬಂದರೆ ಉಳಿಯುವಳು ಇಳೆ”

ನಮಗಾಗಿ ಅಲ್ಲದಿದ್ದರೂ ನಮ್ಮ ಮುಂದಿನ ಪೀಳಿಗೆಗಾಗಿ ಈ ಪರಿಸರದ ಮಾಹಿತಿಯನ್ನು ತಿಳಿಸೋಣ. ಪರಿಸರ ಎಂದರೆ ಜೀವಿಯನ್ನು ಸುತ್ತುವರಿದಿರುವ ಗಾಳಿ-ನೀರು, ಮಣ್ಣು-ಬಾನು, ಪಶು-ಪಕ್ಷಿ, ಕ್ರಿಮಿ-ಕೀಟ, ಮರ-ಗಿಡ-ಬಳ್ಳಿ ಎಂದರ್ಥ. ಭೂಮಿ ಜೀವ ವಾಸಯೋಗ್ಯ ಗ್ರಹವಾಗಿರುವುದು ಪರಿಸರದಿಂದ ಎಂಬುದು ವಾಸ್ತವ. ಪರಿಸರಕ್ಕೆ ಯಾರೂ ಅವಶ್ಯವಿಲ್ಲ, ಆದರೆ ಜೀವಿಗೆ ಪರಿಸರ ಬೇಕೇ ಬೇಕು. ಇದನ್ನು ಇಲ್ಲಿ ವಾಸಿಸುವ ಪ್ರತಿಯೊಬ್ಬರೂ ಅರಿಯಬೇಕು. ಪ್ರಕೃತಿಯು ತಾಯಿಯಂತೆ ಪೋಷಿಸುತ್ತದೆ ಹಾಗೂ ತಂದೆಯಂತೆ ರಕ್ಷಿಸುತ್ತದೆ. ಹಾಗಾಗಿ ಪರಿಸರವನ್ನು ದೈವದಂತೆ ಕಾಣುವುದು, ಪೂಜ್ಯನೀಯ ಮನೋಭಾವನೆ ಬೆಳೆಸಿಕೊಳ್ಳುವುದು ಹಾಗೂ ಇದರ ವೈಶಿಷ್ಟ್ಯತೆಯ ಬಗ್ಗೆ ಮುಂದಿನ ತಲೆಮಾರಿಗೆ ತಿಳಿಸಿಕೊಡುವುದು ನಮ್ಮ, ನಿಮ್ಮೆಲ್ಲರ ಕರ್ತವ್ಯ.

ಹರಿ-ಹರ ಮುನಿದರೂ ಗುರು ಕಾಯ್ವನು ಎಂಬಂತೆ ನಮ್ಮ ಜನರು ಮರೆತರೂ ಪ್ರತಿವರ್ಷ ಜೂನ್ ೫ ನೇ ತಾರೀಖಿನಂದು ನಮ್ಮ ಶಾಲೆಗಳಲ್ಲಿ ಶಿಕ್ಷಕರು ತಮ್ಮ ವಿದ್ಯಾರ್ಥಿಗಳೊಡನೆ ಶಾಲೆಯ ಆವರಣವನ್ನು ಸಿಂಗರಿಸಿ, ಹಸಿರು ಬಣ್ಣದ ಉಡುಪು ಧರಿಸಿ ಸುತ್ತಮುತ್ತಲಿನ ಗ್ರಾಮದ ಜನತೆಯೊಂದಿಗೆ ಸಸಿನೆಡುವ ಕಾರ್ಯಕ್ರಮದ ಮೂಲಕ ಪರಿಸರ ಜಾಗೃತಿಯನ್ನು ಮೂಡಿಸಲಾಗುತ್ತಿದೆ. ಆದರೆ ಈ ಪರಿಸರ ದಿನಾಚರಣೆ ಒಂದು ದಿನಕ್ಕೆ ಸೀಮಿತವಾಗದೆ ಪ್ರತಿನಿತ್ಯ ಆಚರಿಸುವ ಹಬ್ಬವಾಗಬೇಕು. ಶಾಲೆಯಲ್ಲಿ ನಾಲ್ಕು ಗೋಡೆಗಳ ಮಧ್ಯೆ ಮಕ್ಕಳನ್ನು ಕೂಡಿಸದೆ ನೈಜ ಪರಿಸರಕ್ಕೆ ಕರೆದುಕೊಂಡು ಪರಿಸರದ ರಮಣೀಯತೆ ಹಾಗೂ ಸೌಂದರ್ಯವನ್ನು ಆಸ್ವಾದಿಸಲು ಬಿಡಬೇಕು. ಎಷ್ಟೋ ವಿಷಯಗಳನ್ನು ಮಕ್ಕಳು ನೋಡಿ, ಕೇಳಿ ಕಲಿಯುತ್ತಾರೆ. ಹಾಗೆ ಪರಿಸರವನ್ನು ವೀಕ್ಷಿಸಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ, ಕಾರಣ ಹುಡುಕುವಂತೆ ಮಾಡುವುದು ಮುಖ್ಯ ಕರ್ತವ್ಯವಾಗಬೇಕು.

ಪರಿಸರ ಮಾಲಿನ್ಯದಿಂದಾಗಿ ವಾತಾವರಣದ ತೇವಾಂಶ ಕಡಿಮೆಯಾಗಿ ಹೆಚ್ಚಿನ ಉಷ್ಣಾಂಶದಿಂದಾಗಿ ಮುಂದೊಂದು ದಿನ ಇಡೀ ಭೂಮಂಡಲವೇ ವಿನಾಶವಾಗುವುದು ಖಂಡಿತ. ಇದನ್ನು ತಪ್ಪಿಸಲು ಆರೋಗ್ಯವಂತ ತಾರ್ಕಿಕ ಚಿಂತನೆ, ಪ್ರಾಯೋಗಿಕ ಕಲಿಕೆ ಹಾಗೂ ವೈಜ್ಞಾನಿಕ ಮನೋಭಾವ ರೂಡಿಸಿಕೊಳ್ಳುವಂತೆ ಮಾಡಬೇಕು. ಕೃಷಿ ವಿಧಾನಗಳನ್ನು ವಿವರಣೆಗೆ ಮೀಸಲಿಡದೆ ಪ್ರಾಯೋಗಿಕವಾಗಿ ತಿಳಿಸಬೇಕು. ಪ್ರಪಂಚದ ಎಲ್ಲಾ ಮೂಲೆಗಳಲ್ಲಿರುವ ವಿವಿಧ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ ಸಮುದಾಯಗಳು ಕೈ ಜೋಡಿಸಬೇಕು, ಪರಿಸರ ಸಂರಕ್ಷಣೆಗೆ ಜಾತಿ, ಧರ್ಮ ಭೇದವಿಲ್ಲದೆ ಪರಿಸರ ಸಂರಕ್ಷಣೆಗೆ ಮುಂದಾಗಬೇಕು. ನನ್ನ ಸವಿನಯ ಪ್ರಾರ್ಥನೆ “ನಮ್ಮ ಮುಂದಿನ ಪೀಳಿಗೆಗಾಗಿ ಪರಿಸರವನ್ನು ಸಂರಕ್ಷಿಸಿ, ಬೆಳಸಿ ಮತ್ತು ಪೋಷಿಸಿ”.



"ಹಸಿರೇ ಉಸಿರು, ಹಸಿರನ್ನು ಬೆಳಸಿ, ಉಸಿರನ್ನು ಉಳಿಸಿ. ಕಾಡಿದ್ದರೆ ನಾಡು, ಅದುವೆ ನಮ್ಮ ಹಾಡು".



# ತಿಮ್ಮ ಗುರುವಿನ ಮುಕ್ತಕ ಮಾಲೆ (ಮಂಕುತಿಮ್ಮನ ಕಗ್ಗದ ಕಿರುನೋಟ)

ನಾಗರತ್ನ

ಹರಿ: ಓಂ

ಶ್ರೀವಿಷ್ಣು ವಿಶ್ವಾದಿಮೂಲ ಮಾಯಲೋಲ।
ದೇವ ಸರ್ವೇಶ ಪರಬೊಮ್ಮನೆಂದು ಜನಂ॥
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ।
ಆ ವಿಚಿತ್ರಕೆ ನಮಿಸೊ - ಮಂಕುತಿಮ್ಮ॥

ವಿಶದಮಾದೊಂದು ಜೀವನಧರ್ಮದರ್ಶನವ ।
ನುಸುರಿಕೊಳೆ ತನ್ನ ಮನಸಿಗೆ ತಾನೆ ಬಗೆದು ॥
ನಿಸದವಂ ಗ್ರಂಥಾನುಭವಗಳಿಂದಾರಿಸುತ ।
ಹೊಸೆದಿನೀ ಕಗ್ಗವನು - ಮಂಕುತಿಮ್ಮ ॥

ಕವಿಯಲ್ಲ ವಿಜ್ಞಾನಿಯಲ್ಲ, ಬರಿ ತಾರಾಡಿ ।
ಅವನರಿವಿಗೆಟುಕುವವೊಲೊಂದಾತ್ಮನಯವ ॥
ಹವಣಿಸಿದನಿದನು ಪಾಮರಜನದ ಮಾತಿನಲಿ ।
ಕವನ ನೆನಪಿಗೆ ಸುಲಭ - ಮಂಕುತಿಮ್ಮ ॥

"ತಾನು ಕವಿಯೂ ಅಲ್ಲ, ಜ್ಞಾನಿಯೂ ಅಲ್ಲ, ಒಬ್ಬ ಸಾಧಾರಣ ವ್ಯಕ್ತಿ. ತನ್ನ ಬುದ್ಧಿಶಕ್ತಿಗೆ ನಿಲುಕುವಷ್ಟು ತಿಳುವಳಿಕೆಯಿಂದ, ಸಾಮಾನ್ಯರಿಗಾಗಿ, ಅವರು ಅರಿಯುವ ಸರಳವಾದ ವಚನಗಳಲ್ಲಿ ಆತ್ಮಜ್ಞಾನದ ತಿರುಳನ್ನು ತಿಳಿಸಿಕೊಡಲು ಪ್ರಯತ್ನಿಸಿದ್ದೇನೆ. ಸ್ಪಷ್ಟವಾದ, ಗಹನವಾದ ಜೀವನಧರ್ಮವನ್ನು ಸುಲಭವಾಗಿ ನೆನಪಿನಲ್ಲುಳಿಯಬಹುದಾದ ಕವನ ರೂಪದಲ್ಲಿ ಚುಟುಕಾಗಿ ಹೇಳಿರುವೆನು" - ಇದು ಒಬ್ಬ ಶ್ರೇಷ್ಠ ತತ್ತ್ವಜ್ಞಾನಿ ಹಾಗೂ ದಾರ್ಶನಿಕನ ಮಾತು. ಎಂತಹ ವಿನಮ್ರತೆ ಈ ಮಾತುಗಳಲ್ಲಿ!! ತಿಮ್ಮ ಗುರುವಿನ ಮೂಲಕ ಉಪನಿಷತ್ತಿನ ಸಾರವನ್ನೇ ಕಟ್ಟಿಕೊಟ್ಟಿರುವ ಪಂಡಿತೋತ್ತಮರು ಡಿವಿಜಿ ಎಂದೇ ಪ್ರಸಿದ್ಧರಾಗಿರುವ ಸನ್ಮಾನ್ಯ ಶ್ರೀ ಡಿ ವಿ ಗುಂಡಪ್ಪನವರು. ಅವರ ಮೇರು ಕೃತಿಯಾದ 'ಮಂಕುತಿಮ್ಮನ ಕಗ್ಗ' ವು ಗುಂಡೋಪನಿಷತ್ ಎಂದು ಕರೆಯಲ್ಪಟ್ಟಿದೆ. ಅವರೇ ಹೇಳಿರುವಂತೆ ಈ ಕೃತಿಯು ಅವರ ಜೀವನಾನುಭವ ಹಾಗೂ ಹಲವಾರು ಶಾಸ್ತ್ರಗ್ರಂಥಗಳ ಮನನದ ರಸಪಾಕ. ಡಿವಿಜಿಯವರು ಉಪನಿಷತ್ತು, ಭಗವದ್ಗೀತೆ ಹಾಗೂ ಬ್ರಹ್ಮಸೂತ್ರಗಳನ್ನು ಗುರುಮುಖೇನ ಅಭ್ಯಸಿಸಿದ್ದವರಾದರೂ, ತಾನು ಜ್ಞಾನಿಯಲ್ಲ, ಕೇವಲ ಅಲೆದಾಡಿಕೊಂಡಿರುವ ತಾರಾಡಿ ಎನ್ನುವ ಮಾತಿನಲ್ಲಿ ಅವರ ಉನ್ನತ ವ್ಯಕ್ತಿತ್ವವನ್ನು ಕಾಣಬಹುದು.

ಅಂತಹ ಸರಳಸಜ್ಜನ ವ್ಯಕ್ತಿಯ ಮಹೋನ್ನತ ಕೃತಿಯ ವ್ಯಾಖ್ಯಾನ ಸುಲಭಸಾಧ್ಯವಲ್ಲ. ಡಿವಿಜಿಯವರ ಔನ್ನತ್ಯದ ಎದುರು ತೃಣ ಸಮಾನಳಾದ ನಾನು ಈ ಮಹತ್ಕಾರ್ಯಕ್ಕೆ ಕೈ ಹಾಕಿರುವುದೇ ಒಂದು ಸಾಹಸ. ನನ್ನ ಪ್ರೀತಿಯ ಕಗ್ಗದ ಗಂಟನ್ನು ಇನ್ನಷ್ಟು ತೆರೆದು ಒಳಗೆ ಇಣುಕುವಾಸೆ. ತಿಳಿದಿದ್ದನ್ನು ಇತರರಿಗೂ ತಿಳಿಸುವಾಸೆಯು ಈ ಕೆಲಸಕ್ಕೆ ನನ್ನನ್ನು ಪ್ರೇರೇಪಿಸಿತು.

ಉಪನಿಷತ್ತು, ಬ್ರಹ್ಮಸೂತ್ರಗಳನ್ನು ಅರಿತವಳು ನಾನಲ್ಲ. ಭಾರತೀಯ ಸನಾತನಧರ್ಮದ ಸತ್ವಸಾರದ ತಿರುಳನ್ನು ತಿಳಿದವಳಲ್ಲ. ಶಾಸ್ತ್ರಗ್ರಂಥಗಳನ್ನು ಅಭ್ಯಸಿಸಿದವಳಲ್ಲ. ನಾನೊಬ್ಬ ಕನ್ನಡ ಸಾಹಿತ್ಯದ ವಿದ್ಯಾರ್ಥಿ ಹಾಗೂ ಅಧ್ಯಾಪಕಿ. ಕಗ್ಗವನ್ನು ಕೂಡಾ ಮೊದಮೊದಲಿಗೆ ಸಾಹಿತ್ಯದ ಹಿನ್ನಲೆಯಲ್ಲಿಯೇ ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಿದ್ದ ನನಗೆ ಹೊಸ ದಾರಿಯನ್ನು ತೋರಿದವರು ಚಿನ್ಮಯ ಮಿಷನ್ನಿನ ಗುರು ಸ್ವಾಮಿ ಬ್ರಹ್ಮಾನಂದರು. ಅವರ ವ್ಯಾಖ್ಯಾನಗಳು ನನಗೆ ದಾರಿದೀಪವಾದವು. ಕಗ್ಗದ ಮುಕ್ತಕಗಳನ್ನು ಹೆಚ್ಚು ಓದುತ್ತಾ ಹೋದಂತೆ ಒಂದು ಹೊಸ ಪ್ರಪಂಚವೇ ನನ್ನೆದುರಿಗೆ ತೆರೆದುಕೊಂಡಿತು. ತಿಮ್ಮ ಗುರುವಿನ ಮುಕ್ತಕಗಳ ಮೂಲಕ ನನ್ನ ಮನದಂತರಾಳದಲ್ಲಿ ಪುಟಿಯುತ್ತಿದ್ದ ಹಲವಾರು ಪ್ರಶ್ನೆಗಳಿಗೆ, ಸಾಮಾನ್ಯಳಾದ ನಾನು ಜನಸಾಮಾನ್ಯರ ನೆಲೆಯಲ್ಲಿಯೇ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸಿದ್ದೇನೆ.

ಕಗ್ಗದ ಪ್ರತಿಯೊಂದು ಬಿಡಿ ಮುಕ್ತಕವೂ ಒಂದೊಂದು ತತ್ತ್ವವನ್ನು ಪ್ರತಿಪಾದಿಸುತ್ತದೆ. ಪ್ರತಿಯೊಬ್ಬರೂ ಅವರವರದೇ ಆದ ರೀತಿಯಲ್ಲಿ, ಅವರವರ ವಿದ್ಯೆ, ಅನುಭವ, ಕಲಿಕೆ ಮತ್ತು ಸಂಸ್ಕಾರದ ಆಧಾರದ ಮೇಲೆ ತಮ್ಮದೇ ಆದ ರೀತಿಯಲ್ಲಿ ವ್ಯಾಖ್ಯಾನಿಸಬಹುದು. ನನ್ನ ಜೀವನಾನುಭವದ ಹಿನ್ನೆಲೆಯಲ್ಲಿ, ನನ್ನ ಪರಿಮಿತ ಪರಿಧಿಯ ಅರಿವಿಗೆ ಎಟುಕುವಷ್ಟು ವಿವರಣೆಯನ್ನು ಕೊಡಲು ಯತ್ನಿಸಿದ್ದೇನೆ. ನನ್ನ ಜಿಜ್ಞಾಸೆಗಳಿಗೆ ನಾನು ಕಂಡುಕೊಂಡ ಪರಿಹಾರವನ್ನು ವಾಚಕರ ಮುಂದಿಡುವ ಪ್ರಯತ್ನ ಮಾಡಿರುವೆ. ಆ ಪ್ರಯತ್ನದಲ್ಲಿ ಇದೊಂದು ಸಣ್ಣ ಹೆಜ್ಜೆ. ಈ ಪಾಮರಳ ತಪ್ಪು-ಒಪ್ಪುಗಳನ್ನು ಕ್ಷಮಿಸಿ, ಈ ಪ್ರಯಾಣದಲ್ಲಿ ನನ್ನ ಜೊತೆ ಸಹಭಾಗಿಗಳಾಗಿ ಸಹಕರಿಸಬೇಕಾಗಿ ವಾಚಕರಲ್ಲಿ ನನ್ನ ವಿನಮ್ರ ವಿನಂತಿ.

* * * * * * * * *

ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಮಾರ್ಚ್ 17, 1887 ರಂದು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ಜನಿಸಿದರು. ಕನ್ನಡ ಸಾಹಿತ್ಯ ಕ್ಷೇತ್ರದ ಒಬ್ಬ ಹೆಸರಾಂತ ಸಾಹಿತಿ, ತತ್ತ್ವಜ್ಞಾನಿ, ವಿದ್ವಾಂಸ ಹಾಗೂ ಪತ್ರಕರ್ತರಾದ ಇವರು 'ಆಧುನಿಕ ಸರ್ವಜ್ಞ' ಎಂದು ಪ್ರಸಿದ್ಧರಾಗಿರುವರು. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಕೂಡ ತೇರ್ಗಡೆಯಾಗದ ಇವರ ಅಪಾರವಾದ ಜ್ಞಾನಸಂಪತ್ತಿನ ಮೂಸೆಯಲ್ಲಿ ಹಾಯ್ದು ಬಂದಂತಹ ಕೃತಿಗಳು ಹಲವಾರು. 'ಮಂಕುತಿಮ್ಮನ ಕಗ್ಗ' ಅವರ ಮೇರು ಕೃತಿ. 1935 ರಲ್ಲಿ ಆರಂಭಗೊಂಡ ಬೆಂಗಳೂರಿನ ನರಸಿಂಹರಾಜ ಕಾಲೋನಿಯಲ್ಲಿರುವ 'ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ'ಯ ಸಂಸ್ಥಾಪಕರಿವರು.

"ನಮ್ಮಲ್ಲಿರುವ ಯಾವ ಒಂದು ಲೋಪವನ್ನು ಮೊದಲು ಸರಿಪಡಿಸಿದರೆ ಉಳಿದೆಲ್ಲ ಕಷ್ಟ ನಿವಾರಣೆಯು ಸ್ವತಯೇವ ಆದೀತೋ ಆ ಆದಿ ಕಾರಣವನ್ನು ನಾವೀಗ ಹುಡುಕಬೇಕು". "ನಮ್ಮ ದುರವಸ್ಥೆಯ ಮೂಲ ಕಾರಣ ನಿಜವಾಗಿ ನಮ್ಮಲ್ಲಿ ಸಾಮಾನ್ಯವಾಗಿ ಬಂದಿರುವ ಸೋಲೊಪ್ಪಿಕೊಳ್ಳುವ ಮನಸ್ಥಿತಿ, ನಮ್ಮ ವಿವೇಕಶೂನ್ಯವಾದ ವಿರಕ್ತಿ. ನಮಗೆ ಈಗ ಬೇಕಾಗಿರುವುದು ಜೀವನೋತ್ಸಾಹ". ಅವರ 'ಬಾಳಿಗೊಂದು ನಂಬಿಕೆ' ಕೃತಿಯ ಈ ಸಾಲುಗಳು ಮಂಕುತಿಮ್ಮನ ಕಗ್ಗಕ್ಕೆ ಪೀಠಿಕೆ ಎಂದೆನಿಸುತ್ತದೆ.



'ಕಗ್ಗ'ದಂತೆಯೇ! ಆದರೆ ಮಂಕುತಿಮ್ಮನ ಕಗ್ಗದ ತಿಮ್ಮ ಗುರು ಒಬ್ಬ ದಾರ್ಶನಿಕ, ಚಿಂತಕ, ತತ್ತ್ವಜ್ಞಾನಿ. ಆತನ ಅನುಭವದ ಫಲವಾದ ಈ ಕಗ್ಗವು ಓದುಗರಲ್ಲಿ ಅಂತರಂಗ ಪರಿವೀಕ್ಷಣೆ, ಆಲೋಚನೆ, ಚಿಂತನೆಗಳನ್ನು ಮೂಡಿಸುತ್ತಾ, ಮಾನಸಿಕ ವಿಕಸನಕ್ಕೆ ಎಡೆಮಾಡಿಕೊಡುವ ಒಂದು ದಾರ್ಶನಿಕ ಕಾವ್ಯ. ಕಗ್ಗವು ವಿದ್ವಾಂಸರಿಗೆ ಚಿಂತನೆ, ಆಲೋಚನೆ, ಸತ್ಯಶೋಧನೆಗಳಿಗೆ ಆಗರವಾದರೆ, ಸಾಮಾನ್ಯರಿಗೆ ಸಾಂತ್ವನ ಹಾಗೂ ಮನಃಪರಿವರ್ತನೆಗಳಿಗೆ ಕಾರಣವಾಗಿದೆ. ಮಹಾಭಾರತವು ಎಷ್ಟು ಸಾರ್ವಕಾಲಿಕ ಸತ್ಯವೋ ಅಂತೆಯೇ ಕಗ್ಗವೂ ಕೂಡ ಸಾರ್ವಕಾಲಿಕ ಸತ್ಯವನ್ನು ನಿರಂತರವಾಗಿ ಪ್ರತಿಪಾದಿಸುತ್ತದೆ.

ಸಂದೇಹವೀ ಕೃತಿಯೊಳಿನ್ನಿಲ್ಲವೆಂದಲ್ಲ ।
ಇಂದು ನಂಬಿಹುದೆ ಮುಂದೆಂದುಮೆಂದಲ್ಲ ॥
ಕುಂದು ತೋರ್ದಂದದನು ತಿದ್ದಿಕೊಳೆ ಮನಸುಂಟು ।
ಇಂದಿಗೀ ಮತವುಚಿತ - ಮಂಕುತಿಮ್ಮ ॥

ಈ ಕೃತಿಯಲ್ಲಿ ಪ್ರತಿಪಾದಿತವಾಗಿರುವ ತತ್ತ್ವಗಳು ಇಂದಿಗೆ ಉಚಿತವಾಗಿರುವವು. ಇದೇ ಪರಮೋಚ್ಚ ಸತ್ಯಗಳು ಎಂಬ ನಂಬಿಕೆಯು ಶಾಶ್ವತವಾಗಿರಬೇಕೆಂದಿಲ್ಲ. ಇದರಲ್ಲಿ ಏನಾದರು ಲೋಪ, ಕುಂದುಕೊರತೆಗಳಿದ್ದಲ್ಲಿ ಅದನ್ನು ತಿದ್ದಿಕೊಳುವುದು ಎಂಬ ಡಿವಿಜಿಯವರ ಮಾತುಗಳು ಅವರ ಮಹಾನ್ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿವೆ.

ಕಗ್ಗದ ಪೀಠಿಕೆಯಲ್ಲಿ ಬರುವ ತಿಮ್ಮ ಗುರು ಡಿವಿಜಿಯವರ ಕಾಲ್ಪನಿಕ ವ್ಯಕ್ತಿ. ಆತನ ಚಿಂತನೆಗಳ ಸಾರಸಂಗ್ರಹವೇ 'ಮಂಕುತಿಮ್ಮನ ಕಗ್ಗ'. ಆಧುನಿಕತೆ, ನಗರೀಕರಣಗಳ ಸೆಳವಿಗೆ ಸಿಲುಕಲಿದ್ದ ಸೋದರಳಿಯ ಸೋಮಿಗೆ ಮಾವ ತಿಮ್ಮ ಗುರು ತೋರಿದ ಮಾರ್ಗದರ್ಶನವೇ ಕಗ್ಗ. ಇಲ್ಲಿ ಸೋಮಿಯ ಪಾತ್ರವು ಜೀವನದ ಬವಣೆಗೆ ಸಿಲುಕಿ ಪರಿಹಾರ ಕಾಣದೆ ತೊಳಲುತ್ತಿರುವ ಜನಸಾಮಾನ್ಯರನ್ನು ಪ್ರತಿನಿಧಿಸುತ್ತದೆ. 'ಕಗ್ಗ' ಪದದ ಅರ್ಥವೇ ವಿಚಿತ್ರವಾದುದು. ಸಾಮಾನ್ಯಾರ್ಥದಲ್ಲಿ ಕಗ್ಗವೆಂದರೆ ಬೇಸರ ಹುಟ್ಟಿಸುವ ಹರಟೆ, ಕೆಲಸಕ್ಕೆ ಬಾರದ ಮಾತುಕತೆ, ಕಗ್ಗಂಟು ಎಂದು. ಪಾಶ್ಚಾತ್ಯೀಕರಣ, ಆಧುನಿಕತೆಗಳ ಬೆಡಗಿಗೆ ಮಾರುಹೋಗಿರುವ ಇಂದಿನ ಜನತೆಗೆ ಯಾವುದೇ ಉಪದೇಶವೂ

ಈ ಸಂಚಿಕೆಯು ಮುಕ್ತಕಮಾಲೆಯ ಮೊದಲ ರತ್ನವಾದ್ದರಿಂದ ಸುದೀರ್ಘ ವಿವರಣೆಯನ್ನು ನೀಡುವುದು ಅಗತ್ಯವೆಂದು ತೋರಿತು. ಮುಂದಿನ ಸಂಚಿಕೆಗಳು ಕಗ್ಗದ ಮುಕ್ತಕಗಳಂತೆಯೆ ಮುದ್ದಾಗಿ, ಚೊಕ್ಕವಾಗಿ ಸಂಕ್ಷಿಪ್ತವಾಗಿರುವವು. ನನ್ನ ಮನದಾಳದಲ್ಲಿ ತೆರೆತೆರೆಯಾಗಿ ಮೇಲೇಳುತ್ತಿದ್ದ ಆಲೋಚನಾತರಂಗಗಳಿಗೆ ಬರಹರೂಪವನ್ನು ಕೊಡಲು ಪ್ರೇರೇಪಿಸಿದ ಬೃಂದಾವನ ಸಂಸ್ಥೆಗೆ ನನ್ನ ಹೃತ್ಪೂರ್ವಕ ವಂದನೆಗಳು.

(ಮುಂದುವರೆಯುವುದು)





ಚಿತ್ರಗಳು : ನರಸಿಂಹ ಮೂರ್ತಿ



# ದೇವರ ಆರತಿಗಳ ವೈವಿಧ್ಯ

**ಟಿ. ಆರ್. ಮಂಜುನಾಥ,** *ಬೆಂಗಳೂರು*

**ಭಾ**ರತದಲ್ಲಿ ಶ್ರಾವಣ ಮಾಸ ಪ್ರಾರಂಭದಿಂದ ಕಾರ್ತಿಕಮಾಸದವರೆಗೆ ಹಬ್ಬಗಳ ಸರತಿ ಸಾಲು. ಬಹುಶಃ ಹಿಂದೆ ಈ ಸಮಯದಲ್ಲಿ ಎಲ್ಲರಿಗೂ ತಮ್ಮ ಕೆಲಸದ ಕ್ಷೇತ್ರದ ಬಿಡುವಿನ ಸಮಯವಿರಬಹುದು. ಆದರೆ ಈ ಹಬ್ಬಗಳನ್ನು ಹುಟ್ಟುಹಾಕಿದವರು ಮಹಿಳೆಯರು. ಏಕೆಂದರೆ ಯಾವ ವ್ರತ ಕಥೆಯನ್ನೇ ನೋಡಿ, ಆ ವ್ರತಗಳನ್ನು ನದಿ ತೀರದಲ್ಲಿ ಆಚರಿಸುತ್ತಿದ್ದದ್ದು ಮಹಿಳೆಯರೇ. ಪ್ರಕೃತಿ ಮಾತೆ ಶಾಂತಿಪ್ರಿಯಳು ಹಾಗೂ ಸಂಭ್ರಮಪಡುವವಳು. ಅದಕ್ಕಾಗಿಯೇ ತನ್ನ ಮಡಿಲಲ್ಲಿ ವಿವಿಧ ರೀತಿಯ ಹೂವು, ಹಣ್ಣುಗಳನ್ನು ಬೆಳೆಸಿ ಶೃಂಗರಿಸಿಕೊಂಡಿದ್ದಾಳೆ. ನೋಡುಗರಿಗೂ ಮುದ ನೀಡುತ್ತಾಳೆ. ಅದೇ ರೀತಿ ಪ್ರಕೃತಿಯ ಪ್ರತಿರೂಪವಾದ ಸ್ತ್ರೀ ಸಹ ಶಾಂತಿಪ್ರಿಯಳು ಹಾಗೂ ಸಂತೋಷ-ಸಂಭ್ರಮ ಹುಟ್ಟು ಹಾಕಿ ಅನುಭವಿಸುವವಳು. ಗಂಡಸರ ದರ್ಪ, ದುಷ್ಟತನ ತಡೆಯಲು ಹಾಗೂ ದೇವರಲ್ಲಿ ಭಯ-ಭಕ್ತಿ ಮೂಡಿಸಲು ಅವರು ಕಂಡುಕೊಂಡ ದಾರಿಯೇ ಈ ಹಬ್ಬ ಹರಿದಿನಗಳಿರಬೇಕು.

ಈಗಲೂ ಹಬ್ಬ ಹರಿದಿನಗಳು ಬಂದಾಗ ಹೆಚ್ಚು ಸಂಭ್ರಮಪಡುವವರು ಮಹಿಳೆಯರೇ! ಹೆಣ್ಣಿಲ್ಲದೆ ಯಾವ ಹಬ್ಬವೂ ಶೋಭಿಸದು. ಅವರು ಹಬ್ಬಕ್ಕಾಗಿ ಮಾಡುವ ಸಿದ್ಧತೆಗಳು, ಅಲಂಕಾರಗಳು ಒಂದೇ, ಎರಡೇ? ಗಂಡಸು ಇದನ್ನೆಲ್ಲಾ ನೋಡಿ ಆನಂದಿಸುವ ಮೂಕ ಪ್ರೇಕ್ಷಕ ಅಷ್ಟೆ!ಹೆಚ್ಚೆಂದರೆ ಮಹಿಳೆಯರ ಈ ಕಾರ್ಯದಲ್ಲಿ ಸಹಕಾರ ಕೊಡಬಹುದು.

ಈ ಎಲ್ಲ ಹಬ್ಬಗಳಲ್ಲೂ ದೇವರನ್ನು ತಮ್ಮಂತೆ ಭಾವಿಸಿ, ಊಟ ಉಪಚಾರಗಳನ್ನು ಮಾಡಿ ಧನ್ಯತೆ ಪಡೆಯುತ್ತಾರೆ. ಹೀಗೆ ಮಾಡುವ ಹಬ್ಬಗಳಲ್ಲಿ ಅವರು ವೈವಿಧ್ಯತೆಯನ್ನು ತಂದಿದ್ದಾರೆ. ಪ್ರತಿಯೊಂದು ಹಬ್ಬದಲ್ಲೂ ದೇವರಿಗೆ ಷೋಡಶೋಪಚಾರ ಪೂಜೆ ಮಾಡುವುದು ರೂಢಿ. ಆದರೆ ಈ ಷೋಡಶೋಪಾಚಾರದಲ್ಲಿಯೂ ಹೊಸತನವನ್ನು ರೂಢಿಸಿದ್ದಾರೆ.

ಒಂದೊಂದು ಹಬ್ಬಕ್ಕೆ ಒಂದೊಂದು ಪ್ರಮಾಣ ನಿರ್ಣಯಿಸಿದ್ದಾರೆ. ಉದಾಹರಣೆಗೆ ಗೌರಿ ಹಬ್ಬಕ್ಕೆ ವಿಶಿಷ್ಟ ರಂಗೋಲಿ, ೧೬ ಬಗೆಯ ಹೂವು, ಪತ್ರೆ, ವಿವಿಧ ಅಡುಗೆಯ ಜೊತೆಗೆ 16 ಹೋಳಿಗೆ ಅಥವಾ ಅತಿರಸ, ಹಾಗೂ 16 ಬಗೆಯ ಆರತಿ ಎತ್ತುವುದಾದರೆ, ಗಣಪತಿಗೆ ವಿಶಿಷ್ಟ ರಂಗೋಲಿ, 21 ಬಗೆಯ ಹೂವು, ಪತ್ರೆ, ವಿವಿಧ ಅಡುಗೆಯ ಜೊತೆಗೆ 21 ಕರಿಗಡುಬು ಮತ್ತು ಆರತಿ. ಅನಂತನಿಗೆ ವಿಶಿಷ್ಟ ರಂಗೋಲಿ,14 ಬಗೆಯ ಹೂವು, ಪತ್ರೆ, ವಿವಿಧ ಅಡುಗೆಯ ಜೊತೆಗೆ 14 ಹೋಳಿಗೆ ಮತ್ತು 14 ಆರತಿ. ಹೀಗೆ ತಾವು ಆಚರಿಸುವ ಪ್ರತಿಯೊಂದು ಹಬ್ಬದಲ್ಲೂ ಪ್ರಕೃತಿಯಲ್ಲಿ ಸಿಗುವ ಅಮೂಲ್ಯವಾದ ಔಷಧೀಯ ಗುಣಗಳಿಂದ ಕೂಡಿದ ವಿವಿಧ ಪತ್ರೆ, ಪುಷ್ಪ, ಫಲಗಳನ್ನು ಬಳಸುವುದರ ಜೊತೆಗೆ ತಮ್ಮ ಪಾಕ ಪ್ರಾವೀಣ್ಯತೆಯನ್ನು ತೋರಿಸುವ ಪ್ರಯತ್ನವನ್ನು ಮಾಡಿದ್ದಾರೆ. ಇದರಿಂದ ಪ್ರಕೃತಿಯ ಅನೇಕ ಬಗೆಯ ಪತ್ರೆ, ಪುಷ್ಪ ಹಾಗೂ ಫಲಗಳು ಇಂದಿಗೂ ಉಳಿದುಕೊಂಡಿವೆ. ಇದರ ಜೊತೆಗೆ ಪ್ರತಿ ಹಬ್ಬಕ್ಕೆ ಹತ್ತಿ ಮತ್ತು ಸಂತತತಗಡು ಉಪಯೋಗಿಸಿ ತಯಾರಿಸುವ ವಿವಿಧ ರೀತಿಯ ಗೆಜ್ಜೆ ವಸ್ತ್ರಗಳು ನಿಜಕ್ಕೂ ಶ್ಲಾಘನೀಯ.

ಈ ಹಬ್ಬಗಳಲ್ಲಿ ದೇವರ ಮನೆ ಅಥವಾ ಒಂದು ಪ್ರತ್ಯೇಕ ಸ್ಥಳದಲ್ಲಿ ದೇವರನ್ನು ಅಲಂಕರಿಸಿ , ಸ್ಥಾಪಿಸಿ ಪೂಜೆ ಮಾಡುವುದು ರೂಢಿ. ಗಂಗೆ ತಂದು, ಹೊಸಿಲಿಗೆ ಪೂಜೆ ಮಾಡಿ, ಗಂಗೆಗೆ ಪೂಜೆ ಮಾಡಿ, ದೇವರ ಪ್ರಾಣ ಪ್ರತಿಷ್ಠೆ ಮಾಡಿ, ಅರ್ಘ್ಯ, ಪಾದ್ಯ, ಆಚಮನ ಮಾಡಿಸಿ, ಲಘು ಉಪಹಾರಕ್ಕೆ ಮಧುಪರ್ಕವನ್ನು ಕೊಟ್ಟು, ಸ್ನಾನ ಮಾಡಿಸಿ, ವಸ್ತ್ರ ತೊಡಿಸಿ, ವಿವಿಧ ಅಲಂಕಾರಗಳನ್ನು ಮಾಡಿ, ಧೂಪ, ದೀಪಗಳನ್ನು ಬೆಳಗಿ, ಊಟ ಉಪಚಾರಗಳನ್ನು ನೈವೇದ್ಯ ಮಾಡಿ, ಮಂಗಳಾರತಿ ಎತ್ತಿ, ಹಾಡು, ಮಂತ್ರಪುಷ್ಪ ಅರ್ಪಿಸಿ, ನಮಸ್ಕಾರ ಮಾಡಿ , ಮುತ್ತೈದೆಗೆ ಬಾಗಿನ, ವಿಪ್ರನಿಗೆ ದಾನ ಕೊಟ್ಟು, ದೇವರ ಪ್ರಸಾದ ರೂಪದಲ್ಲಿ ತೀರ್ಥ ಹಾಗೂ ದೇವರಿಗೆ ಏರಿಸಿದ ಹೂವನ್ನು ಪ್ರಸಾದ ರೂಪದಲ್ಲಿ ಪಡೆದು ಧನ್ಯತೆ ಪಡೆಯುತ್ತಾರೆ. ಹಬ್ಬಗಳಲ್ಲಿ ಬಳಸುವ ವಿವಿಧ ಆರತಿಗಳ ಪರಿಚಯಿಸುವುದು ಈ ಲೇಖನದ ಉದ್ದೇಶ.



ಸಾಮಾನ್ಯವಾಗಿ ಹಿತ್ತಾಳೆ, ತಾಮ್ರ, ಕಂಚು, ಬೆಳ್ಳಿ ಇಲ್ಲವೇ ಬಂಗಾರದ ಪಾತ್ರೆ, ಆರತಿಗಳನ್ನು ಮಾತ್ರ ದೇವರ ಪೂಜೆಗೆ ಉಪಯೋಗಿಸುತ್ತಾರೆ (ಇತ್ತೀಚೆಗೆ ಸ್ಟೀಲ್ ಹಾಗೂ ಜರ್ಮನ್ ಸಿಲ್ವರ್ ಪಾತ್ರೆಗಳನ್ನು ಬಳಸುವವರೂ ಇದ್ದಾರೆ). ಪ್ರತಿಯೊಂದು ಹಬ್ಬಕ್ಕೂ ನಿರ್ದಿಷ್ಟ ಸಂಖ್ಯೆಯ ಆರತಿಗಳು ಬೇಕಾಗುವುದರಿಂದ, ಪ್ರತಿಯೊಂದು ಮನೆಯಲ್ಲಿ ಆರತಿಯ ಒಂದು ಸಂಗ್ರಹವೇ ಇರುತ್ತದೆ. ನಮ್ಮ ಮನೆಯಲ್ಲಿರುವ ಆರತಿ ಸಂಗ್ರಹದ ಒಂದು ಚಿತ್ರಣ ಮುಂದಿನ ಪುಟದಲ್ಲಿದೆ

ದೇವರಿಗೆ ಆರತಿ ಎತ್ತಲು ಬಳಸುವ ಮೇಲಿನ ಎಲ್ಲಾ ಆರತಿಗಳು ಮೊದಲೇ ತಯಾರಾಗಿ ಬಂದಿದ್ದು, ಇದರಲ್ಲಿ ಏಕತಾನತೆ ಕಂಡು ಆರತಿಯಲ್ಲೂ ವೈವಿಧ್ಯ ತುಂಬಲು ಮಹಿಳೆಯರು ಪ್ರಯತ್ನಿಸಿದ್ದಾರೆ. ಪರಿಣಾಮವೇ ತಟ್ಟೆ ರಂಗೋಲಿ. ವಿವಿಧ ಆಕಾರದ ಹಿತ್ತಾಳೆ, ತಾಮ್ರದ ತಟ್ಟೆಗಳನ್ನು ಚೆನ್ನಾಗಿ



ದೇವರ ಪೂಜೆಗೆ ಸಿದ್ಧಪಡಿಸಲು ತೆಗೆದಿಟ್ಟ ವಿವಿಧ ಆರತಿಗಳು



ದೇವರ ಪೂಜೆಗೆ ಬತ್ತಿ, ಕರ್ಪೂರ ಹಾಕಿ ಸಿದ್ಧಪಡಿಸಿದ ವಿವಿಧ ಆರತಿಗಳು



ಎಣ್ಣೆಯಲ್ಲಿ ರಂಗೋಲಿ ಬಿಡಿಸಿ ಅರಿಶಿನ, ಕುಂಕುಮ ಬಳಸಿ ತಯಾರಿಸಿದ ಆರತಿ ತಟ್ಟೆಗಳು.



ಮಣಿ ಬಳಸಿ ತಯಾರಿಸಿದ ಆರತಿ ತಟ್ಟೆ



ಧಾನ್ಯಗಳನ್ನು ಬಳಸಿ ತಯಾರಿಸಿದ ಆರತಿ ತಟ್ಟೆ



ಕದಲಾರತಿ

ಹೊಳೆಯುವಂತೆ ತೊಳೆದು, ಅದರಲ್ಲಿ ಎಣ್ಣೆಯಿಂದ ತಮಗೆ ಗೊತ್ತಿರುವ ವಿವಿಧ ಆಕಾರದ ರಂಗೋಲಿಗಳನ್ನು ಬರೆದು ಅದರ ಮೇಲೆ ಅರಶಿನ ಅಥವಾ ಕುಂಕುಮ ಬಿಟ್ಟು ಹೆಚ್ಚಿನದನ್ನು ತೆಗೆದರೆ, ತಟ್ಟೆಯಲ್ಲಿ ಸುಂದರ ರಂಗೋಲಿ ಸಿದ್ದ! ಈ ತಟ್ಟೆಯ ತುದಿಯಲ್ಲಿ ಸ್ವಲ್ಪ ಬಾಳೆಹಣ್ಣು ಸವರಿ ಅದರ ಮೇಲೆ ತುಪ್ಪದಲ್ಲಿ ನೆನೆಸಿದ ಬತ್ತಿಗಳನ್ನು ಒತ್ತಿಟ್ಟು, ತಟ್ಟೆಯ ಮಧ್ಯದಲ್ಲಿ ಕರ್ಪೂರ ಇಟ್ಟು ಅದನ್ನು ಹತ್ತಿಸಿ, ಗಂಟೆ , ಜಾಗಟೆ, ಶಂಖ, ಮಂತ್ರ ಘೋಷಗಳ ಮಧ್ಯೆ ದೇವರಿಗೆ ಆರತಿ ಎತ್ತಿದಾಗ ಆ ಸೊಬಗು ನಿಜಕ್ಕೂ ಅವರ್ಣನೀಯ. ಈ ತಟ್ಟೆಗಳಲ್ಲಿ ಅರಶಿನ ಕುಂಕುಮವಲ್ಲದೆ, ಕೆಲವರು ಸುನೇರಿ ಪುಡಿ, ಮಣಿ, ಧಾನ್ಯ, ಹೂವಿನ ಎಸಳುಗಳುಗಳನ್ನು ಬಳಸಿ ಕೂಡ ವಿವಿಧ ವಿನ್ಯಾಸಗಳನ್ನು ಮಾಡಿ ಆರತಿ ತಟ್ಟೆಗೆ ಇನ್ನಷ್ಟು ವೈವಿಧ್ಯತೆ ಮೂಡಿಸಿದ್ದಾರೆ.

ಈ ಎಲ್ಲ ವೈವಿಧ್ಯಮಯ ಆರತಿಗಳನ್ನು ದೇವರಿಗೆ ಎತ್ತಿದ ಮೇಲೆ ಕೊನೆಯಲ್ಲಿ ಕದಲಾರತಿ ಎತ್ತುವುದು ಪರಂಪರೆಯಿಂದ ಬಂದ ಪದ್ಧತಿ. ಈ ಕದಲಾರತಿಗೆ ಒಂದು ಚಿಕ್ಕ ಬೆಳ್ಳಿ, ಹಿತ್ತಾಳೆ ಅಥವಾ ತಾಮ್ರದ ತಟ್ಟೆಯಲ್ಲಿ ಎರಡು ಚಿಕ್ಕ ದೀಪಗಳನ್ನಿಟ್ಟು ಅದರಲ್ಲಿ ಹೂ ಬತ್ತಿ, ತುಪ್ಪ ಬಳಸಿ, ಆ ತಟ್ಟೆಗೆ ಸ್ವಲ್ಪ ನೀರು, ಕುಂಕುಮ ಹಾಕಿ ನೀರನ್ನು ಕೆಂಪು ಬಣ್ಣ ಮಾಡಿ ಜೊತೆಗೆ ಒಂದು ಹೂವನ್ನು ಹಾಕಿ, ಸ್ವಲ್ಪ ಅಕ್ಷತೆ ಕಾಳು ಹಾಕಿ, ನಂತರ ಎರಡು ದೀಪಗಳನ್ನು ಹೊತ್ತಿಸಿ ದೇವರಿಗೆ ಆರತಿ ಎತ್ತುತ್ತಾರೆ. ಈ ಆರತಿಯನ್ನು ಎಲ್ಲರಿಗೂ ತೋರಿಸಿ ನಂತರ ಕೈ ತೊಳೆದು, ಹೂವು ಅಕ್ಷತೆಯನ್ನು ದೇವರಿಗೆ ಅರ್ಪಿಸಿ ಪ್ರದಕ್ಷಿಣೆ ನಮಸ್ಕಾರ ಮಾಡಿದರೆ, ಪೂಜೆಯ ಒಂದು ಹಂತ ಮುಗಿದಂತೆ.

ಹೀಗೆ ದೇವರಿಗೆ ಅಲಂಕಾರ, ಗೆಜ್ಜೆವಸ್ತ್ರ, ನೈವೇದ್ಯ ಹಾಗೂ ಆರತಿ ಎಲ್ಲ ಕ್ರಿಯೆಯಲ್ಲೂ ಮಹಿಳೆ ತನ್ನ ಕೌಶಲವನ್ನು ತೋರುವ ಸಾಹಸ ಮಾಡಿದ್ದಾಳೆ. ಪ್ರಕೃತಿ ತನ್ನ ಸೌಂದರ್ಯವನ್ನು ಮಹಿಳೆಯರ ಮುಖಾಂತರವೂ ಜಗತ್ತಿಗೆ ತೋರಿಸಿದ್ದಾಳೇನೋ ಎಂದೆನಿಸಿದರೆ ತಪ್ಪೇನಿಲ್ಲ.

ಈ ಆರತಿ ಏಕೆ ಎತ್ತಬೇಕು, ಅದರಿಂದ ಏನು ಪ್ರಯೋಜನ, ಅದರ ಸಂಕೇತ ಏನು ಎಂದು ಅನೇಕರು ತಮಗೆ ತಿಳಿದಂತೆ ವ್ಯಾಖ್ಯಾನಿಸಿದ್ದಾರೆ. ಆದರೆ ಈ ಎಲ್ಲ ಸಂಭ್ರಮಾಚರಣೆಗಳನ್ನು ಬಳಕೆಗೆ ತಂದ ಆ ಹಿಂದಿನ ಕಾಲದ ಮಹಿಳೆಯರು ತಮ್ಮ ಸಂಭ್ರಮ, ಸಂತೋಷಕ್ಕಾಗಿ ಇದನ್ನೆಲ್ಲ ಮಾಡಿದರೇ ಹೊರತು ಯಾವ ಬೇರೆ ಅರ್ಥ, ಉದ್ದೇಶ ಇರಲಿಕ್ಕಿಲ್ಲ. ಭಕ್ತಿ, ಶ್ರದ್ಧೆ, ಪರಿಪೂರ್ಣ ನಂಬಿಕೆಯಿಂದ ಮಾಡುವ ಎಲ್ಲ ಕೆಲಸಗಳು ಆ ನಿರ್ಮೋಹಿಯಾದ ಭಗವಂತನ ಅನುಗ್ರಹಕ್ಕೆ ಪಾತ್ರವಾಗುತ್ತವೆ.



# ನನ್ನ ಕವನ

ಸತ್ಯ(ಸತೀಶ್)

## ಬನ್ನಿ ಗೆಳೆಯರೇ ಬನ್ನಿ

ಬನ್ನಿ ಗೆಳೆಯರೇ ಬನ್ನಿ
ಒಮ್ಮೆ ಹೋಗಿ ಬರೋಣ
ಬಾಲ್ಯದಾ ನೆನಪಿನಂಗಳಕೆ
ನೆನೆದೊಡೆ ಸಂತಸದ ಬಾಗಿಲ ತೆರೆವ ಜಗಕೆ!

ಅಂದು ಮನೆಯೇ ಮೊದಲ ಪಾಠಶಾಲೆ,
ಅಲ್ಲಿತ್ತು ಆಡಿಸುತ್ತಾ ಕಲಿಸುವಾ ಕಲೆ.
ಅಜ್ಜ ಅಜ್ಜಿ ಅಮ್ಮನೇ ಮೊದಲ ಗುರುವು,
ಅವರ ನುಡಿ ಕೇಳಿ ಹಸನಾಗಿತ್ತು ಮನವು!

ಚಿನ್ನಿ ದಾಂಡು, ಗೋಲಿ, ಬುಗುರಿ,
ಮರಕೋತಿ, ಕಣ್ಣಾಮುಚ್ಚಾಲೆ,
ಕಳ್ಳ ಪೋಲಿಸ್, ಕುಂಟೆಬಿಲ್ಲೆ,
ಅವಲಕ್ಕಿ, ಪವಲಕ್ಕಿ, ಲಗೋರಿ!

ಒಂದಲ್ಲ ಎರಡಲ್ಲ ಬಗೆ ಬಗೆಯ ಆಟ,
ಬೆನ್ನು ಹೊರೆಯಾಗದಂತ ಪಾಠ.
ಪೆಪ್ಪರಮಿಂಟು ಬೊಂಬೆ ಬಿಸ್ಕತ್ತು,
ನಮಗಾಗಿತ್ತು ಆಗ ಸಕಲ ಸಂಪತ್ತು!

ನಾವಾಡಿದಾ ಆಟಗಳು ನೆನಪಿದೆಯ
ಗಂಡು ಹೆಣ್ಣೆಂಬ ಭೇದವಿರದ ಹೃದಯ,
ಸ್ನೇಹದಿಂದ ಬಿರಿದ ಹೂವಾಗಿತ್ತು ಕಾಯ
ಅಂದಿನಾ ಮಜಾ ಇಂದಿಲ್ಲ ನಿಶ್ಚಯ!

ನೆನಪಿದೆಯಾ ಆಗೆಲ್ಲಾ ವಠಾರದ ಮನೆ
ಅಲ್ಲಿರಲಿಲ್ಲ ಯಾವ ತರತಮದ ಜನ,
ಅತ್ತೆ ಮಾವ ಎನ್ನುತ ಎಲ್ಲರ ಮನೆಯ
ಪರಪುಟ್ಟನಾಗಿ ನಲಿದಿತ್ತು ಮನ!

ಸೋಲು ಗೆಲುವು ಎಲ್ಲವನು ಮರೆತು
ನಗು ನಗುತಾ ಎಲ್ಲ ಒಂದಾಗಿ ಕಲೆತು
ಗೆಳೆಯರೆಲ್ಲರೂ ಸುತ್ತ ಕುಳಿತು
ಅಮ್ಮನಾ ಕೈ ತುತ್ತು ತಿನ್ನುತಾ ಆಡಿದಾ
ಮಾತು!

ಆಹಾ ಎನಿತು ಚಂದ ಆ ಬಾಲ್ಯದಾ ದಿನ
ನೆನೆದೊಡನೆ ಹೂವಾಗುವುದು ಮನ





## ವಿಹರಿಸು ಮನವೇ

ವಿಹರಿಸು ಮನವೇ ವಿಹರಿಸು
ಅತ್ತಿತ್ತ ಎತ್ತಲೋ ಅಲೆಯದೆ
ಚಿಂತೆ ಜಾಡ ಹಿಡಿಯದೆ
ಸವಿನೆನಪಿನಾ ಬನದಲಿ!

ತಂಪು ಗಾಳಿ ಬೀಸುವಲ್ಲಿ
ಹೂವು ಕಂಪು ಬೀರುವಲ್ಲಿ
ತಳಿರ ತಂಪ ನೆರಳಿನಲ್ಲಿ
ಮಧುರ ಗಾನ ಕೇಳುವಲ್ಲಿ!

ಸವಿ ನುಡಿಯ ಆಡುವಲ್ಲಿ
ಸಂತಸದ ಬೀಡಿನಲ್ಲಿ
ಒಂಟಿತನವ ನೀಗುವಲ್ಲಿ
ಗೆಳೆತನವ ಬೆಸೆಯುವಲ್ಲಿ!

ಹೊಸ ಹುರುಪು ತುಂಬುವಲ್ಲಿ
ಚಿತ್ತ ಕ್ಷೋಭೆ ಕಳೆಯುವಲ್ಲಿ
ಮತ್ತೆ ಶೋಭೆ ಬೆಳಗುವಲ್ಲಿ
ತನುವ ತಲ್ಲಣ ತಣಿಯುವಲ್ಲಿ!!!

# ನನ್ನ ಕವನ



ಡಾ. ಮಾರುತಿ ರಾಮ್, ಬೆಂಗಳೂರು

## ಶ್ವೇತಾಂಬರಿ

ಶ್ವೇತಾಂಬರಿ ಸುರಸುಂದರಿ
ಸಸ್ಯ ಶ್ಯಾಮಲೆ।
ಮಂಜು ಮೈಯ್ಯ ಮೇಲೆ
ಧರಿಸಿ ನಿಂತ ಕೋಮಲೆ॥

ಬಿಳಿಯ ಸೀರೆಯುಟ್ಟು ಧರಣಿ
ಯಕ್ಷಿಯಾದಳು।
ಸುರಲೋಕವೆ ಧರೆಗಿಳಿಯಿತು
ಇದುವೆ ನಾಕವು॥

ಮಳೆಯು ಬಂದು ಇಳೆಯು ತುಂಬಿ
ಹರಿದ ಹೊನಲದು।
ನೆಲವು ನೆನೆದು ಭಾವಸಿಂಧು
ಜೀವದುಸಿರದು॥

ಎಲೆ ಉದುರಿತು ಮರವು ಅದುರಿ
ಬರಿಯದಾಯಿತು।
ಹಿಮವ ಮುಡಿದು ಜೀವತಳೆದು
ಬಾಳದಾಯಿತು॥

ಛಳಿಯಾಯಿತು ಮಳೆಯಾಯಿತು
ಹಿಮವು ಸುರಿಯಿತು।
ಎಲ್ಲ ಮರದ ಕೊಂಬೆ ಕೊಂಬೆ
ಬಿಳಿಯದಾಯಿತು॥

ಇವಳೇ ಜನನಿ ನಮ್ಮ ಧರಣಿ
ನಮ್ಮ ಪೊರೆವಳು।
ಬೇಸಿಗೆಯಲ್ಲಿ ಹಿಮವು ಕರಗಿ
ಹಸಿರಾಗುವಳು॥
ಮತ್ತೆ ನಗುವಳು।
ಹೆಸರಾಗುವಳು॥

## ಅಮೆರಿಕ ಅಮೆರಿಕ

ಅಮೆರಿಕ ಅಮೆರಿಕ
ನಿನ್ನೊಳಗೆ ಹುದುಗಿವೆ ವಿಷಯ ಅನೇಕ

ಎಲ್ಲರನೂ ಸೆಳೆಯುವೆ ನಿನ್ನತ್ತ
ತಿರುಗುವರು ಎಲ್ಲರೂ ನಿನ್ನ ಸುತ್ತ
ಕಾಲ ಜಾರುವುದು ತಾನು ನೋಡುನೋಡುತ್ತಾ

ಎಲ್ಲೂ ಇಲ್ಲದ ಶುಭ್ರ ಚಿಂತನೆಯು ನಿನ್ನದೆ
ಎಲ್ಲೂ ಕಾಣದ ದೂರ ದೃಷ್ಟಿಯು ನಿನ್ನದೆ
ಎಲ್ಲರನ್ನು ಒಮ್ಮೆಲೇ ಸೆಳೆದಿಹುದು ನಿನ್ನೆದೆ

ಬಡವ ಬಲ್ಲಿದನೆಂಬ ತಾರತಮ್ಯವು ಇಲ್ಲ
ಸಮಾನತೆಯ ಮಂತ್ರವೇ ಇಲ್ಲಿ ಎಲ್ಲ
ಮಾಡು ಇಲ್ಲವೆ ಮಡಿ ಎಂಬ ಸೊಲ್ಲ

ಯಾರದೋ ತಾಯಿಯ ಮಕ್ಕಳನು ಸಾಕುವೆ
ಎಲ್ಲವನು ಕೊಟ್ಟು ನಲುಮೆಯಲಿ ಸಲಹುವೆ
ನಿನ್ನೆದೆಯ ವಿಶಾಲ ಹೃದಯದಲಿ ಹುದುಗಿಸುವೆ

ಏಕತೆಯ ಚಿಂತನೆಗೆ ನಿನಗೆ ಜೈ ಎನ್ನುವೆ
ಪ್ರತಿಭೆಯ ಪೂಜೆಗೆ ನಿನ್ನ ಸೈ ಎನ್ನುವೆ
ನಿನ್ನೆತ್ತರದ ವಿಚಾರಕೊಮ್ಮೆ ಕೈ ಮುಗಿಯುವೆ

# ಅಪ್ಪಂದಿರ ದಿನದ ವಿಶೇಷ

## *ಅಪ್ಪಾ - ನೀ ಅನುರೂಪ*

*ನಂಬಿಕೆಯ ಬುನಾದಿ ನೀನು*
*ಆತ್ಮವಿಶ್ವಾಸದ ಸಾಗರ ನೀನು*
*ಪರಿಪೂರ್ಣತೆಯ ಸ್ವರೂಪವೆ ನೀನು*
*ನವ ಚೈತನ್ಯದ ಮೂರುತಿ ನೀನು*

*ಅಪ್ಪಾ - ನೀ ಅನುರೂಪ*

*ಈ ಜಗವೆಂಬ ರಂಗಮಂದಿರದಲ್ಲಿ*
*ನನ್ನ ಪಾತ್ರವ ನಿಭಾಯಿಸಲು*
*ಕಲಿಸಿದ ಗುರು ನೀನು*

*ನನ್ನ ಗೆಲುವಿಗಾಗಿ*
*ನಿನ್ನ ಸರ್ವಸ್ವವನ್ನೂ ತ್ಯಜಿಸಿ*
*ಸತ್ಪಥದಲ್ಲಿ ನಡೆವಂತೆ*
*ಈ ಬಾಳಿಗೆ ಬೆಳಕ ಚೆಲ್ಲಿದವ ನೀನು*

*ನನ್ನ ತಪ್ಪುಗಳನ್ನು ಮನ್ನಿಸಿ*
*ಕಣ್ಣ ರೆಪ್ಪೆಯಂತೆ ರಕ್ಷಿಸಿದ*
*ಪರಮ ವೀರ ನೀನು*


ನಿನ್ನ ಪ್ರೀತಿಯ ಅಪ್ಪುಗೆಯಲಿ
ನನ್ನ ಕನಸುಗಳನ್ನು ನನಸಾಗಿಸಲು
ಅವಿರತ ಶ್ರಮಿಸಿದ ಸಾಧಕ ನೀನು

ಜೀವನದ ಏರು- ಪೇರುಗಳನ್ನು
ಮೆಟ್ಟಿ ನಿಲ್ಲಲು ಹುರಿದುಂಬಿಸಿ
ಬೆನ್ನೆಲುಬಾಗಿ ಕಾಯ್ದಂತ
ಮಹಾನ್ ಯೋಧ ನೀನು

ಅಪ್ಪಾ - ನೀ ಅನುರೂಪ



**ಶ್ರೀವಿದ್ಯಾ ಪ್ರಶಾಂತ್**



ಛವಿ ಬೋಹರ್

ನನ್ನ ಹೆಸರು ಛವಿ, ಎಲ್ಲರಿಗೂ ತಂದೆಯಂದಿರ ದಿನಾಚರಣೆಯ ಶುಭಾಶಯಗಳು. ನನಗೆ ನನ್ನ ತಂದೆ ಎಂದರೆ ತುಂಬಾ ಇಷ್ಟ ಮತ್ತು ಪ್ರೀತಿ. ಅವರು ನನಗೆ ತುಂಬಾ ವಿಷಯಗಳನ್ನು ಹೇಳುತ್ತಾರೆ ಹಾಗೂ ಅವರು ಮಾಡುವ ಕೆಲಸದಲ್ಲಿ ನನ್ನನ್ನು ತೊಡಗಿಸಿಕೊಳ್ಳುತ್ತಾರೆ. ಅದರಿಂದ ನಾನು ತುಂಬಾ ವಿಷಯಗಳನ್ನು ಕಲಿಯುತ್ತಾ ಇರುತ್ತೇನೆ. ನನಗೆ ನನ್ನ ತಂದೆಯ ಜೊತೆ ಓಡುವುದು, ಆಟವಾಡುವುದು, ಅಂದರೆ ತುಂಬಾ ಇಷ್ಟ. ನಾನು ಹೇಳುವ ಕಥೆಗಳನ್ನು, ಅವರ ಸರಿಯಾಗಿ ಕೇಳುವುದು ನನಗೆ ಇನ್ನೂ ಇಷ್ಟ.

ಧನ್ಯವಾದಗಳು





ಲವ್ ಯು
ಅಪ್ಪ







ಲವ್ ಯು ಅಪ್ಪ












ಲವ್ ಯು ಅಪ್ಪ



ಲವ್ ಯು ಅಪ್ಪ


ಲವ್ ಯು
ಅಪ್ಪ





ಲವ್ ಯು
ಅಪ್ಪ


ತಂದೆಯರ ದಿನದ
ಶುಭಾಶಯ!
Aarna Naveen


happy father day
Shraavya Katta


ಲವ್ ಯು
ಅಪ್ಪ


ಲವ್ ಯು
ಅಪ್ಪ



ಚಾರ್ವಿ

ಎಲ್ಲಾರಿಗು ತಂದೆಯಂದಿರ ದಿನಾಚಾರಣೆಯ ಶುಭಾಶಯಗಳು ಅಪ್ಪ ಅಂದರೆ ನನಗೆ ತುಂಬಾ ಪ್ರೀತಿ, ಯಾಕೆ ಎಂದರೆ ಅವರು ನನ್ನ ಜೊತೆ ಆಟ ಆಡುತ್ತಾರೆ, ಪಾಠ ಹೇಳಕೊಡುತ್ತಾರೆ ಮತ್ತು ನನಗೆ ಇಷ್ಟವಾದದನ್ನು ಕೊಡಿಸುತ್ತಾರೆ. ಅವರಲ್ಲಿ ನನಗೆ ಇಷ್ಟವಾದ ಗುಣ, ತುಂಬಾ ತಮಾಷೆ ಮಾಡುವುದು ಮತ್ತು ಹೊಸ ಗೆಳೆಯರನ್ನು ಮಾಡಿಕೊಳ್ಳುವುದು. ಅದಕ್ಕೆ ಅಪ್ಪ ನೀವು ನನಗೆ ತುಂಬಾ ಇಷ್ಟ ಧನ್ಯವಾದಗಳು

















ಹಣ್ಣುಗಳ ರಾಜನೆಂದೇ ಕರೆಯಲ್ಪಡುವ "ಮಾವು",
ಒಂದು ಪರಿಪೂರ್ಣ ಹಣ್ಣು.
ಆರೋಗ್ಯಕರವೂ-ಸ್ವಾದಿಷ್ಟವೂ ಆಗಿರುವ ಈ ಹಣ್ಣನ್ನು ಇಷ್ಟ
ಪಡದವರು ಯಾರಿದ್ದಾರೆ ಹೇಳಿ?
ಪೌಷ್ಟಿಕಾಂಶಗಳಿಂದ ಸಂಪದ್ಭರಿತವಾದ,
ಔಷಧೀಯ ಗುಣವನ್ನೂ
ಹೊಂದಿರುವ ಈ ಹಣ್ಣು ಮಾನವರಿಗೆ ಅಮೃತ ಸಮಾನ!

ಈ ಬಾರಿಯ ಸಂಚಿಕೆಯಲ್ಲಿ ಮಾವಿನಿಂದ
ಮಾಡಬಹುದಾದಂತಹ
ಕೆಲವು ವಿಶೇಷ ಅಡುಗೆ ವಿಧಾನಗಳನ್ನು ಪ್ರಕಟಿಸಿದ್ದೇವೆ..
ನೀವೂ ಮಾಡಿ ಸವಿಯಿರಿ.




# ಮಾವಿನ ಹಣ್ಣಿನ ದೋಸೆ

ಉಷಾ ಬಸ್ರೂರ್

1 ಲೋಟ ಅಕ್ಕಿಯನ್ನು 3-4 ಗಂಟೆಗಳ ಕಾಲ ನೆನೆಸಿ, ತೊಳೆದು, ಮಿಕ್ಸಿಯಲ್ಲಿ ಒಂದೆರಡು ಸುತ್ತು ರುಬ್ಬಿಕೊಳ್ಳಿ.
ಅದಕ್ಕೆ ಅರ್ಧ ಲೋಟ ತೆಂಗಿನ ತುರಿ, 8-10 ಕಾಳುಮೆಣಸು, 1 ಚಮಚ ಜೀರಿಗೆ, 2 ದೊಡ್ಡ ಚಮಚ ಬೆಲ್ಲ(ಸಿಹಿ ಬೇಕಿದ್ದರೆ) ಸೇರಿಸಿ ನುಣ್ಣಗೆ ರುಬ್ಬಿಕೊಳ್ಳಬೇಕು.
ಆಮೇಲೆ ಹೋಳಾಗಿ ಕತ್ತರಿಸಿಕೊಂಡ 1 ಮಾವಿನ ಹಣ್ಣನ್ನು ಹಾಕಿ ರುಬ್ಬಿ, ರುಚಿಗೆ ತಕ್ಕಷ್ಟು ಉಪ್ಪು ಸೇರಿಸಿ,
ಉದ್ದಿನ ದೋಸೆ ಹದದಲ್ಲಿ ಹಿಟ್ಟು ಮಾಡಿಕೊಳ್ಳಿ.

ಈ ದೋಸೆಯನ್ನು ತಕ್ಷಣವೇ ಮಾಡಬಹುದು, ಅಥವಾ 7-8 ಗಂಟೆ ಬಿಟ್ಟೂ ಮಾಡಬಹುದು.
ಮಾವಿನ ಹಣ್ಣಿನ ಸೀಸನ್ ಮುಗಿಯೋದ್ರಲ್ಲಿ ಒಮ್ಮೆ ಮಾಡಿ ನೋಡಿ..







# ಮಾವಿನ ಹಣ್ಣಿನ ಕೇಸರಿಭಾತ್

ಜ್ಯೋತಿ ಪಂಡಿತ್

**ಸೂಚನೆ:** ನಿಮ್ಮಮನೆಯಲ್ಲಿರುವ ಯಾವುದಾದರೂ ಒಂದು ಕಪ್ ತೆಗೆದುಕೊಂಡು ಅದರಲ್ಲೆ ಎಲ್ಲವನ್ನೂ ಅಳತೆ ಮಾಡಿ



**ರುಚಿಯಾದ ಮಾವಿನ ಹಣ್ಣಿನ ಕೇಸರಿಭಾತ್ ಮಾಡಲು ಬೇಕಾಗುವ ಸಾಮಗ್ರಿಗಳು**

- ಮೀಡಿಯಂ ರವೆ 3/4 ಕಪ್
- ನೀರು 3/4 ಕಪ್
- ಹಾಲು 3/4 ಕಪ್
- ಸಕ್ಕರೆ ಅಥವಾ ಬೆಲ್ಲ 3/4 ಕಪ್ (ಇದು ಮಾವಿನ ಹಣ್ಣಿನ ಸಿಹಿಯನ್ನು ಅವಲಂಬಿಸಿರುತ್ತದೆ.ನಿಮ್ಮ ರುಚಿಗೆ ತಕ್ಕಷ್ಟು ಹಾಕಬಹುದು)
- ತುಪ್ಪ 1/4 ಕಪ್
- ಕೇಸರಿ ಹಾಕಿ ನೆನೆಸಿದ ಹಾಲು 2 ಸ್ಪೂನ್
- ದ್ರಾಕ್ಷಿ ಮತ್ತು ಗೋಡಂಬಿ
- ಮಾವಿನ ಹಣ್ಣಿನ ರಸ 3/4 ಕಪ್

***ಮಾಡುವ ವಿಧಾನ***

- ಮೊದಲು ಒಂದು ಮಾವಿನ ಹಣ್ಣು ತೆಗೆದುಕೊಂಡು ಅದರ ಪಲ್ಪ್ ತೆಗೆದು ಮಿಕ್ಸ್ ರ್ ನಲ್ಲಿ ರುಬ್ಬಿ ತೆಗೆದಿಡಿ

- ಒಂದು ಬಾಣಲೆಗೆ 1/4 ಕಪ್ ತುಪ್ಪ ಹಾಕಿ ಸ್ವಲ್ಪ ಬಿಸಿಯಾದ ಮೇಲೆ ಗೋಡಂಬಿ ಮತ್ತು ದ್ರಾಕ್ಷಿಯನ್ನು ಸ್ವಲ್ಪ ಹುರಿದು ತೆಗೆದಿಡಿ.

- ಅದೇ ತುಪ್ಪಕ್ಕೆ ರವೆಯನ್ನು ಹಾಕಿ ಪರಿಮಳ ಬರುವವರೆಗೆ ಹುರಿದುಕೊಳ್ಳಿ. ನಂತರ ಗ್ಯಾಸ್ ಆರಿಸಿ ರವೆಯನ್ನು ಒಂದೆರಡು ನಿಮಿಷ ಆರಲು ಬಿಡಿ.

- ನಂತರ ಮೇಲೆ ಹೇಳಿದ ಅಳತೆಯಲ್ಲಿ ಹಾಲು ನೀರು ಹಾಕಿ ಕಲಸಿ ಗ್ಯಾಸ್ ಹಚ್ಚಿ ಚೆನ್ನಾಗಿ ಮಧ್ಯಮ ಉರಿಯಲ್ಲಿ ಮುಚ್ಚಿ ಬೇಯಿಸಿ.

- ನಂತರ ಅದು ಬೆಂದ ಮೇಲೆ ಅದಕ್ಕೆ ಮಾವಿನ ಹಣ್ಣಿನ ಪಲ್ಪ್, ಸಕ್ಕರೆ ಮತ್ತು ಕೇಸರಿ ಹಾಲು ಹಾಕಿ ಅದು ಗಟ್ಟಿಯಾಗುವವರೆಗೆ ಮುಚ್ಚಿ ಸಣ್ಣ ಉರಿಯಲ್ಲಿ ಬೇಯಿಸಿ.

- ನಡುವೆ ಒಂದು ಸ್ಪೂನ್ ತುಪ್ಪ ಹಾಕಿ ಚೆನ್ನಾಗಿ ಕಲಸಿ ಅದು ಚೆನ್ನಾಗಿ ಬೆಂದ ಮೇಲೆ ರುಚಿಯಾದ ಮಾವಿನ ಹಣ್ಣಿನ ಕೇಸರಿಭಾತ್ ಸವಿಯಲು ಸಿದ್ಧ.





## ಮಾವಿನ ಕಾಯಿಯ ಸಿಹಿ ಉಪ್ಪಿನಕಾಯಿ

*ಸಂಭ್ರಿತ ಘೋಷ್ (ಅನುವಾದ : ಲಕ್ಷ್ಮಿ ಕೊಲಾಲ್)*

### ಬೇಕಾಗುವ ಪದಾರ್ಥಗಳು

- ಒಂದು ಚಮಚ ಸೋಂಫ್
- ಒಂದು ಚಮಚ ಜೀರಿಗೆ
- ಅರ್ಧ ಚಮಚ ಮೆಂತ್ಯ
- ಎರಡು ಒಣಗಿದ ಕೆಂಪು ಮೆಣಸಿನಕಾಯಿ
- ಉಪ್ಪು ..ರುಚಿಗೆ ತಕ್ಕಂತೆ
- ಪುಡಿಮಾಡಿದ ಬೆಲ್ಲ ೩೦೦ ಗ್ರಾಮ್ಸ್ .
- ಅರಿಸಿನ ಎರಡು ಚಮಚ.
- ಒಂದು K G ಮಾವಿನಕಾಯಿ.
- ಸಾಸಿವೆ ಎಣ್ಣೆ ೪ ಚಮಚ

**ಈ ಸಾಮಗ್ರಿ ಗಳನ್ನು ಒಂದು ಮಿಕ್ಸರ್ ಜಾರಿನಲ್ಲಿ ಹಾಕಿ ಪುಡಿಮಾಡಿಕೊಳ್ಳಬೇಕು**. ಒಂದು ಚಮಚ ಸೋಂಫ್, ಒಂದು ಚಮಚ ಜೀರಿಗೆ, ಒಂದು ಚಮಚ ಕಪ್ಪು ಜೀರಿಗೆ, ಅರ್ಧ ಚಮಚ ಮೆಂತ್ಯ ಮತ್ತು ಎರಡು ಒಣಗಿದ ಕೆಂಪು ಮೆಣಸಿನಕಾಯಿ.

### ಮಾಡುವ ವಿಧಾನ

ಮಾವಿನ ಕಾಯನ್ನು ಸಿಪ್ಪೆ ಸಮೇತ ಚಿಕ್ಕ ಹೋಳುಗಳಾಗಿ ಕತ್ತರಿಸಿಕೊಳ್ಳಬೇಕು. ನಂತರ ಈ ಹೋಳುಗಳನ್ನು ಚೆನ್ನಾಗಿ ನೀರಿನಲ್ಲಿ ಬೇಯಿಸಿಕೊಳ್ಳಬೇಕು. ಸ್ವಲ್ಪ ಮೆತ್ತಗಾದ ನಂತರ ಬೇಯಿಸಿದ ನೀರಿನಿಂದ ಹೋಳುಗಳನ್ನು ತೆಗೆಯಬೇಕು. ಇನ್ನೊಂದು ಕಡಾಯಿಯಲ್ಲಿ ಸಾಸಿವೆ ಎಣ್ಣೆಯನ್ನು ಹಾಕಿ, ಕಾದ ನಂತರ ಜೀರಿಗೆ, ಸೋಂಫ್, ಕಪ್ಪು ಜೀರಿಗೆ , ಮೆಂತ್ಯ ಮತ್ತು ಒಣ ಮೆಣಸಿನಕಾಯನ್ನು ಸಣ್ಣ ಉರಿಯಲ್ಲಿ ಹುರಿಯಬೇಕು. ನಂತರ ಬೆಂದ ಮಾವಿನ ಕಾಯಿ ಹೋಳುಗಳು, ಉಪ್ಪು, ಅರಿಸಿನ ಹಾಕಿ ಹುರಿಯಬೇಕು. ಒಂದು ಬಟ್ಟಲು ನೀರಿನಲ್ಲಿ ಪುಡಿಮಾಡಿದ ಬೆಲ್ಲವನ್ನು ಕರಗಿಸಿ.. ಬೆಲ್ಲದ ನೀರನ್ನು ಕಡಾಯಿಯಲ್ಲಿ ನಿಧಾನವಾಗಿ ಹಾಕುತ್ತಾ ಒಂದು ಬಾರಿ ಕುದಿಸಬೇಕು. ಮಾವಿನ ಹೋಳುಗಳು ಬಂದ ಮೇಲೆ ಪುಡಿ ಮಾಡಿಟ್ಟುಕೊಂಡ ಸೋಂಫ್, ಜೀರಿಗೆ , ಮೆಂತ್ಯ ಪುಡಿಯ ಮಿಶ್ರಣವನ್ನು ಬೆರೆಸಬೇಕು .

**ಈಗ ಮಾವಿನ ಕಾಯಿಯ ಸಿಹಿ ಉಪ್ಪಿನ ಕಾಯಿ ಸವಿಯಲು ಸಿದ್ಧ .**





## ಮಾವಿನ ಅಪ್ಪ

*ಲೀಲಾವತಿ ಅಡಿಗ*

- ***ಬೇಕಾಗುವ ಪದಾರ್ಥಗಳು :***
- ಒಂದು ಕಪ್ ಕಾಯಿ ತುರಿ,
- ಅರ್ಧ ಕಪ್ ಬೆಲ್ಲ,
- ಅರ್ಧ ಮಾವಿನಹಣ್ಣು

.

### ಮಾಡುವ ವಿಧಾನ

ಎಲ್ಲಾ ಪದಾರ್ಥಗಳನ್ನು ಮಿಕ್ಸಿಗೆ ಹಾಕಿ ನುಣ್ಣಗೆ ಅರೆಯಬೇಕು.
ಅರ್ಧ ಚಮಚ ಉಪ್ಪು ಸೇರಿಸಿ, ಅರೆದು ತೆಗೆದ ನಂತರ,
1 ಕಪ್ ಸಣ್ಣ ರವೆ ಮತ್ತು ಕಾಲು ಕಪ್ ಮೈದಾ ಹಾಕಿ
ಗಟ್ಟಿಯಾಗಿ ಕಲಸಿ ಕೊಳ್ಳಬೇಕು.
1 ಗಂಟೆಯ ಬಳಿಕ, ಕಾಯಿ ಅಪ್ಪದ ತರ ಎಣ್ಣೆ ಒರೆಸಿಕೊಂಡ
ಬಾಳೆ ಎಲೆ ಅಥವಾ ಬೇಕಿಂಗ್ ಪೇಪರ್ ಮೇಲೆ ತಟ್ಟಿ, ಎಣ್ಣೆಗೆ ಬಿಡಬೇಕು.
ಹದಾ ಉರಿಯಲ್ಲಿ ಎರಡೂ ಕಡೆ ಕಾಯಿಸಬೇಕು,
ಪೂರಿ ತರಹ ಉಬ್ಬಿ ಬರುತ್ತದೆ.



# ಬೃಂದಾವನ ಕನ್ನಡ ಶಾಲೆಗಳ ಮಕ್ಕಳ ಕೈ ಬರಹಗಳು



ಆರುಷ್ ಜಾಡರ್

## ಬೇಸಿಗೆ ರಜಾ - ಮಜಾ!!

ಬೇಸಿಗೆ ರಜೆ ಅಂದ್ರೆ ನನಗೆ ತುಂಬಾ ಇಷ್ಟ! ನಾನು ನನ್ನ ಕುಟುಂಬ ತುಂಬಾ activities ಮಾಡುತ್ತೀವಿ. ಈ ವರ್ಷ ಬೇಸಿಗೆ ರಜೆಗಳಿಗೆ ನಾನು ತುಂಬಾ ಆತುರದಿಂದ ಕಾಯ್ತಾ ಇದ್ದೀನಿ. ಯಾಕೆ ಗೊತ್ತಾ? ಹೋದ ವರ್ಷ Corona Pandemic ಶುರು ಆಗಿ ನಮ್ಮೆಲ್ಲಾ ಮನೇಲಿ ಕೂಡಿ ಹಾಕಿಬಿಟ್ತು. ಈ ಬೇಸಿಗೆ ರಜೇಲಿ ಎಲ್ಲಾ activity ನ ನಾನು ನನ್ನ ತಂದೆ ಜೊತೆ ಸೇರಿ plan ಮಾಡಿದ್ದೇ. ಬೇಸಿಗೆಯಲ್ಲಿ ನನಗೆ ಇಷ್ಟವಾದ activities ಅಂದ್ರೆ camping, rafting, biking, ಮತ್ತೆ hiking.

Camping ನಲ್ಲಿ campsite ಗೆ ಹೋಗಿ, ನಾನು, ಅಣ್ಣಾ ಮತ್ತು ಅಪ್ಪಾ ನಮ್ಮ tent setup ಮಾಡ್ತೀವಿ. ಅದರಲ್ಲಿ ನನ್ನ sleeping bag ಮತ್ತು sleeping pad ಎಲ್ಲಾ ready ಮಾಡ್ತೀನಿ. ಸ್ವಲ್ಪ ಹೊತ್ತು friends ಜೊತೆ ಆಟ ಆಡಿ, ಸಾಯಂಕಾಲ ನಾವೆಲ್ಲ ಸೇರಿ campfire setup ಮಾಡ್ತೀವಿ. ಅಮ್ಮ ಊಟಕ್ಕೆ ತಯಾರಿ ಮಾಡ್ತಾರೆ. ಊಟ ಆದ ನಂತರ campfire ಶುರು ಮಾಡಿ, ಎಲ್ಲಾರು s'mores ಮಾಡಿ ತಿಂದು enjoy ಮಾಡ್ತೀವಿ!!

Whitewater rafting ತುಂಬಾ challenging ಮತ್ತು intresting activity. ಅದರಲ್ಲಿ life vest ಹಾಕಿಕೊಂಡು, raft ಮತ್ತು paddle ತೆಗೆದುಕೊಂಡು ನೀರಿನಲ್ಲಿ row ಮಾಡ್ಬೇಕು. ಅಪ್ಪ ಯಾವಾಗಲೂ steering ಮಾಡ್ತಾರೆ, ನಾವೆಲ್ಲಾ ಸೇರಿ row ಮಾಡ್ತೀವಿ. ಅಷ್ಟೇ ಅಲ್ಲ, ನನ್ನ friends ಗೆಲ್ಲಾ bucket ನಿಂದ ನೀರು spray ಮಾಡ್ತೀವಿ. ಎಷ್ಟೊಂದು ಮಜಾ ಬರುತ್ತೆ ಗೊತ್ತಾ? ಮಧ್ಯಾನ್ನ pack ಮಾಡಿದ್ದ ಊಟ ಮಾಡಿ ಮತ್ತೆ ಸ್ವಲ್ಪ ಹೊತ್ತು ನೀರಿನಲ್ಲಿ raft ಮಾಡಿ ವಾಪಸ್ ಬರ್ತೀವಿ.

ಚಳಿಗಾಲದಲ್ಲಿ ಯಾವಾಗಲೂ ಮನೆಯಲ್ಲಿ ಆಟ ಆಡಿ, ಹೊರಗೆ ಹೋಗದೆ ಬೇಜಾರು. ಅದಕ್ಕೆ..... ಬೇಸಿಗೆ ರಜಾ ಅಂದ್ರೆ ಬರೀ ಮಜಾ!!

# ಬೃಂದಾವನ ಕನ್ನಡ ಶಾಲೆಗಳ ಮಕ್ಕಳ ಕೈ ಬರಹಗಳು



ಆರುಷ್ ಮೈನಂಪಾಟಿ


## ನನ್ನ ಬೇಸಿಗೆಯ ರಜೆ

ನನ್ನ ಈ ಬೇಸಿಗೆಯ ಪ್ರವಾಸವನ್ನು ಒಂದು ಬಿಳಿಯ ಮರಳು ಮತ್ತು ಬೆಚ್ಚನೆಯ ನೀರಿರುವ ಸಮುದ್ರತೀರದಲ್ಲಿ ಕಳೆಯಲು ಆಸೆ ಪಡುತ್ತೇನೆ. ತೀರದ ಹತ್ತಿರ ನಮ್ಮ ಹೋಟೆಲ್ ಇದ್ದರೆ ದಿನಾ ಸಮುದ್ರದ ನೀರಿನಲ್ಲಿ ಆಡಲು ಹೋಗುವುದು ಸುಲಭವಾಗುತ್ತದೆ.

ನನಗೆ ಪ್ರಪಂಚದ ಎಲ್ಲಾ ಮುಖ್ಯವಾದ ಪರ್ವತಗಳು, ಸಮುದ್ರಗಳು, ನದಿಗಳು ಮುಂತಾದ ಜಾಗಗಳನ್ನು ನೋಡುವ ಆಸೆ ಇದೆ.


ಮನೆಯಲ್ಲೇ ರಜಾ ದಿನಗಳನ್ನು ಕಳೆಯಬೇಕಾದರೆ X-box ಆಡೋದು, ಸೈಕಲ್ಲು ಹೊಡೆಯುವುದು, ಸ್ಕೇಟ್ ಬೋರ್ಡ್ ಆಡುವುದು ಮತ್ತು ಸ್ನೇಹಿತರ ಜೊತೆ ಆಟಗಳನ್ನು ಆಡಲು ಇಷ್ಟ. ಕತೆ ಪುಸ್ತಕಗಳನ್ನು ಓದಿ ನನ್ನ ತಮ್ಮನಿಗೆ ಕಥೆ ಹೇಳುತ್ತೇನೆ

# ಮಕ್ಕಳ ಕೈಯಲ್ಲಿ ಅರಳಿದ ಕಲೆ






**ಸಾರ್ಥಕ್ ರಾವ್**



# ಮಕ್ಕಳ ಕೈಯಲ್ಲಿ ಅರಳಿದ ಕಲೆ



ದಿಯಾ ರಜನೀಶ



# ಮಕ್ಕಳ ಕೈಯಲ್ಲಿ ಅರಳಿದ ಕಲೆ



ಸಮರ್ಥ್ ರಾವ್






ಹಿತಾರ್ಥ್ ಚಂದ್ರ





# ಮಕ್ಕಳ ಕೈಯಲ್ಲಿ ಅರಳಿದ ಕಲೆ

ತನುಷ್ ಶಾಸ್ತ್ರಿ



# ಮಕ್ಕಳ ಕೈಯಲ್ಲಿ ಅರಳಿದ ಕಲೆ



ಅನ್ವಿತಾ








# ಛಾಯಾ ಚಿತ್ರಗಳು

ಚಂದ್ರ






ಭಾಸ್ಕರ್ ತೈಲಿಗೇರಿ



# ಛಾಯಾ ಚಿತ್ರಗಳು

ಭಾಸ್ಕರ್ ತೈಲಿಗೇರಿ





# ಛಾಯಾ ಚಿತ್ರಗಳು

ಪಲ್ಲವಿ

"









# ಛಾಯಾ ಚಿತ್ರಗಳು

ಪ್ರೀತಿ ಹುಲಿಕೆರೆಮಠ್








ಪ್ರೀತಿ ಹುಲಿಕೆರೆಮಠ್